

ಡಾ. ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ ಆಶೀರ್ವಾದಗಳೊಂದಿಗೆ

# ಆಲೋಚಿಸಿರಿ !

ತಟವರ್ತಿ ವೀರರಾಘವರಾವ್

ಅನುವಾದ : ಉಮಲೋಕೇಶ್

# ಆಲೋಚಿಸಿ

ಮೂಲ : ತಟವರ್ತಿ ವೀರರಾಘವರಾವು
ಕನ್ನಡ ಅನುವಾದ : ಕೃಷ್ಣಕುಮಾರಿ ಡಿ.ಹೆಚ್.
: ಉಮ ಲೋಕೇಶ್

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**ALOCHISI**

Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066.

**M.: 9449695503, 8050082689, 9886532204**

| | | |
|---|---|---|
| ಮೊದಲನೇ ಮುದ್ರಣ | : | 2023 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | **ಶ್ರೀರಾಮ ಪಬ್ಲಿಕೇಶನ್ಸ್**<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್,<br>ಬೆಂಗಳೂರು – 560 066<br>ಮೊ.: 9449695503, 9886532204 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 70/– |
| ಪುಟಗಳು | : | iv+68=72 |
| ಮುಖಪುಟ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು.

ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,

**ಎಚ್.ಎನ್.ಶ್ರೀನಿವಾಸ**
ಮತ್ತು
**ಎಸ್.ಎನ್.ವಿಜಯಲಕ್ಷ್ಮಿ**
**ಸಂಸ್ಥಾಪಕರು,**
ಶ್ರೀರಾಮಧಾಮ ಧ್ಯಾನಕೇಂದ್ರ

1

# ಆಲೋಚಿಸಿ

ಲೋಕದಲ್ಲಿ ಯಾರನ್ನು ನೋಡಿದರೂ, ಎಲ್ಲಿ ನೋಡಿದರೂ ಮುಖ್ಯವಾಗಿ, ಎರಡು ವಿಷಯಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ. ಅವು ಯಾವುವೆಂದರೆ

(1)ಸಂಪಾದಿಸುವುದು, (2)ಅನುಭವಿಸುವುದು.

ಇದಕ್ಕೂ ಮೀರಿ ಬೇರೆ ಆಲೋಚನೆಯೇ ಇಲ್ಲ.

ಅಂದರೆ, ಹೇಗೆ ಸಂಪಾದಿಸಬೇಕು? ಎಷ್ಟು ಹೆಚ್ಚಾಗಿ ಸಂಪಾದಿಸಬೇಕು? ಎನ್ನುವುದಕ್ಕೇ ಪ್ರಾಮುಖ್ಯತೆ ಕೊಡುತ್ತಿದ್ದಾರೆ. ನಂತರ ಸಂಪಾದಿಸಿದ್ದನ್ನು ಹೇಗೆ ಅನುಭವಿಸಬೇಕು ಯವ ರೀತಿಯಲ್ಲಿ ಅನುಭವಿಸಬೇಕು ಎನ್ನುವ ವಿಷಯಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ. ಆದ್ದರಿಂದಲೇ ದಿನದ ಹೆಚ್ಚು ಸಮಯವನ್ನು ಸಂಪಾದಿಸುವುದಕ್ಕೆ ಮೀಸಲಿಡುತ್ತಿದ್ದಾರೆ. ಖಾಲಿ ಸಮಯ ಸಿಕ್ಕಿದರೆ ಜೀವನವನ್ನು ಎಂಜಾಯ್ ಮಾಡಲು ನೋಡುತ್ತಿದ್ದಾರೆ. ಹೆಚ್ಚು ಕಡಿಮೆ ಎಲ್ಲರ ಪರಿಸ್ಥಿತಿ ಹೀಗೆ ಇದೆ.

ಮಾನವ ಜೀವನದಲ್ಲಿ ಅದಕ್ಕಿಂತಲೂ ಯೋಚಿಸುವುದು ಇಲ್ಲವೇ? ಖಂಡಿತವಾಗಿಯೂ ಇದೆ. ಒಂದು ರೀತಿಯಾಗಿ ಹೇಳಬೇಕೆಂದರೆ ಆಲೋಚಿಸುವ ವಿಷಯಗಳು ಎಷ್ಟೋ ಇವೆ. ಅವೆಲ್ಲವನ್ನೂ ಯೋಚಿಸದೆ ಹೋಗಿದ್ದರಿಂದ ಮಾನವನ ಜೀವನದಲ್ಲಿ ದುಃಖವು ತಾಂಡವವಾಡುತ್ತಿದೆ. ಅಂದರೆ ಎಲ್ಲರ ಜೀವನದಲ್ಲಿಯೂ ದುಃಖವು ಕಾಣಿಸುತ್ತಿದೆ. ಅಂದರೆ, ಒಂದು ರೀತಿಯಾಗಿ ಸಮಸ್ಯೆಗಳು ಇಲ್ಲದೆ ಇರುವವರು ಕಾಣುತ್ತಿಲ್ಲ. ಏನೊ ಸ್ವಲ್ಪ ಕಾಲ ಜೀವನವು ಚೆನ್ನಾಗಿರುವ ಹಾಗೆ ಕಂಡರೂ.... ಮತ್ತೆ ಏನೋ ಒಂದು ಸಮಸ್ಯೆಯಲ್ಲಿ ಸಿಲುಕಿ ಕೊಳ್ಳುತ್ತಿದ್ದಾರೆ.

ಹಾಗೆ ನೋಡಿದರೆ ಕೆಲವರು .......ಕೆಲವು ಜನರೇನು... ತುಂಬಾ ಜನ ಆರೋಗ್ಯ ಸಮಸ್ಯೆಯಿಂದ ಅಂದರೆ ವಿಧ ವಿಧವಾದ ರೋಗಗಳಿಂದ ಸಂಕಟ ಪಡುತ್ತಿದ್ದಾರೆ, ಮತ್ತೆ ಕೆಲವರು ಕುಟುಂಬ ಸಮಸ್ಯೆಗಳಿಂದ ಕಷ್ಟ ಪಡುತ್ತಿದ್ದಾರೆ. ಒಂದು ರೀತಿಯಾಗಿ ನೋಡಿದರೆ ಯಾವ ಕುಟುಂಬದಲ್ಲಿ ನೋಡಿದರೂ ಬಾಂಧವ್ಯಗಳು ಸರಿಯಾಗಿಲ್ಲ. ಎಷ್ಟೋ ಕುಟುಂಬಗಳಲ್ಲಿ ಗಂಡ– ಹೆಂಡತಿಯರ ಮಧ್ಯೆ ಭಾಂದವ್ಯಗಳು ಸರಿಯಿಲ್ಲ. ಇದ್ದರೂ ಅತ್ತೆ ಮಾವಂದಿರ ಮಧ್ಯೆಯಾಗಲಿ, ಮಕ್ಕಳ ಜೊತೆಯಾಗಲಿ, ಅಣ್ಣ–ತಮ್ಮಂದಿರ ಮಧ್ಯೆ ಸರಿಯಾದ ಭಾಂದವ್ಯಗಳು ಕಾಣಿಸುತ್ತಿಲ್ಲ. ಇನ್ನು ಕೆಲವರು ಆರ್ಥಿಕ ಸಮಸ್ಯೆಗಳಿಂದ ಬೇಸತ್ತಿದ್ದಾರೆ. ಕೆಲವರು ವಾರ್ಧಕ್ಯ ಸಮಸ್ಯೆಗಳಿಂದ ಕಷ್ಟವನ್ನು ಪಡುತ್ತಿದ್ದಾರೆ. ಇನ್ನೂ ಕೆಲವರು ಕೆಲಸಕ್ಕೆ ಬಾರದ ಅಭ್ಯಾಸ ಗಳಿಂದ ಅಂದರೆ ಕುಡಿಯುವುದರಿಂದ, ಇಸ್ಪೀಟ್ ಆಡುವುದರಿಂದ, ವ್ಯಭಿಚಾರ, ಗುಟ್ಕಾ ಮತ್ತು ಅಮಲಿನ ಪದಾರ್ಥಗಳಂತಹವುಗಳಿಂದ ಅನೇಕ ಕಷ್ಟಗಳಿಗೆ ಗುರಿ ಯಾಗುತ್ತಿದ್ದಾರೆ. ಹೀಗೆ

ಯಾರನ್ನು ನೋಡಿದರೂ ಏನೋ ಒಂದು ಸಮಸ್ಯೆಯಿದೆ. ಇನ್ನೂ ಕೆಲವರು ಒಂದಕ್ಕಿಂತಲೂ ಹೆಚ್ಚು ಸಮಸ್ಯೆಗಳಿಂದ ಬಾಧೆ ಪಡುತ್ತಿದ್ದಾರೆ.

ಆಲೋಚಿಸಿ ಹೀಗೆ ಸಮಸ್ಯೆಗಳ ಜೊತೆ ಇರುವವರಿಗೆ ಶಾಂತಿ ಎಲ್ಲಿರುತ್ತದೆ? ಆದ್ದರಿಂದ ಯಾರಿಗೂ ಮನ:ಶಾಂತಿಯಿಲ್ಲ. ಒಂದು ರೀತಿಯಾಗಿ ನೋಡಿದರೆ ಎಲ್ಲರಿಗೂ ಎಲ್ಲಾ ಇವೆ ಆದರೆ ಶಾಂತಿಯಿಲ್ಲ. ಇದು ಪ್ರಸ್ತುತ ಪ್ರಪಂಚ ಸ್ಥಿತಿ.

ಒಂದು ರೀತಿಯಾಗಿ ನೋಡಿದರೆ ಸಮಸ್ಯೆ ಅನ್ನುವುದು ಯಾರಿಗಾದರೂ ಕಾಡುವುದೇ... ಆದ್ದರಿಂದ ಸಹಜವಾಗಿಯೇ ಸಮಸ್ಯೆಗಳಿಂದ ಹೊರ ಬರುವುದಕ್ಕೆ ಪ್ರಯತ್ನಿಸುತ್ತಾ ಇರುತ್ತಾರೆ. ಆದರೆ ಎಷ್ಟೇ ಪ್ರಯತ್ನಿಸಿದರೂ ಸಮಸ್ಯೆಗಳಿಂದ ಹೊರಬರುವುದು ಅಷ್ಟು ಸುಲಭವಾದ ವಿಷಯವಾಗಿ ಕಾಣುವುದಿಲ್ಲ. ಸಮಸ್ಯೆಗೆ ಕಾರಣ ಏನೆಂದು ಅವರಿಗೆ ಅರ್ಥವಾಗುವುದಿಲ್ಲ. ಅವರು ಮಾಡುವ ಪ್ರಯತ್ನಗಳಿಂದ... ಒಂದು ಸಮಸ್ಯೆಯಿಂದ ಹೊರಬಂದಂತೆ ಕಾಣಿಸಿದರೂ ಮತ್ತೆ ಮತ್ತೆ ಇನ್ನೊಂದು ಸಮಸ್ಯೆಯಲ್ಲಿ ಸಿಲುಕಿಕೊಳ್ಳುತ್ತಿದ್ದಾರೆ. ಆದ್ದರಿಂದ ಏನು ಮಾಡಬೇಕೊ ತಿಳಿಯದೆ ದೇವರನ್ನು ಅಂದರೆ ತಮಗೆ ಇಷ್ಟವಾದ ದೈವವನ್ನು ಪ್ರಾರ್ಥಿಸುವುದೋ ಪೂಜಿಸುವುದೋ , ಭಜನೆ ಮಾಡುವುದೋ , ನಮಾಜ್ ಮಾಡುವುದನ್ನೋ ಮಾಡುತ್ತಿದ್ದಾರೆ. ಕೆಲವರು ತಮಗೆ ಇಷ್ಟವಾದ ಗುರುಗಳನ್ನು, ಸ್ವಾಮೀಜಿಗಳನ್ನು, ಬಾಬಾಗಳನ್ನು ಆಶ್ರಯಿಸುತ್ತಿದ್ದಾರೆ. ಅವರು ಕೂಡ ವಿಧ ವಿಧವಾದ ಸಾಧನೆಗಳನ್ನು ಮಾಡಿಸುತ್ತಾರೆ, ವಿವಿಧ ಮಾರ್ಗಗಳು, ವಿವಿಧ ಬೋಧನೆಗಳನ್ನು ಮಾಡುತ್ತಿದ್ದಾರೆ. ಯಾವುದು ಏನಾದರೂ, ಎಷ್ಟೇ ಪ್ರಯತ್ನಿಸಿದರೂ, ಎಷ್ಟು ಪ್ರಾರ್ಥನೆಗಳನ್ನು ಮಾಡಿದರೂ, ಎಷ್ಟೇ ಆರಾಧನೆಗಳನ್ನು ಮಾಡಿದರೂ, ಸಮಸ್ಯೆಗಳು ಸಮಸ್ಯೆಗಳಾಗಿಯೇ ಇರುತ್ತಿವೆ. ಇದಕ್ಕೆ ಕಾರಣವೇನು? ಈ ವಿಷಯವನ್ನು ಪ್ರತಿಯೊಬ್ಬರು ಖಂಡಿತ ವಾಗಿಯೂ ಆಲೋಚಿಸಬೇಕು.

ಇದಕ್ಕೆ ಮುಖ್ಯ ಕಾರಣ ಮಾನವರು ಯೋಚಿಸದೆ ಹೋಗಿರುವುದು.. ಆದ್ದರಿಂದ ಮುಖ್ಯವಾಗಿ ಆಲೋಚಿಸಬೇಕು. ಏಕೆಂದರೆ ಮಾನವರು ಜೀವನದಲ್ಲಿ ಆಲೋಚಿಸಬೇಕಾದವು ತುಂಬಾ ಇವೆ. ಯಾವುದನ್ನೂ ಆಲೋಚಿಸದೆ ಇದ್ದುದರಿಂದಲೆ ಜೀವನವು ಅಸ್ತವ್ಯಸ್ತವಾಗಿ ಇರುವುದಕ್ಕೆ ಕಾರಣ. ಕನಿಷ್ಠ ಪಕ್ಷ ಕೆಲವನ್ನಾದರೂ ಆಲೋಚಿಸಬೇಕು. ಎಲ್ಲದರ ಬಗ್ಗೆ ಆಲೋಚಿಸಿದರೇನೆ ಜೀವನವು ಸರಿಯಾಗಿರುತ್ತದೆ. ಆಗ ಸಮಸ್ಯೆಗಳು ಇಲ್ಲದೆ ಇರುತ್ತದೆ. ಅಷ್ಟೇ ಅಲ್ಲದೆ ಸರಿಯಾಗಿ ಆಲೋಚಿಸಿದರೆ ಈ ಸಮಸ್ಯೆಗಳಿಂದ ಶಾಶ್ವತವಾಗಿ ಕೂಡ ಹೊರ ಬರಬಹುದು. ಆದ್ದರಿಂದ ಮಾನವರು ಆಲೋಚಿಸ ಬೇಕಾದದ್ದು ಏನೋ ಕೆಲವನ್ನು ನೋಡೋಣ.

ಲೋಕದಲ್ಲಿ ಮಾನವರನ್ನು ಗಮನಿಸಿದರೆ ಹೆಚ್ಚು ಕಡಿಮೆ ಯಾರು ಯಾವ ಕೆಲಸ ಮಾಡಿದರು ಮೂರು ಕಾರಣಗಳು ಕಾಣಿಸುತ್ತವೆ.

(1)ಹಿಂದಿನ ಕಾಲದಿಂದ , ತಲೆಮಾರುಗಳಿಂದ ಆಚಾರವಾಗಿ ಬರುತ್ತಿದೆ ಎಂದು ಮಾಡುತ್ತಿದ್ದಾರೆ.

(2)ಎಲ್ಲರೂ ಮಾಡುತ್ತಿದ್ದಾರೆಂದು ಮಾಡುತ್ತಿದ್ದಾರೆ.

(3)ಯಾರೋ ಹೇಳಿದರೆಂದು ಮಾಡುತ್ತಿದ್ದಾರೆ. ಅಷ್ಟೇ ಹೊರತು ಯಾರೂ ಆಲೋಚಿಸಿ ಮಾಡುತ್ತಿಲ್ಲ. ಇದು ಅವರಾಗಿ ಗಮನಿಸಿದರೆ ತಿಳಿಯುತ್ತದೆ.

ಮಾನವನ ದುಃಖಕ್ಕೆ ಕಾರಣವಿದೆ. ಏಕೆಂದರೆ ಯಾವ ರೀತಿಯಾಗಿ ನೋಡಿದರೂ ಮಾನವರು ಇತರರನ್ನು ಅನುಕರಿಸುತ್ತಿದ್ದಾರೆ. ಅಂದರೆ ಇತರರು ಏನು ಮಾಡಿದರೆ ಅದನ್ನೇ ಮಾಡುತ್ತಿದ್ದಾರೆ. ಏನು ಹೇಳಿದರೆ ಅದನ್ನೇ ಮಾಡುತ್ತಿದ್ದಾರೆ. ಅಷ್ಟೇ ಹೊರತು ಯಾರೂ ತಾವು ಮಾಡುತ್ತಿರುವ ಕೆಲಸದ ಬಗ್ಗೆ ಆಲೋಚಿಸುತ್ತಿಲ್ಲ. ಆದರೆ ಆಲೋಚಿಸಬೇಕು. ಆದರೆ ಆ ಕೆಲಸವನ್ನು ತಾನು ಏಕೆ ಮಾಡುತ್ತಿದ್ದೇನೆ? ಅದು ಸರಿಯಾದದ್ದಲ್ಲವೇ? ಆ ಕೆಲಸವು ಸೃಷ್ಟಿ ಧರ್ಮಕ್ಕೆ ಅನುಗುಣವಾಗಿ ಇದೆಯೇ ? ಇಲ್ಲವೇ ? ಆ ಕೆಲಸ ಮಾಡಿದರೆ ತಾನು ಆಶಿಸಿದ ಫಲವು ಬರುತ್ತದೆಯೇ ? ಇಲ್ಲವೇ ? ಒಂದು ವೇಳೆ ಬರುತ್ತದೆ ಎಂದು ಭಾವಿಸಿದರೆ, ಹೇಗೆ ಬರುತ್ತದೆ? ಎಷ್ಟು ಬರುತ್ತದೆ? ಎನ್ನುವುದನ್ನು ಆಲೋಚಿಸಬೇಕು. ಕನಿಷ್ಟಪಕ್ಷ ಆ ಕೆಲಸವನ್ನು ಮಾಡುವಾಗಲಾದರೂ ಆಲೋಚಿಸಬೇಕು. ಹಾಗೆ ಆಲೋಚಿಸಿದಾಗ ಯಾರಾದರೂ ಮಾಡಿದ ಕೆಲಸದಲ್ಲಿ ಒಳ್ಳೆಯ ಫಲಿತಗಳನ್ನು ಹೊಂದುತ್ತಾರೆ, ಜೀವನದಲ್ಲಿ ಲಾಭಗಳನ್ನು ಹೊಂದುತ್ತಾರೆ, ಆನಂದವನ್ನು ಹೊಂದುತ್ತಾರೆ. ಆದರೆ ಹಾಗೆ ಆಲೋಚಿಸದೆ ಮಾಡುವವರು, ಇತರರನ್ನು ಕುರುಡಾಗಿ ಅನುಕರಿಸುವವರು ಹೆಚ್ಚಾಗಿ ನಷ್ಟ ಹೊಂದಬೇಕಾಗಿರುತ್ತದೆ.

ಯಾರಾದರೂ ಜೀವನದಲ್ಲಿ ಲಾಭವನ್ನು ಹೊಂದಿದರೆ ಅನುಕರಿಸಬಾರದು! ಆಲೋಚಿಸಬೇಕು! ಮತ್ತು ಮಾನವರು ಏಕೆ ಆಲೋಚಿಸಿ ಮಾಡುತ್ತಿಲ್ಲ? ಏಕೆ ಅನುಕರಿಸುತ್ತಿದ್ದಾರೆ? ಇದಕ್ಕೆ ಮುಖ್ಯ ಕಾರಣ, ಮಾನವನಲ್ಲಿಯ ಆಲೋಚನಾ ಶಕ್ತಿ ಇಲ್ಲದಿರುವುದು. ಅಂದರೆ ಬುದ್ಧಿ ಸರಿಯಾಗಿ ಕೆಲಸ ಮಾಡದೇ ಹೋಗಿರುವುದು. ಇದಕ್ಕೆ ಮುಖ್ಯ ಕಾರಣ ಮಾನವರು.

(1) ಆಹಾರ ನಿಯಮಗಳನ್ನು ಪಾಲಿಸದಿರುವುದು.

(2)ಧ್ಯಾನ ಮಾಡದೇ ಇರುವುದು.

ಎರಡನ್ನು ಯಾರಾದರೂ ಪಾಲಿಸದೆ ಹೋದರೆ ಅವರು ಮಂದ ಬುದ್ಧಿಯವರಾಗುತ್ತಾರೆ, ಆಲೋಚನಾ ಶಕ್ತಿ ಕಡಿಮೆಯಾಗುತ್ತದೆ. ಆಗ ಬೇರೆ ದಾರಿ ಇಲ್ಲದೆ ಎಲ್ಲರನ್ನೂ ಅನುಕರಿಸುತ್ತಾರೆ. ಹಾಗೆ ಅನುಕರಿಸುವವರು, ಬೇರೆಯವರ ಸ್ವಾರ್ಥದಿಂದ ಅವರು ನಷ್ಟ ಹೊಂದಬೇಕಾಗಿ ಬರುತ್ತದೆ. ಆದರೆ ತನ್ನನ್ನು ತಾನು ಅಂದರೆ ಅವರನ್ನು ಅವರೇ ಅನುಕರಿಸಿದಾಗ ಸ್ವತಂತ್ರವಾಗಿ ಆಲೋಚಿಸಿದಾಗ ಯಾವಾಗಲೂ ನಷ್ಟ

ಹೊಂದುವುದಿಲ್ಲ, ಲಾಭವನ್ನೇ ಹೊಂದುತ್ತಾರೆ. ಆದ್ದರಿಂದ ಯಾವಾಗಲೂ ಅನುಕರಿಸಬೇಡಿ– ಆಲೋಚಿಸಿ, ಆಲೋಚಿಸುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ. ಬುದ್ಧಿಯನ್ನು ವಿಕಸಿತ ಗೊಳಿಸಿಕೊಳ್ಳಿ, ಬುದ್ಧಿ ಬಲವನ್ನು ಹೆಚ್ಚಿಸಿಕೊಳ್ಳಿ. ಅದಕ್ಕಾಗಿ:

(1) ನಿತ್ಯವೂ 'ಧ್ಯಾನ' ಸಾಧನೆ ಮಾಡಬೇಕು

(2) 'ಸಾತ್ವಿಕವಾದ ಶಾಖಾಹಾರವನ್ನು' ತೆಗೆದುಕೊಳ್ಳಿ,

ಇದಕ್ಕೂ ಮೀರಿ ಬೇರೆ ಮಾರ್ಗವಿಲ್ಲ.

## ಮಾನವನು ಯಾವುದರ ಬಗ್ಗೆ ಆಲೋಚಿಸಬೇಕು?

ಮುಖ್ಯವಾಗಿ ಮಾನವನು ಮೂರು ವಿಷಯಗಳ ಬಗ್ಗೆ ಆಲೋಚಿಸಬೇಕು.

(1) ತಾನು ಇದ್ದಾನೆ ಆದ್ದರಿಂದ ತನ್ನ ಬಗ್ಗೆ, ತನ್ನ ಜೀವನದ ಬಗ್ಗೆ, ತಾನು ಮಾಡುವ ಕರ್ಮದ ಬಗ್ಗೆ ಆಲೋಚಿಸಬೇಕು.

(2) ತಾನು ಈ ಸೃಷ್ಟಿಯಲ್ಲಿ ಜೀವಿಸುತ್ತಿದ್ದಾನೆ ಆದ್ದರಿಂದ ಈ ಸೃಷ್ಟಿಯ ಬಗ್ಗೆ, ಸೃಷ್ಟಿ ನಿಯಮಗಳ ಬಗ್ಗೆ ಆಲೋಚಿಸಬೇಕು.

(3) ಈ ಸೃಷ್ಟಿಯನ್ನು ಸೃಷ್ಟಿ ಮಾಡಿದ ಸೃಷ್ಟಿಕರ್ತ ಅಂದರೆ ಭಗವಂತನಿದ್ದಾನೆ ಆದ್ದರಿಂದ ಆತನ ಬಗ್ಗೆ, ಆತನ ಶಕ್ತಿಯ ಬಗ್ಗೆ ಆಲೋಚಿಸಬೇಕು.

ಈ ಮೂರು ವಿಷಯಗಳನ್ನು ಆಲೋಚಿಸದೆ ಯಾರಾದರೆ ಜೀವಿಸುತ್ತಾರೋ ಅವರು ಸಮಸ್ಯೆಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ, ಕಷ್ಟಗಳ ಪಾಲಾಗುತ್ತಾರೆ ಕಡೆಗೆ ದುಃಖವನ್ನು ಹೊಂದುತ್ತಾರೆ.

## ಮಾನವನು ತನ್ನ ಬಗ್ಗೆ ಆಲೋಚಿಸಬೇಕು

ಮುಖ್ಯವಾಗಿ ತನ್ನ ಬಗ್ಗೆ ಅಂದರೆ ತಾನು ಯಾರು? ತಾನು ಎಂದರೆ ದೇಹವು ಒಂದೇ ಅಲ್ಲ, ದೇಹದ ಜೊತೆ ಮನಸ್ಸು, ಆತ್ಮ ಕೂಡ ಇವೆ. ಆದ್ದರಿಂದ ದೇಹದ ಬಗ್ಗೆ ಮನಸ್ಸಿನ ಬಗ್ಗೆ, ಆತ್ಮದ ಬಗ್ಗೆ ಆಲೋಚಿಸಬೇಕು!

ಆಲೋಚಿಸಿದರೆ ಶರೀರಕ್ಕಿಂತಲೂ ಮನಸ್ಸು ಶ್ರೇಷ್ಠವೆಂದು ತಿಳಿಯುತ್ತದೆ. ಆದ್ದರಿಂದ ಮನಸ್ಸಿನ ಬಗ್ಗೆ ತಿಳಿದುಕೊಳ್ಳಬೇಕು. ಮನಸ್ಸೆಂದರೆ ಏನು? ಮನಸ್ಸಿನ ಪಾತ್ರವೇನು? ಮನಸ್ಸನ್ನು ಹಿಡಿತದಲ್ಲಿಟ್ಟರೆ ಬರುವ ಲಾಭಗಳೇನು? ಹಿಡಿತದಲ್ಲಿ ಇಲ್ಲದೆ ಹೋದರೆ

ಬರುವ ನಷ್ಟವೇನು? ಇಂತಹ ಎಷ್ಟನ್ನೊ ಆಲೋಚಿಸಬೇಕು. ಅಸಲು ಮಾನವನ ಜೀವನಕ್ಕೆ, ಮನಸ್ಸಿಗೆ ಏನಾದರೂ ಸಂಬಂಧವಿದೆಯಾ? ಮನಸ್ಸಿನ ಗುಣಗಳೇನು? ಗುಣಗಳಿಗೆ ಮತ್ತು ಮಾನವನು ಮಾಡುವ ಕೆಲಸಗಳಿಗೆ ಸಂಬಂಧವಿದೆಯಾ? ಗುಣಗಳು ಬದಲಾಗಲು ಏನು ಮಾಡಬೇಕು? ಅಷ್ಟೇ ಅಲ್ಲದೆ ಮನಸ್ಸಿಗೆ ಸಂಬಂಧಿಸಿದ ಸಮಸ್ಯೆಗಳು ಏನಾದರೂ ಇವೆಯೇ? ಇದ್ದರೆ ಆ ಸಮಸ್ಯೆಗಳು ಹೇಗೆ ಉತ್ಪನ್ನವಾಗುತ್ತಿವೆ? ಅವನ್ನು ಹೇಗೆ ಹಿಮೆಟ್ಟಿಸಬೇಕು ಇಂತವನ್ನು ಕೂಡ ಆಲೋಚಿಸಬೇಕು... ಆಲೋಚಿಸಿದರೆ ಜೀವನದಲ್ಲಿ ಶಾಂತತೆ , ಪ್ರಶಾಂತತೇ ,ಇಲ್ಲದೆ ಇದ್ದರೆ ಜೀವನವೆಲ್ಲಾ ಅಶಾಂತಿ, ಎಲ್ಲಾ ನಷ್ಟವೆ. ಆದ್ದರಿಂದ ಕಾಣಿಸದೆ ಇರುವ ಮನಸ್ಸಿಗೆ ಪ್ರಾಮುಖ್ಯತೆ ಕೊಡಬೇಕು. ಮನಸ್ಸಿನ ಬಗ್ಗೆ ಆಲೋಚಿಸಬೇಕು.

ಅಷ್ಟೇ ಅಲ್ಲದೆ ಮನಸ್ಸಿಗಿಂತ ಕಾಣಿಸದಿರುವ ಆತ್ಮ ಇನ್ನೂ ಶ್ರೇಷ್ಠ. ಕಾರಣ ಆತ್ಮ ಇಲ್ಲದಿರೆ ಶರೀರ ಇರುವುದಿಲ್ಲ, ಮನಸ್ಸು ಇರುವುದಿಲ್ಲ. ಎರಡು ಅದೃಶ್ಯವಾಗಿ ಹೋಗುತ್ತವೆ. ಅಷ್ಟೇ ಅಲ್ಲದೆ ಶರೀರಕ್ಕೂ, ಇಂದ್ರಿಯಗಳಿಗೂ, ಮನಸ್ಸಿಗೂ ಮೂಲ ಆತ್ಮ. ಆತ್ಮಶಕ್ತಿಯಿಂದ ಇವೆಲ್ಲಾ ಕೆಲಸ ಮಾಡುತ್ತಿವೆ. ಮತ್ತೆ ಅಂತಹ ಆತ್ಮದ ಬಗ್ಗೆ ಆಲೋಚಿಸಬೇಕು ಅಲ್ಲವೇ? ಆತ್ಮ ಯಾರು? ಆತ್ಮಶಕ್ತಿ ಎಷ್ಟು? ಆತ್ಮದ ವಿಶಿಷ್ಟತೆ ಏನು? ಮಾನವನಿಗೂ, ಆತ್ಮಕ್ಕೆ ಸಂಬಂಧವೇನು? ಆತ್ಮದ ಪಾತ್ರವೇನು? ಆತ್ಮಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟರೆ ಬರುವ ಲಾಭಗಳು, ಕೊಡದೇ ಇದ್ದರೆ ಬರುವ ನಷ್ಟಗಳ ಬಗ್ಗೆ ಆಲೋಚಿಸಬೇಕು. ಒಂದು ರೀತಿಯಾಗಿ ಮಾನವನ ದುಃಖಕ್ಕೆ ಕಾರಣ ಆತ್ಮಕ್ಕೆ ಪ್ರಾಮುಖ್ಯತೆ ಕೊಡದಿರುವುದೆ. ಆತ್ಮವನ್ನು ಹಿಡಿದುಕೊಳ್ಳದೆ ಇರುವುದು, ಆತ್ಮದ ಬಗ್ಗೆ ತಿಳಿದುಕೊಳ್ಳದೆ ಇರುವುದು. ಆತ್ಮಕ್ಕೆ ಸಂಬಂಧಿಸಿದ ಜ್ಞಾನವಿಲ್ಲದೆ ಇರುವುದು ಆಗಿದೆ.

ಆತ್ಮಕ್ಕೆ ಸಂಬಂಧಿಸಿದ ಜ್ಞಾನವು ಇಲ್ಲದೆ ಇರುವುದರಿಂದ ಮಹಾಭಾರತ ಯುದ್ಧದ ಸಮಯದಲ್ಲಿ ಅರ್ಜುನನು ಕೂಡ ದುಃಖಕ್ಕೆ ಒಳಗಾದನು. ಯುದ್ಧವನ್ನು ಮಾಡುವುದಿಲ್ಲವೆಂದನು. ಆಗ ಶ್ರೀ ಕೃಷ್ಣನು ಭಗವದ್ಗೀತೆಯ ಮೂಲಕ ಅರ್ಜುನನಿಗೆ ಆತ್ಮ ಜ್ಞಾನವನ್ನು ಬೋಧಿಸಿ ಅರ್ಜುನನ ದುಃಖವನ್ನು ತೊಲಗಿಸಿದನು. ಇದನ್ನು ನೋಡಿದರೆ ಆತ್ಮಕ್ಕೆ ಸಂಬಂಧಿಸಿದ ಜ್ಞಾನವು ಎಷ್ಟು ಶ್ರೇಷ್ಠವೋ ನಾವು ಅರ್ಥ ಮಾಡಿಕೊಳ್ಳಬಹುದು. ಆದ್ದರಿಂದ ಆತ್ಮದ ಬಗ್ಗೆ ಅಧ್ಯಯನ ಮಾಡಬೇಕು, ಆತ್ಮದ ಬಗ್ಗೆ ಆಲೋಚಿಸಬೇಕು. ಕಾಣಿಸುತ್ತಿಲ್ಲವೆಂದು ಆಲೋಚಿಸುವುದನ್ನು ಬಿಡಬಾರದು.

ಅಷ್ಟೇ ಅಲ್ಲದೆ ಮಾನವನು ತನ್ನ ಬಗ್ಗೆ ಆಲೋಚಿಸ ಬೇಕಾಗಿರುವುದು ಇನ್ನೂ ಇವೆ.

(1) ಮಾನವನು ಕಾಣಿಸುವ ಈ ಜೀವನಕ್ಕೇನೇ ಪ್ರಾಮುಖ್ಯತೆ ಕೊಡುತ್ತಿದ್ದಾನೆ. ಆದರೆ ತನಗೆ ಕಾಣಿಸದೆ ಇರುವ ಜೀವನವು ಕೂಡ ಇದೆ ಎಂದು ತಿಳಿಯಲಾರದೆ ಹೋಗುತ್ತಿದ್ದಾನೆ. ಅಂದರೆ ಈ ಜನ್ಮವೇ ಅಲ್ಲ ಇದಕ್ಕೂ ಮೊದಲು ಕೂಡ ತನಗೆ

ಜನ್ಮಗಳು ಇವೆ. ಹಾಗೆಯೇ ಈ ಜೀವನವು ಆಗಿಹೋದ ನಂತರ ಕೂಡ ಇನ್ನೂ ಜೀವನವು ಇರುತ್ತದೆ. ಅಂದರೆ ಇನ್ನೂ ಜನ್ಮಗಳು ಇರುತ್ತವೆ. ಮತ್ತೆ ಆ ಜೀವನ ಬಗ್ಗೆ ಕೂಡ ಆಲೋಚಿಸಬೇಕು. ಕಾರಣ ಹಿಂದಿನ ಜೀವನಕ್ಕೆ ಈ ಜೀವನಕ್ಕೆ ಸಂಬಂಧವಿರುತ್ತದೆ. ಅಂದರೆ ಹಿಂದಿನ ಜನ್ಮದ ಹಾಗೆ ಈ ಜನ್ಮ ಇರುತ್ತದೆ. ಹಾಗೆಯೇ ಈ ಜನ್ಮದಲ್ಲಿ ಜೀವಿಸುವ ವಿಧಾನವೆ, ಭವಿಷ್ಯತ್ ಜನ್ಮ ಆಧಾರಪಟ್ಟಿರುತ್ತದೆ. ಆದ್ದರಿಂದ ಕಾಣಿಸದೆ ಹೋದರು ಆ ಜನ್ಮಗಳ ಬಗ್ಗೆ ಕೂಡ ಆಲೋಚಿಸಬೇಕು.

2) ಮಾನವನಿಗೆ 'ಕಾಣಿಸುವ' ನೇತ್ರಗಳಲ್ಲದೆ 'ಕಾಣಿಸದೆ' ಇರುವ ದಿವ್ಯ ನೇತ್ರವು ಕೂಡ ಇದೆ.

3) 'ಕಾಣಿಸುವ' ಶರೀರದ ಜೊತೆ 'ಕಾಣಿಸದಿರುವ' ಸೂಕ್ಷ್ಮ ಶರೀರವು ಕೂಡ ಇದೆ.

4) ಕಾಣಿಸುವ ಸಂಪಾದನೆಯ ಜೊತೆ ಕಾಣಿಸದಿರುವ ಜ್ಞಾನ ಸಂಪಾದನೆಯೂ ಇದೆ.

5) ಕಾಣಿಸುವ ಭೂಲೋಕದ ಜೊತೆ ಕಾಣಿಸದಿರುವ ಸೂಕ್ಷ್ಮಲೋಕಗಳು ಇವೆ.

6) ಕಾಣಿಸುವ ರೂಲ್ಸ್, ಕಾನೂನಿನ ಜೊತೆ ಕಾಣದಿರುವ ರೂಲ್ಸ್ ಅಂದರೆ ಧರ್ಮಗಳು ಕೂಡ ಇವೆ.

7) ಕಾಣಿಸುವ ಮೇಧಾವಿಗಳ ಜೊತೆ ಕಾಣದಿರುವ ಮೇಧಾವಿಗಳು ಅಂದರೆ ಮಾಸ್ಟರ್ಸ್... ದೇವರುಗಳು, ದೇವತೆಗಳು ಕೂಡ ಇದ್ದಾರೆ. ಮತ್ತೆ ಇವೆಲ್ಲವುಗಳ ಕುರಿತು, ಇವರೆಲ್ಲರ ಕುರಿತು ಕೂಡ ಆಲೋಚಿಸಬೇಕು. ಆದ್ದರಿಂದ ಇವುಗಳಲ್ಲಿ ಕೆಲವುದರ ಬಗ್ಗೆ ಆಲೋಚಿಸೋಣ.

## ಕಾಣಿಸುವ ಜೀವನ –ಕಾಣಿಸದೇ ಇರುವ ಜೀವನ

ಮಾನವರಿಗೆ ಪ್ರಸ್ತುತ ಕಾಣಿಸುವ ಜೀವನದ ಜೊತೆ ಕಾಣಿಸದಿರುವ ಜೀವನವು ಕೂಡ ಇದೆ. ಆ ಕಾಣಿಸದಿರುವ ಜೀವನದ ಬಗ್ಗೆ ಅರ್ಥಮಾಡಿಕೊಂಡರೆ ಮಾತ್ರ ಕಾಣಿಸುವ ಜೀವನವು ಸುಖಮಯವಾಗುತ್ತದೆ. ಕಾಣಿಸುವ ಜೀವನಕ್ಕಿಂತ ಸ್ವಲ್ಪವೂ – ಕಾಣದಿರುವ ಜೀವನವು ಅನಂತ. ಮಾನವನು ... ಕಾಣದಿರುವ ಜೀವನವನ್ನು ಬಿಟ್ಟು ಕಾಣಿಸುವ ಅಲ್ಪವಾದ ಜೀವನದ ಬಗ್ಗೆ ಆಲೋಚಿಸಿದರೆ ದುಃಖ ಉಂಟಾಗುತ್ತದೆ. ಆದ್ದರಿಂದ ಕಾಣದಿರುವ ಜೀವನಕ್ಕೆ ಹೆಚ್ಚು ಸಮಯವನ್ನು ಮೀಸಲಿಡಬೇಕು. ಕಾಣಿಸುವ ಕಡಿಮೆ ಪ್ರಾಮುಖ್ಯತೆ ಇರುವ ಜೀವನಕ್ಕೆ ಕಡಿಮೆ ಸಮಯವನ್ನು ಮೀಸಲಿಡಬೇಕು. ಆದರೆ ಪೂರ್ತಿ ಸಮಯವನ್ನು ಮೀಸಲಿಡುತ್ತಿದ್ದೀರ. ಅನಂತವಾದ

ಕಾಣದಿರುವ ಜೀವನಕ್ಕೆ ಅಸಲು ಸಮಯವೇ ಮೀಸಲಿಡುತ್ತಿಲ್ಲ ಅಷ್ಟೇ ಅಲ್ಲ ಮಾನವರು ತಮ್ಮ ಬಗ್ಗೆ ಇನ್ನೂ ಆಲೋಚಿಸಬೇಕು.

ನಾವು ಯಾರು? ಎಲ್ಲಿಂದ ಬಂದಿದ್ದೇವೆ? ಮರಳಿ ಎಲ್ಲಿಗೆ ಹೋಗುತ್ತೇವೆ? ಗತ ಜೀವನಕ್ಕೆ, ಈಗಿನ ಜೀವನಕ್ಕೆ ಸಂಬಂಧವಿದೆಯೇ ? ಅದರ ಪ್ರಭಾವವು ಈ ಜೀವನದ ಮೇಲೆ ಇರುವುದೇ? ಇದ್ದರೆ ಹೇಗೆ ಇರುತ್ತದೆ? ಈ ಜೀವನವನ್ನು ಹೇಗೆ ಪ್ರಭಾವಿಸುತ್ತದೆ? ಹಾಗಾದರೆ ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು? ಕಾಣದಿರುವ ಶಾಶ್ವತವಾದ ಜೀವನಕ್ಕಾಗಿಯೇ? ಕಾಣಿಸುವ, ನಶಿಸುವ ಈ ತಾತ್ಕಾಲಿಕವಾದ ಜೀವನಕ್ಕಾಗಿಯೇ? ಇವೆಲ್ಲವನ್ನೂ ತಿಳಿದುಕೊಳ್ಳುವುದು ಹೇಗೆ?

ಇಷ್ಟು ವಿಷಯಗಳನ್ನು ಆಲೋಚಿಸ ಬೇಕಾಗಿದ್ದರೂ, ಮಾನವನು ಹಣ, ಸಂಪತ್ತು, ಹೆಸರು ಪ್ರಖ್ಯಾತಿ, ಸ್ಥಾನಮಾನ ಇಂತಹವುಗಳನ್ನು ಸಂಪಾದಿಸುವುದಕ್ಕೆ ಪ್ರಯತ್ನಿಸುತ್ತಿದ್ದಾನೆ. ಏಕೆಂದರೆ ಇನ್ನೂ ಆಲೋಚಿಸಿದರೆ ಈಗ ನಮಗೆ ಕಾಣಿಸುವ ತಂದೆ ತಾಯಿಯರೆ ಅಲ್ಲದೆ ಇನ್ನು ಎಷ್ಟೋ ಜನ ತಂದೆ– ತಾಯಂದಿರು ಗತದಲ್ಲಿ ಇದ್ದಾರೆ. ಹಾಗೆಯೇ ಹೆಂಡತಿಯರು ಇದ್ದಾರೆ, ಗಂಡಂದಿರು ಇದ್ದಾರೆ, ಮಕ್ಕಳಿದ್ದಾರೆ. ಹಾಗೆಯೇ ಭವಿಷ್ಯದಲ್ಲಿ ಕೂಡ ಇರುತ್ತಾರೆ. ಮತ್ತೆ ಅವರ ಬಗ್ಗೆ ಏಕೆ ಆಲೋಚಿಸುತ್ತಿಲ್ಲ?

ಗಮನಿಸಿದರೆ, ಯೋಗಿಗಳು ಕಾಣಿಸುವ ಜೀವನಕ್ಕಿಂತ ಕಾಣದೆ ಇರುವ ಜೀವನಕ್ಕೆ ತಾವು ಪೂರ್ತಿ ಪ್ರಾಮುಖ್ಯತೆಯನ್ನು ಕೊಟ್ಟರು. ಜೀವನವೆಲ್ಲಾ ಧ್ಯಾನಕ್ಕೆ ಮೀಸಲಿಟ್ಟರು. ಆದರೆ ಭೋಗಿಗಳು ಕಾಣಿಸುವ ಜೀವನಕ್ಕೆ ಪ್ರಾಮುಖ್ಯತೆ ಕೊಡುತ್ತಿದ್ದಾರೆ. ಭೋಗಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ. ಜೀವನವೆಲ್ಲ ಧನ ಸಂಪಾದನೆಗೆ ಮೀಸಲಿಡುತ್ತಿದ್ದಾರೆ, ದುಃಖಗಳ ಪಾಲಾಗುತ್ತಿದ್ದಾರೆ. ನಾವು ಕೂಡ ಯೋಗಿಗಳ ಹಾಗೆ ಕಾಣದೆ ಇರುವ ಜೀವನಕ್ಕೆ ಪ್ರಾಮುಖ್ಯತೆ ಕೊಟ್ಟು ಸ್ವಲ್ಪ ಸಮಯವನ್ನು ಧ್ಯಾನಕ್ಕೆ ಮೀಸಲಿಡೋಣ, ಜೀವನವನ್ನು ಸದ್ವಿನಿಯೋಗ ಮಾಡಿ ಕೊಳ್ಳೋಣ.

ಮಾನವನು ತನ್ನ ಕುರಿತಾಗಿ , ತನ್ನ ಜೀವನದ ಕುರಿತಾಗಿ, ತಾನು ಮಾಡಬೇಕಾದ ಕೆಲಸದ ಕುರಿತಾಗಿ , ಆಲೋಚಿಸಬೇಕಾದ ವಿಷಯಗಳಲ್ಲಿ ಇನ್ನೂ ಕೆಲವನ್ನು ತಿಳಿದುಕೊಳ್ಳೋಣ.

(1) ತಾನು ತೆಗೆದುಕೊಳ್ಳುವ ಆಹಾರದ ಕುರಿತು , ಮುಖ್ಯವಾಗಿ ಮಾಂಸಹಾರದ ಕುರಿತು ಆಲೋಚಿಸಬೇಕು.

(2) ತಾನು ಮಾಡುವ ಕರ್ಮಗಳ ಆ ಕರ್ಮ ಫಲಿತಗಳ ಕುರಿತು , ಮುಖ್ಯವಾಗಿ ತನ್ನ ಕಾರ್ಯಗಳು , ಮಾತುಗಳ ಕುರಿತಾಗಿ ಆಲೋಚಿಸಬೇಕು.

(3) ತನ್ನ ಅಗತ್ಯತೆಗಳು ಏನೆಂದು ತಿಳಿದುಕೊಂಡು ಅವುಗಳಿಗೆ ಪರಿಮಿತವಾಗಿರಬೇಕು. ಕೋರಿಕೆಗಳಿಗೆ ಗುಲಾಮನಾಗದೆ ಇರುವುದರ ಕುರಿತು ಆಲೋಚಿಸಬೇಕು.

(4) ತಾನು ಮಾಡುವ ಆರಾಧನೆಗಳ ಕುರಿತು ತಾನು ಆರಾಧಿಸುವ ಭಗವಂತನ ಕುರಿತು ಆತನ ಶಕ್ತಿಯ ಕುರಿತು ಆಲೋಚಿಸಬೇಕು.

(5) ಮುಖ್ಯವಾಗಿ ಮೊದಲು ತಾನು ಮಾಡದೆ ಇರಬೇಕಾದ ಕೆಲಸಗಳೇನು? ನಂತರ ಮಾಡಬೇಕಾದ ಕೆಲಸಗಳೇನು? ಅನ್ನುವುದನ್ನು ಆಲೋಚಿಸಬೇಕು.

(6) ಪಾಪ, ಪುಣ್ಯಗಳ ಕುರಿತು ಆಲೋಚಿಸಬೇಕು.

(7) ಧರ್ಮ, ಅಧರ್ಮದ ಬಗ್ಗೆ ಆಲೋಚಿಸಬೇಕು.

(8) ಮುಖ್ಯವಾಗಿ ಜೀವನದಲ್ಲಿ ತನಗೆ ಕೊಡಲ್ಪಟ್ಟ ಸಮಯದ ಬಗ್ಗೆ, ಆ ಸಮಯುವನ್ನು ತಾನು ಹೇಗೆ ವಿನಿಯೋಗಿಸುತ್ತಿದ್ದೇನೆ? ಹೇಗೆ ವಿನಿಯೋಗಿಸಿಕೊಳ್ಳಬೇಕು? ಎನ್ನುವುದನ್ನು ಆಲೋಚಿಸಬೇಕು.

(9) ತನ್ನ ಜೀವನದಲ್ಲಿ ಬರುವ ಸಮಸ್ಯೆಗಳು ಕಷ್ಟಗಳ ಕುರಿತು , ಅವುಗಳ ಕಾರಣಗಳ ಕುರಿತು ಆಲೋಚಿಸಬೇಕು. ಮುಖ್ಯವಾಗಿ ಕಷ್ಟಗಳಿಂದ ಹೊರಬೀಳುವುದಕ್ಕಿಂತ ಕಷ್ಟಗಳು ಏಕೆ ಬರುತ್ತಿವೆ? ಕಷ್ಟಗಳಿಗೆ ಕಾರಣವೇನು? ಅನ್ನುವುದರ ಕುರಿತು ಆಲೋಚಿಸಬೇಕು.

(10) ಸಂಸಾರದಲ್ಲಿ ಬಾಂಧವ್ಯಗಳು ಸರಿಯಾಗಿ ಏಕೆ ಇಲ್ಲ? ಅವುಗಳ ಕಾರಣಗಳನ್ನು ಕುರಿತು ಆಲೋಚಿಸಬೇಕು.

(11) ವೃದ್ಯಾಪ್ಯ ಸಮಸ್ಯೆಗಳಿಗೆ ಕಾರಣಗಳ ಕುರಿತು ಆಲೋಚಿಸಬೇಕು.

(12) ಗಂಡ –ಹೆಂಡತಿಯರ ಮಧ್ಯೆ ಮನಸ್ತಾಪಗಳು ಏಕೆ ಬರುತ್ತಿವೆ? ಅವುಗಳ ಕಾರಣವೇನೆಂದು ಆಲೋಚಿಸಬೇಕು.

(13) ವಿನೋದಕೋಸ್ಕರ ನಾನು ಮಾಡುವ ಫಂಕ್ಷನ್ಸ್, ಪಾರ್ಟಿಗಳ ಕುರಿತು ಅವುಗಳ ಪರಿಣಾಮಗಳ ಬಗ್ಗೆ ಆಲೋಚಿಸಬೇಕು.

(14) ತಾನು ಮೂಢವಾಗಿ ನಂಬುತ್ತಿರುವ ಆಚಾರಗಳ ಕುರಿತು ಅವುಗಳಿಂದ ಬರುವ ನಷ್ಟಗಳ ಬಗ್ಗೆ ಆಲೋಚಿಸಬೇಕು.

(15) ಮರಣದ ಬಗ್ಗೆ , ಮರಣದ ನಂತರ ಮಾಡುತ್ತಿರುವ ಕರ್ಮಕಾಂಡಗಳ ಬಗ್ಗೆ ಆಲೋಚಿಸಬೇಕು.

(16) ಇನ್ನು ಮರಣದ ನಂತರ ಜೀವನದ ಬಗ್ಗೆ, ಅದಕ್ಕೋಸ್ಕರ ತಾನು ಮಾಡಬೇಕಾಗಿರುವುದರ ಕುರಿತು, ಅಂದರೆ ಪುನರ್ಜನ್ಮದ ಕುರಿತು ಆಲೋಚಿಸಬೇಕು.

(17) ತನ್ನ ಸುತ್ತಲೂ ಇರುವವರ ಕುರಿತು ಅವರ ಜೊತೆ ತನಗಿರುವ ಸಂಬಂಧದ ಕುರಿತು , ಅವರ ಜವಾಬ್ದಾರಿಯ ಬಗ್ಗೆ ಆಲೋಚಿಸಬೇಕು.

(18) ತನ್ನ ಸುತ್ತಲೂ ಇರುವ ಪ್ರಾಣಿಗಳ ಬಗ್ಗೆ, ಅವುಗಳ ಕುರಿತು ತಾನು ನಿರ್ವಹಿಸಬೇಕಾದ ಧರ್ಮದ ಬಗ್ಗೆ ಆಲೋಚಿಸಬೇಕು.

(19) ಹಾಗೆಯೇ ದೊಡ್ಡವರು, ಮಹಾತ್ಮರು, ಯೋಗಿಗಳು ಬೋಧಿಸುವ ವಿಷಯಗಳಾದ ಪರರ ಸೇವೆಯ ಬಗ್ಗೆ, ಎಲ್ಲರನ್ನೂ, ಎಲ್ಲವನ್ನು ಪ್ರೇಮಿಸುವುದರ ಬಗ್ಗೆ, ಲೋಕಕ್ಕೆ ಕೊಡುವ ಕೊಡುಗೆಯ ಬಗ್ಗೆ ಆಲೋಚಿಸಬೇಕು.

(20) ಕೊನೆಗೆ ಎಲ್ಲಾ ಸಮಸ್ಯೆಗಳಿಗೆ ಪರಿಷ್ಕಾರವಾದ... ಎಲ್ಲಾ ಸಾಧನೆಗಳಿಗೆ ಶ್ರೇಷ್ಠವಾದ ಧ್ಯಾನ ಸಾಧನೆಯ ಕುರಿತು ಆಲೋಚಿಸ ಬೇಕು. ಅಷ್ಟೇ ಅಲ್ಲದೆ ಒಂದು ರೀತಿಯಾಗಿ ನೋಡಿದರೆ ಮಾನವರು ಮಾಡುವ ಕೆಲಸಗಳೆಲ್ಲ ಸೃಷ್ಟಿಗೆ, ಸೃಷ್ಟಿ ಧರ್ಮಗಳಿಗೆ ವಿರುದ್ಧವಾಗಿಯೇ ಕಾಣಿಸುತ್ತಿವೆ. ಅಂದರೆ ಒಂದು ರೀತಿಯಾಗಿ ಮಾನವರು ಮಾಡುವುದೆಲ್ಲ ರಿವರ್ಸ್ ಆಗಿಯೇ ಇವೆ. ಅವುಗಳಲ್ಲಿ ಕೆಲವನ್ನು ನೋಡೋಣ.

## ಮಾನವನು ಮಾಡುತ್ತಿರುವುದು ಎಲ್ಲವೂ ವಿರುದ್ಧ ಚರ್ಯೆಗಳೇ!

ಮಾನವನ ದುಃಖಕ್ಕೆ ಮುಖ್ಯ ಕಾರಣ ಮಾನವನು ಮಾಡುವುದೆಲ್ಲವೂ ವಿರುದ್ಧವಾದ ಕೆಲಸಗಳೇ, ಅಂದರೆ ಸೃಷ್ಟಿ ನಿಯಮಗಳಿಗೆ ವಿರುದ್ಧವಾಗಿ ಮಾಡುತ್ತಿದ್ದಾನೆ. ಏನು ಮಾಡಬೇಕು ಅದನ್ನು ಮಾಡುತ್ತಿಲ್ಲ– ಮಾಡಬಾರದ್ದನ್ನು ಮಾಡುತ್ತಾನೆ. ಯಾವುದನ್ನು ಆಲೋಚಿಸಬೇಕೋ ಅದನ್ನು ಆಲೋಚಿಸುವುದಿಲ್ಲ– ಯಾವುದನ್ನು ಆಲೋಚಿಸಬಾರದು ಅದನ್ನೇ ಆಲೋಚಿಸುತ್ತಿದ್ದಾನೆ. ಹೇಗೆ ಪ್ರವರ್ತಿಸಬೇಕು ಹಾಗೆ ಪ್ರವರ್ತಿಸುತ್ತಿಲ್ಲ... ಹೇಗೆ ಪ್ರವರ್ತಿಸಬಾರದೋ ಹಾಗೆ ಪ್ರವರ್ತಿಸುತ್ತಾನೆ. ಅವುಗಳಿಗೆ ಕೆಲವು ಉದಾಹರಣೆಗಳನ್ನು ನೋಡೋಣ.

1. ಮಾನವನಿಗೆ ಇತರರಲ್ಲಿ ಕೆಟ್ಟದ್ದು, ತನ್ನಲ್ಲಿ ಒಳ್ಳೆಯದು ಮಾತ್ರ ಕಾಣುತ್ತದೆ. ಆದರೆ ತನ್ನಲ್ಲಿರುವ ಕೆಟ್ಟದ್ದು ಇತರರಲ್ಲಿರುವ ಒಳ್ಳೆಯದು ಕಾಣಿಸುತ್ತಿಲ್ಲ.
2. ಮಾನವನು ತಾನು ಬದಲಾಗುವುದಿಲ್ಲ ಆದರೆ ಎಲ್ಲರೂ ಬದಲಾಗಬೇಕೆಂದುಕೊಳ್ಳುತ್ತಾನೆ.
3. ಮಾನವನು ಎಲ್ಲರಿಗೂ ನೀತಿಯನ್ನು ಹೇಳುತ್ತಾನೆ, ಸಲಹೆಗಳನ್ನು ಕೊಡುತ್ತಾನೆ, ಆದರೆ ತಾನು ಮಾತ್ರ ಆಚರಿಸುವುದಿಲ್ಲ.

4. ಮಾನವನು ಹೇಳಬೇಕಾಗಿರುವುದು ನಿಜವನ್ನು ಆದರೆ ಹೇಳುತ್ತಿರುವುದು ಸುಳ್ಳು
5. ಮಾನವನು ಇರಬೇಕಾಗಿರುವುದು ನಿಸ್ವಾರ್ಥವಾಗಿ, ಧರ್ಮದಿಂದ... ಆದರೆ ಇರುವುದು ಮಾತ್ರ ಸ್ವಾರ್ಥವಾಗಿ, ಅಧರ್ಮವಾಗಿ.
6. ಬುದ್ಧಿ ಬಲ ದೊಡ್ಡದು ಆದರೆ ಮಾನವನು ದೇಹ ಬಲಕ್ಕೆ ಪ್ರಾಮುಖ್ಯತೆ ಕೊಡುತ್ತಿದ್ದಾನೆ.
7. ಮಾನವ ಸೃಷ್ಟಿಯಲ್ಲಿರುವ ಎಲ್ಲವನ್ನೂ ಪ್ರೀತಿಸಬೇಕು ಆದರೆ ಎಲ್ಲರನ್ನೂ ದ್ವೇಷಿಸುತ್ತಿದ್ದಾನೆ.
8. ಮಾನವನು ಯಾರನ್ನು ಮೋಸ ಮಾಡಬಾರದು, ಹಿಂಸೆ ಮಾಡಬಾರದು, ಅವಮಾನ ಮಾಡಬಾರದು. ಆದರೆ ಮೋಸ ಮಾಡುತ್ತಿದ್ದಾನೆ, ಹಿಂಸೆ ಮಾಡುತ್ತಿದ್ದಾನೆ, ಅವಮಾನಿಸುತ್ತಿದ್ದಾನೆ.
9. ಮಾನವನು ಸುಲಭ ಎಂದು ಕೆಟ್ಟದ್ದನ್ನು ಮಾಡುತ್ತಿದ್ದಾನೆ. ಆದರೆ ಕಷ್ಟವೆಂದು ಒಳ್ಳೆಯದನ್ನು ಮಾಡುತ್ತಿಲ್ಲ.
10. ಮಾನವನು ಜೀವಿಸಬೇಕಾಗಿರುವುದು ಶಾಂತಿಯಾಗಿ, ನಿರ್ಭಯವಾಗಿ, ಆದರೆ ಜೀವಿಸುತ್ತಿರುವುದು ಅಶಾಂತಿಯಿಂದ, ಭಯ...ಭೀತಿಯಿಂದ.
11. ಮಾನವ ಅಶಾಶ್ವತವಾದವುಗಳಿಗಾಗಿ ತಾಪತ್ರಯ ಪಡುತ್ತಿದ್ದಾನೆ, ಅವುಗಳಿಗೋಸ್ಕರ ಪ್ರಯತ್ನಿಸುತ್ತಾನೆ, ಅವುಗಳಿಗೋಸ್ಕರವೇ ಜೀವನವನ್ನೆಲ್ಲ ವ್ಯರ್ಥ ಮಾಡುತ್ತಾನೆ, ಆದರೆ ಶಾಶ್ವತವಾದದ್ದಕ್ಕೆ ಮಾತ್ರ ಪ್ರಯತ್ನಿಸುವುದಿಲ್ಲ, ಜೀವನವನ್ನು ಸ್ವಲ್ಪವೂ ವಿನಿಯೋಗಿಸುವುದಿಲ್ಲ.
12. ಮಾನವನು ತನ್ನ ಶಕ್ತಿಯನ್ನು, ಕಾಲವನ್ನು, ಜೀವನವನ್ನು ಉಪಯೋಗಿಸ ಬೇಕಾಗಿರುವುದು, ಪ್ರಾಮುಖ್ಯತೆಯನ್ನು ಕೊಡಬೇಕಾಗಿರುವುದು ಒಂದಕ್ಕೆ...ಆದರೆ ಉಪಯೋಗಿಸುತ್ತಿರುವುದು, ಪ್ರಾಮುಖ್ಯತೆಯನ್ನು ಕೊಡುತ್ತಿರುವುದು ಬೇರೊಂದಕ್ಕೆ.
13. ಮಾನವನು ಶ್ರಮ ಪಡುವುದಿಲ್ಲ. ಆದರೆ ಕೋರಿಕೆಗಳನ್ನು ಕೋರುತ್ತಾ ಇರುತ್ತಾನೆ. "ಕಷ್ಟೇ ಫಲೆ" ಅನ್ನುವ ವಿಷಯವನ್ನು ಮರೆತು ಹೋಗಿದ್ದಾನೆ.
14. ಮಾನವನು ಸಂಪಾದಿಸಬೇಕಾಗಿರುವುದು ನಾಶವಿಲ್ಲದ್ದನ್ನು ಆದರೆ ಸಂಪಾದಿಸುತ್ತಿರುವುದು ನಶಿಸಿ ಹೋಗುತ್ತಿರುವುದನ್ನು.
15. ಧನವನ್ನು ಅಗತ್ಯವಿರುವುದಕ್ಕೆ ಉಪಯೋಗಿಸಬೇಕು. ಆದರೆ ಆರ್ಭಟಗಳಿಗೆ ಉಪಯೋಗಿಸುತ್ತಿದ್ದಾನೆ.
16. ಮಾನವನು ಕೋರಬೇಕಾಗಿವುದು ಶಾಶ್ವತವಾದ ಆನಂದವನ್ನು... ಕೋರುತ್ತಿರುವುದು ತಾತ್ಕಾಲಿಕ ಸುಖವನ್ನು.

17. ಮಾನವನು ಕಷ್ಟಗಳನ್ನು ಅನುಭವಿಸುತ್ತಿದ್ದಾನೆ ಅಂದರೆ ಮಾಡಿದ ಪಾಪಗಳ ಸಾಲವನ್ನು ತೀರಿಸಿಕೊಳ್ಳುತ್ತಿದ್ದಾನೆ. ಅಂದರೆ ಸಂತೋಷ ಪಡಬೇಕು ಆದರೆ ಸಾಲ ತೀರುತ್ತಿರುವುದಕ್ಕೆ ಅಂದರೆ ಕಷ್ಟಗಳಿಗೆ ದುಃಖಿಸುತ್ತಿದ್ದಾನೆ.
18. ಮಾನವನು ಪಾಪಗಳನ್ನು ಮಾಡುತ್ತಿದ್ದಾನೆ.. ಅಂದರೆ ಸಾಲವನ್ನು ಹೆಚ್ಚಿಸಿಕೊಳ್ಳುತ್ತಿದ್ದಾನೆ. ಪಾಪಗಳನ್ನು ಮಾಡುವುದು ಬಾಧಾಕರ ವಿಷಯ ಆದರೆ ಧೈರ್ಯವಾಗಿ ಪಾಪಗಳನ್ನು ಮಾಡುತ್ತಿದ್ದಾನೆ.
19. ಮಾನವನ ಜೀವನದಲ್ಲಿ ಒಂದು ವರ್ಷ ಉರುಳಿದರೆ ಸಾವಿಗೆ ಹತ್ತಿರ ಆದ ಹಾಗೆ ಅಂದರೆ ಜೀವನವು ನಷ್ಟವಾಗುತ್ತಿದೆ...ಆದರೆ ಹುಟ್ಟಿದ ದಿನವನ್ನು, ಮದುವೆ ದಿನವನ್ನು, ರಿಟೈರ್ಮೆಂಟ್ ದಿನವನ್ನು ಹಬ್ಬವನ್ನಾಗಿ ಮಾಡಿಕೊಳ್ಳುತ್ತಿದ್ದಾನೆ.
20. ಮಾನವನು ಶಾಂತಿ, ಶಕ್ತಿಯನ್ನು ಹೊಂದಬೇಕೆಂದರೆ ಯೋಚನೆಗಳನ್ನು ಖಾಲಿ ಮಾಡಬೇಕು ಅಂದರೆ ಧ್ಯಾನದಲ್ಲಿ ಆಲೋಚನೆಗಳನ್ನು ತೊಲಗಿಸಿ ಅಂದರೆ ಮನಸ್ಸನ್ನು ನಿರ್ವಿಷಯ ಮಾಡಬೇಕು. ಆದರೆ ತಲೆಯ ಕೂದಲನ್ನು ಬೋಳಿಸಿಕೊಳ್ಳುತ್ತಿದ್ದಾನೆ.
21. ಮಾನವನು ಭಾವನೆಯನ್ನು ಶುದ್ಧ ಮಾಡಿಕೊಳ್ಳಬೇಕು, ಆದರೆ ದೇಹವನ್ನು ಶುದ್ಧಿ ಮಾಡಿಕೊಳ್ಳುತ್ತಿದ್ದಾನೆ.
22. ಮಾನವರು ಅಂತರ್ ಸೌಂದರ್ಯವನ್ನು ನೋಡಬೇಕು. ಆದರೆ ಬಾಹ್ಯ ಸೌಂದರ್ಯವನ್ನು ನೋಡುತ್ತಿದ್ದಾನೆ.
23. ಮಾನವನು ಸಂಕಲ್ಪಿಸಿದರೆ ಏನನ್ನಾದರೂ ಸಾಧಿಸಬಹುದು. ಆದರೆ ಏನು ಸಾಧಿಸದೆ ಅಲ್ಪನಾಗಿ ಪ್ರವರ್ತಿಸುತ್ತಿದ್ದಾನೆ.
24. ಮಾನವನು ಎಲ್ಲರೂ ತನ್ನನ್ನು ಪ್ರೀತಿಸಬೇಕೆಂದುಕೊಳ್ಳುತ್ತಾನೆ. ಆದರೆ ತಾನು ಮಾತ್ರ ಯಾರನ್ನು ಪ್ರೀತಿಸುವುದಿಲ್ಲ.
25. ತಾನು ಆತ್ಮವಾಗಿದ್ದರೂ ದೇಹವೇ ತಾನೆಂದು ಭಾವಿಸುತ್ತಿದ್ದಾನೆ.
26. ಇರುವುದನ್ನು ಇಲ್ಲವೆಂದು , ಇಲ್ಲದಿರುವುದನ್ನು ಇದೆಯೆಂದು ಕೊಳ್ಳುತ್ತಾನೆ.
27. ಭಗವಂತನೆಂದರೆ ಇಷ್ಟವೆನ್ನುತ್ತಾನೆ, ಆದರೆ ತನಗೆ ಇಷ್ಟವಾದ ಹಾಗೆ ಮಾಡುತ್ತಾನೆ, ಭಗವಂತನು ಮೆಚ್ಚುವಂತೆ ಒಂದು ಕೆಲಸವನ್ನು ಮಾಡುತ್ತಿಲ್ಲ.
28. ತನಗೇನು ಲಾಭವಿಲ್ಲದೆ ಹೋದರು ಇತರರು ಏನೆಂದುಕೊಳ್ಳುತ್ತಾರೆಂದು ಮಾಡುತ್ತಾನೆ. ಆದರೆ ಭಗವಂತನು ಏನೆಂದುಕೊಳ್ಳುತ್ತಾನೋ ಎಂದು ಮಾಡುತ್ತಿಲ್ಲ.
29. ಜನರು ಮೆಚ್ಚಿಕೊಳ್ಳುವ ರೂಪವನ್ನು ಸರಿ ಮಾಡಿಕೊಳ್ಳಬೇಕೆಂದುಕೊಳ್ಳುತ್ತಾನೆ ಆದರೆ ಭಗವಂತನು ಮೆಚ್ಚುವ ಗುಣಗಳನ್ನು ಸರಿ ಮಾಡಿಕೊಳ್ಳುವುದಿಲ್ಲ.

30. ಮಾನವನು ಭೂಮಿಯ ಮೇಲೆ ಬಂದ ಕಾರಣವೊಂದು ಆದರೆ ಮಾಡುವುದು ಇನ್ನೊಂದು.
31. ಮಾನವನು ಓದಬೇಕಿರುವುದು ಹುಟ್ಟು ಸಾವು ಇಲ್ಲದ ವಿದ್ಯೆ ಆದರೆ ಓದುತ್ತಿರುವುದು ಇನ್ನೊಂದು.
32. ಮಾನವನು ಭಗವಂತನನ್ನು ಹುಡುಕಬೇಕಾಗಿರುವುದು ಒಂದು ಕಡೆ ಆದರೆ ಹುಡುಕುತ್ತಿರುವುದು ಇನ್ನೊಂದು ಕಡೆ.
33. ಭಗವಂತನೇ ತಾನಾಗಿದ್ದಾನೆ, ಆದರೆ ಬೇರೆ ಇದ್ದಾನೆ ಎಂದುಕೊಂಡು ಆರಾಧಿಸುತ್ತಿದ್ದಾನೆ.
34. ಭಗವಂತನಿಗೆ ರೂಪವಿಲ್ಲ ಆದರೆ ರೂಪವಿದೆ ಎಂದುಕೊಳ್ಳುತ್ತಿದ್ದಾನೆ.
35. ಸಮಸ್ತ ಜೀವಿಗಳು, ಭಗವಂತನ ರೂಪಗಳಾದರೂ ಬೇರೆ ಎಂದು ಭಾವಿಸುತ್ತಾನೆ.
36. ಮಾನವನು ಧ್ಯಾನ ಮಾಡಿ ಜ್ಞಾನ ಸಂಪಾದಿಸಿಕೊಳ್ಳಬೇಕು ಆದರೆ ಅಜ್ಞಾನದಲ್ಲಿ ಜೀವಿಸುತ್ತಿದ್ದಾನೆ.
37. ಶ್ರೀ ಕೃಷ್ಣಭಗವಾನನು ಗೀತೆಯಲ್ಲಿ ಹೇಳಿದ ಸಂದೇಶವನ್ನು ಅನುಸರಿಸುವುದಿಲ್ಲ ಆದರೆ ಪಾರಾಯಣ ಮಾಡುತ್ತಾನೆ.
38. ಭಗವಂತನು ಶ್ರೇಷ್ಠನೆನ್ನುತ್ತಾನೆ, ಆರಾಧಿಸುತ್ತಾನೆ. ಅಷ್ಟೇ ಹೊರತು ಶ್ರೇಷ್ಠವಾದ ಭಗವಂತನು ಹೇಳಿದ್ದನ್ನು ಆಚರಿಸುವುದಿಲ್ಲ.
39. ಗೀತೆಯಲ್ಲಿ ಭಗವಂತನು ಮಾನವನನ್ನು ನಿನ್ನ ನೀನು ಉದ್ಧರಿಸಿಕೊ ಎನ್ನುತ್ತಾನೆ. ಆದರೆ ಮಾನವನು ಭಗವಂತನನ್ನು ಉದ್ದರಿಸು ಎನ್ನುತ್ತಾನೆ.
40. ಗೀತೆಯಲ್ಲಿ ಭಗವಂತನು ಹೇಳಿದ ವಿಧವಾಗಿ ನಡೆದುಕೊಳ್ಳಲು ಮನಸ್ಸಿಗೆ ಹೇಳುವುದಿಲ್ಲ. ಆದರೆ ಮನಸ್ಸಿನ ಕೋರಿಕೆಯನ್ನು ತೀರಿಸಲು ಭಗವಂತನನ್ನು ಪ್ರಾರ್ಥಿಸುತ್ತಾನೆ.
41. ಭಗವಂತನಿಗೆ ಇಷ್ಟವಾಗುವ ಹಾಗೆ ಪ್ರವರ್ತಿಸುವುದಿಲ್ಲ. ಆದರೆ ತಾನು ಕೋರುವುದೆಲ್ಲಾ ಭಗವಂತನು ನೆರವೇರಿಸಬೇಕೆಂದು ಕೊಳ್ಳುತ್ತಾನೆ.
42. ಭಗವಂತನು ಯೋಗಿಯಾಗು ಎಂದರೆ ಮಾನವನು ಭೋಗಿ ಆಗುತ್ತಿದ್ದಾನೆ.
43. ಮಾನವನು ಅಜ್ಞಾನದಿಂದ ಕೆಲಸಕ್ಕೆ ಬಾರದೆ ಇರುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಿದ್ದಾನೆ. ಆದರೆ ಜ್ಞಾನಿಗಳಿಂದ ಕೆಲಸಕ್ಕೆ ಬರುವ ಅಭ್ಯಾಸವನ್ನು ಮಾಡಿಕೊಳ್ಳುತ್ತಿಲ್ಲ.

ಹಾಗೆ ಆಲೋಚಿಸಿದರೆ ಲೋಕದಲ್ಲಿ ಮಾನವರು ಮಾಡಬಾರದ ಕೆಲಸಗಳು ಅಂದರೆ ಮಾಡಬಾರದ ಕರ್ಮಗಳು ಇವೆ. ಹಾಗೆ ಮಾಡಬೇಕಾದ ಕೆಲಸಗಳು, ಕರ್ಮಗಳಿವೆ. ಮುಖ್ಯವಾಗಿ ಮಾಡಬಾರದ ಕೆಲಸಗಳ ಬಗ್ಗೆ ಆಲೋಚಿಸಬೇಕು.

ಏಕೆಂದರೆ, ಮಾಡಬಾರದ ಕೆಲಸಗಳನ್ನು ಮಾಡಿದರೆ ಬರುವ ಫಲಿತ ಕಷ್ಟಗಳು, ನಷ್ಟಗಳು, ದುಃಖ. ಆದರೆ ಮಾಡಬೇಕಾದ ಕೆಲಸಗಳನ್ನು ಮಾಡಿದರೆ ಫಲಿತ ಸುಖಗಳು, ಲಾಭಗಳು, ಕೊನೆಗೆ ಆನಂದ. ಎಲ್ಲರೂ ಮೊದಲು ನಷ್ಟಗಳು, ಕಷ್ಟಗಳು ಬರದಂತೆ ಮಾಡಿಕೊಳ್ಳಬೇಕು. ಕಾರಣ ಸುಖಗಳಿದ್ದರೂ, ಲಾಭಗಳು ಉಂಟಾದರೂ.... ಕಷ್ಟಗಳು ಬಂದರೆ ಅವುಗಳ ಪ್ರಯೋಜನ ಅನುಭವಿಸಲಾರರು, ಆನಂದವನ್ನು ಕಳೆದುಕೊಳ್ಳುತ್ತಾರೆ. ಆದ್ದರಿಂದ ಮಾಡಬಾರದ ಕೆಲಸಗಳ ಮೇಲೆ ದೃಷ್ಟಿಯನ್ನು ಇಡಬೇಕು. ಎಲ್ಲಾ ಸೃಷ್ಟಿಗೆ ವಿರುದ್ಧವಾದವುಗಳನ್ನು ಮಾಡುವುದರಿಂದ, ದುಃಖಕ್ಕೆ ಒಳಗಾಗುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಮಾನವನಿಗೆ ಜ್ಞಾನವಿಲ್ಲದಿರುವುದು. ಜ್ಞಾನವಿಲ್ಲದಿರುವುದಕ್ಕೆ ಕಾರಣ "ಧ್ಯಾನ"ವನ್ನು ಮಾಡದೆ ಇರುವುದು. ಆದ್ದರಿಂದ ಆಲೋಚಿಸಿ, ಧ್ಯಾನವನ್ನು ಮಾಡಿ, ಜ್ಞಾನವನ್ನು ಸಂಪಾದಿಸಿಕೊಳ್ಳಿ, ಸೃಷ್ಟಿಗೆ ವಿರುದ್ಧವಾಗಿ ಪ್ರವರ್ತಿಸಬೇಡಿ, ಆನಂದವಾಗಿ ಜೀವಿಸಿ.

## ಸೃಷ್ಟಿಯ ಬಗ್ಗೆ ಆಲೋಚಿಸಿ

ಮುಖ್ಯವಾಗಿ ತಾನು ಈ ಸೃಷ್ಟಿಯಲ್ಲಿ ಜೀವಿಸುತ್ತಿರುವ ವಿಷಯವನ್ನು ಮರೆಯಬಾರದು. ಇದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು. ಅಷ್ಟೇ ಅಲ್ಲದೆ ಈ ಸೃಷ್ಟಿಯಲ್ಲಿ ಜೀವಿಸುತ್ತಿರುವ ಎಲ್ಲರೂ ಈ ಸೃಷ್ಟಿ ನಿಯಮಗಳಿಗೆ ಬದ್ಧರಾಗಿರಬೇಕು. ಅಂದರೆ ಸೃಷ್ಟಿಗೆ ಅನುಗುಣವಾಗಿ ಜೀವಿಸಬೇಕು. ವಿರುದ್ಧವಾಗಿ ಜೀವಿಸಿದರೆ ಸೃಷ್ಟಿ ನಿಯಮಾನುಸಾರ ಶಿಕ್ಷೆಗಳನ್ನು ಅನುಭವಿಸಬೇಕಾಗಿ ಬರುತ್ತದೆಯೆಂದು ತಿಳಿದುಕೊಳ್ಳಬೇಕು. ಆ ಶಿಕ್ಷೆಗಳೇ ಮಾನವರಿಗೆ ಬರುವ ಕಷ್ಟಗಳೆಂದು ಕೂಡಾ ತಿಳಿದುಕೊಳ್ಳಬೇಕು. ಆದ್ದರಿಂದ ಮಾನವರಿಗೆ ಕಷ್ಟಗಳು ಬರಬಾರದೆಂದರೆ ಕಡ್ಡಾಯವಾಗಿ ಸೃಷ್ಟಿ ನಿಯಮಗಳನ್ನು ಪಾಲಿಸಬೇಕು. ಆ ಸೃಷ್ಟಿ ನಿಯಮಗಳನ್ನೇ "ಧರ್ಮಗಳು" ಎನ್ನುತ್ತಾರೆ. ಅಂದರೆ ಈ ಸೃಷ್ಟಿಯಲ್ಲಿ ಜೀವಿಸುವ ಪ್ರತಿಯೊಬ್ಬರು ಸೃಷ್ಟಿ ಧರ್ಮಗಳನ್ನು ಅನುಸರಿಸಿ ಜೀವಿಸಬೇಕು, ಸೃಷ್ಟಿ ಧರ್ಮಗಳನ್ನು ಪಾಲಿಸಬೇಕು, ಸೃಷ್ಟಿ ಧರ್ಮಗಳಿಗೆ ಅನುಗುಣವಾದ ಕೆಲಸಗಳನ್ನು ಮಾಡಬೇಕು. ಇವುಗಳನ್ನೆ ಮಾಡಬೇಕಾದ ಕೆಲಸಗಳು ಅಥವಾ ಧರ್ಮಗಳು ಎನ್ನುತ್ತಾರೆ. ಹಾಗೆ ಜೀವಿಸುವುದೆ ಸರಿಯಾದ, ಜೀವನ. ಹಾಗೆಯೆ ಸೃಷ್ಟಿ ಧರ್ಮಗಳಿಗೆ ವಿರುದ್ಧವಾದ ಕೆಲಸಗಳನ್ನು ಮಾಡಬಾರದು. ಮಾಡಿದಾಗ ಇವುಗಳನ್ನು ಅಧರ್ಮ ಎನ್ನುತ್ತಾರೆ. ಹಾಗೆ ಜೀವಿಸುವುದೇ ಸರಿಯಲ್ಲದ, ಅಸ್ತವ್ಯಸ್ತವಾದ ಜೀವನ. ಆದ್ದರಿಂದ ಈ ಧರ್ಮದ ಕುರಿತು ಅಧರ್ಮದ ಕುರಿತು, ಧರ್ಮದ ಶ್ರೇಷ್ಠತನವನ್ನು ಕುರಿತು ನಾವು ಸ್ವಲ್ಪ ತಿಳಿದುಕೊಳ್ಳೋಣ.

# ಧರ್ಮ -ಅಧರ್ಮ!

ವ್ಯಾಸ ಭಗವಾನನು ಧರ್ಮದ ವಿಶಿಷ್ಟತೆಯನ್ನು ಲೋಕಕ್ಕೆ ನೀಡಬೇಕೆಂದು ಬರೆದ ಮಹಾಕಾವ್ಯ "ಮಹಾಭಾರತ". ಸೃಷ್ಟಿಯಲ್ಲಿ ಧರ್ಮದ ಶ್ರೇಷ್ಠತೆಯನ್ನು ನಾವು ಮಹಾಭಾರತದಿಂದ ತಿಳಿದುಕೊಳ್ಳುತ್ತೇವೆ. ವೇದಗಳನ್ನು ಲೋಕಗಳಿಗೆ ನೀಡಿದ ಬ್ರಹ್ಮರ್ಷಿ, ಮಹಾಮಹಾ ಶ್ರೇಷ್ಠರಾದ ದೊಡ್ಡ ಋಷಿ, ವ್ಯಾಸ ಮಹರ್ಷಿ. ಆತನು ಸೃಷ್ಟಿ ಧರ್ಮಗಳನ್ನು ಧೃಢವಾಗಿ ಹೇಳಿದ್ದಾರೆ. ಅದಕ್ಕಾಗಿಯೇ ಎಷ್ಟು ದೊಡ್ಡ ಮಹಾಕಾವ್ಯವನ್ನು ಬರೆದಿದ್ದಾರೆ ಎಂದು ನಾವು ತಿಳಿದುಕೊಳ್ಳಬಹುದು.

ಮಹಾಭಾರತವೆಲ್ಲಾ ಎರಡು ವಿಷಯಗಳ ಮೇಲೆ ನಡೆದಿದೆ. ಅದು ಪಾಂಡವರು, ಕೌರವರ ಮಧ್ಯೆ ನಡೆದ ಯುದ್ಧವಲ್ಲ. ಅದು ಧರ್ಮಕ್ಕೆ, ಅಧರ್ಮಕ್ಕೆ ಮಧ್ಯೆ ನಡೆದ ಯುದ್ಧ. ಅದು ಧರ್ಮದ ದೊಡ್ಡತನ, ಧರ್ಮಾ ಚರಣೆಯಿಂದ ಉಂಟಾಗುವ ಲಾಭವನ್ನು ತಿಳಿಯಪಡಿಸಿದೆ . ಅಷ್ಟೇ ಅಲ್ಲದೆ ಅಧರ್ಮದ ಪರ್ಯಾವಸಾನವನ್ನು ಭೋದಿಸಿದ ಅದ್ಭುತ ಕಾವ್ಯ. ಅದು ಧರ್ಮವನ್ನು ಅನುಸರಿಸಿದ ಪಾಂಡವರಿಗೆ, ಅಧರ್ಮವನ್ನು ಆಶ್ರಯಿಸಿದ ಕೌರವರಿಗೂ ಮಧ್ಯೆ ಜರುಗಿದ ಯುದ್ಧವನ್ನು ಬೋಧಿಸಿದೆ! ಅಂದರೆ 'ಧರ್ಮಾಧರ್ಮಗಳ' ಪರ್ಯಾವಸಾನವನ್ನು ಬೋಧಿಸಿದೆ.

ಮಹಾಭಾರತ ಕಾವ್ಯವನ್ನು ನಾವು ಅಧ್ಯಯನ ಮಾಡಿದರೆ ಕೆಲವು ವಿಷಯಗಳು ತಿಳಿಯುತ್ತವೆ. ಅಧರ್ಮವನ್ನು ಆಶ್ರಯಿಸಿದ ಕೌರವರ ಹತ್ತಿರ ಸೈನಿಕ ಬಲವು ಅಧಿಕವಾಗಿದೆ. ಅತಿರಥ ಮಹಾರಥರಾದ ಮಹಾ ಯೋಧರೆಲ್ಲಾ ಇದ್ದಾರೆ. ಆದರೆ ಪರಾಜಿತರಾದರು. ಧರ್ಮವನ್ನು ಆಶ್ರಯಿಸಿದ ಪಾಂಡವರಿಗೆ ಸೈನಿಕ ಬಲವು ಕಡಿಮೆ, ಅತಿರಥ ಮಹಾರಥರು ಕೂಡ ಕಡಿಮೆ. ಆದರೆ ಕಡೆಗೆ ವಿಜಯವನ್ನು ಸಾಧಿಸಿದರು.

ಅಲ್ಲದೆ ಅಧರ್ಮವನ್ನು ಆಶ್ರಯಿಸಿದ ಕೌರವರಿಗೆ ದೈವ ಬಲವಿಲ್ಲ. ಆದರೆ ಧರ್ಮವನ್ನು ಕಾಪಾಡಿದ ಪಾಂಡವರ ಪಕ್ಷದಲ್ಲಿ ದೈವ ಬಲವಿದೆ. ಅಂದರೆ ದೇವರಿದ್ದಾನೆ, ಶ್ರೀಕೃಷ್ಣನಿದ್ದಾನೆ. ಅಂದರೆ ದೈವಾನುಗ್ರಹ ಧರ್ಮವನ್ನು ಆಶ್ರಯಿಸಿದವರಿಗೆ ಇರುತ್ತದೆ ಎಂದು ಇದನ್ನು ನೋಡಿದರೆ ನಮಗೆ ತಿಳಿಯುತ್ತದೆ.

ಧರ್ಮವನ್ನು ಆಶ್ರಯಿಸಿದ ಪಾಂಡವರು ತಾತ್ಕಾಲಿಕವಾಗಿ ಮೊದಲಲ್ಲಿ ಕಷ್ಟಗಳ ಪಾಲಾದ ಹಾಗೇ ಕಾಣಿಸಿದರು, ಆದರೆ ಕೊನೆಗೆ ವಿಜಯವನ್ನು ಸಾಧಿಸಿದರು, ಸುಖಿಸಿದರು. ಅಧರ್ಮವನ್ನು ಆಶ್ರಯಿಸಿದ ಕೌರವರು ಮೊದಲಲ್ಲಿ ಭೋಗಗಳನ್ನು ಹೊಂದಿದ ಹಾಗೆ ಕಾಣಿಸಿದರು. ಆದರೆ ಕೊನೆಗೆ ಪರಾಜಯದ ಪಾಲಾದರು, ನಾಶವಾದರು.

ಯಾರಾದರೂ, ಎಂತಹವರಾದರೂ ಸರಿ ಅಧರ್ಮವನ್ನು ಆಶ್ರಯಿಸಿದರೆ, ಅಧರ್ಮವನ್ನು ಸಮರ್ಥಿಸಿದರೆ, ಅಧರ್ಮ ಪಕ್ಷದಲ್ಲಿ ಇದ್ದರೆ, ಅಧರ್ಮವನ್ನು ನೋಡುತ್ತಾ ಸುಮ್ಮನೆ ಇದ್ದರೂ ನಾಶವಾಗುತ್ತಾರೆಂದು, ಶಿಕ್ಷೆಯನ್ನು ಅನುಭವಿಸುತ್ತಾರೆಂದು ಮಹಾಭಾರತದಿಂದ ತಿಳಿಯುತ್ತದೆ. ಧರ್ಮವನ್ನು ಆಶ್ರಯಿಸಿದವರಿಗೆ ದೈವಶಕ್ತಿ ಜೊತೆಯಾಗಿ ಇರುತ್ತದೆ, ಅವರಿಗೆ ಆಪತ್ ಸಮಯದಲ್ಲಿ ಅಲ್ಲದೆ ಯಾವಾಗಲೂ ದೈವಶಕ್ತಿ ಕಾಪಾಡುತ್ತಾ ಇರುತ್ತದೆ ಎನ್ನುವುದು ಮಹಾಭಾರತದಲ್ಲಿನ ಸಂದೇಶ. ಅಷ್ಟೇ ಅಲ್ಲದೆ ಅಧರ್ಮವನ್ನು ಆಶ್ರಯಿಸಿದರವರ ಕಡೆ ದೈವವು ಇರುವುದಿಲ್ಲ, ದೈವವು ದೂರವಾಗುತ್ತಾನೆ, ದೈವದಿಂದ ಶಿಕ್ಷೆಗೆ ಒಳಗಾಗುತ್ತಾನೆಂದು ಕೂಡ ತಿಳಿಯುತ್ತದೆ.

ಧುರ್ಯೋದನ, ಶಕುನಿ, ಕರ್ಣ ಇವರಿಗೆ ಧರ್ಮ ತಿಳಿದಿದೆ ಆದರೆ ಅಧರ್ಮವನ್ನೇ ಆಶ್ರಯಿಸಿದರು. ಹಾಗೆಯೇ ಭೀಷ್ಮನು, ದ್ರೋಣನಂತಹವರಿಗೆ ಕೂಡ ಧರ್ಮ ತಿಳಿದಿದೆ ಆದರೆ ಅಧರ್ಮವನ್ನೇ ನೋಡುತ್ತಾ ಸುಮ್ಮನಿದ್ದರು. ಅಧರ್ಮದ ಪಕ್ಷದಲ್ಲಿ ಇದ್ದರು. ಆದ್ದರಿಂದಲೆ ಎಲ್ಲರೂ ನಾಶವಾದರು, ಶಿಕ್ಷಿಸಲ್ಪಟ್ಟರು. ಪಾಂಡವರು ಧರ್ಮವನ್ನು ರಕ್ಷಿಸಿದರು.... ಕೊನೆಗೆ ರಕ್ಷಿಸಲ್ಪಟ್ಟರು. ಆದ್ದರಿಂದಲೇ "ಧರ್ಮೊ ರಕ್ಷತಿ ರಕ್ಷಿತಃ "ಎಂದು ಹೇಳಿದ್ದಾರೆ.

ಮಹಾಭಾರತದ ಗಾಥೆಯ ಸಂದೇಶವು ಪ್ರತಿಯೊಬ್ಬರನ್ನು ಧರ್ಮವನ್ನು ರಕ್ಷಿಸಲೆಂದೆ. ಆದ್ದರಿಂದ ಧರ್ಮವೆಂದರೆ ಏನು? ಧರ್ಮದ ಕುರಿತು ವಿಷಯಗಳನ್ನು ಮತ್ತಷ್ಟು ತಿಳಿದುಕೊಳ್ಳೋಣ.

**‘‘ಧರ್ಮವೆಂದರೆ, ಯಾರು ಈ ಸೃಷ್ಟಿಯನ್ನು ಸೃಷ್ಟಿಸಿದರೋ... ಆ ಸೃಷ್ಟಿಕರ್ತ.... ಅಂದರೆ ಭಗವಂತನು ಏರ್ಪಡಿಸಿದ ನಿಯಮಗಳು; ಈ ಸೃಷ್ಟಿಯಲ್ಲಿನ ಜೀವಿಗಳು, ಜೀವ ರಾಶಿಗಳು ಅನುಸರಿಸಬೇಕಾದ ನಿಯಮಗಳನ್ನೇ ಧರ್ಮಗಳು ಅನ್ನುತ್ತಾರೆ.**

ಪ್ರತಿ ಜೀವಿಯು ಹೇಗೆ ಜೀವಿಸಬೇಕು? ಹೇಗೆ ನಡೆದುಕೊಳ್ಳಬೇಕು? ಎಂದು ತಿಳಿಸುವುದು **ಧರ್ಮ**. ಭಗವಂತನು ತನ್ನ ಸೃಷ್ಟಿಯಲ್ಲಿ ಸಮಸ್ತ ಜೀವಿಗಳನ್ನು ಆನಂದವಾಗಿ ಜೀವಿಸುವುದಕ್ಕೋಸ್ಕರ ಮಾಡಿದ ನಿಯಮವೇ ಧರ್ಮಗಳು.

ಧರ್ಮವೆಷ್ಟು ಶ್ರೇಷ್ಠವೆಂದರೆ, ಒಂದು ಆನೆಯ ಪಾದ ಮುದ್ರೆಯಲ್ಲಿ ಎಲ್ಲಾ ಪ್ರಾಣಿಗಳ ಪಾದ ಮುದ್ರೆಗಳು ಹೇಗೆ ಬೆರೆತಿವೆಯೊ ಹಾಗೆಯೇ ಒಂದು ಧರ್ಮದಲ್ಲಿಯೇ ಎಲ್ಲವೂ ಇವೆ. ಕಾರಣ ಸೃಷ್ಟಿಯಲ್ಲಿ ಪ್ರತಿಯೊಂದು ಧರ್ಮವನ್ನು ಅನುಸರಿಸಿಯೇ ಇರುತ್ತದೆ. ಆದ್ದರಿಂದ ಪ್ರತಿಯೊಬ್ಬರು ಧರ್ಮವನ್ನು ಅನುಸರಿಸಬೇಕು, ಕಾಪಾಡಬೇಕು, ಇದೇ ಪ್ರಕೃತಿಯ ಧರ್ಮ. ಧರ್ಮವಿಲ್ಲದೆ ಸೃಷ್ಟಿಯು ನಿಲ್ಲುವುದಿಲ್ಲ .ಆದ್ದರಿಂದಲೇ ಸೃಷ್ಟಿಯು ಧರ್ಮದ ಮೇಲೆ ಆಧಾರ ಪಟ್ಟಿದೆ.

ಆದ್ದರಿಂದ "ಧರ್ಮೋ ರಕ್ಷತಿ ರಕ್ಷಿತಃ" ಎಂದರು. "ಧರ್ಮವನ್ನು ರಕ್ಷಿಸಿದರೆ ಅದು ನಿಮ್ಮನ್ನು ರಕ್ಷಿಸುತ್ತದೆ" ಎಂದು ಅರ್ಥ. ಹೀಗಾಗಿ ಮಾನವರು ರಕ್ಷಿಸಲ್ಪಡಬೇಕೆಂದರೆ ಮೊದಲು ಮಾನವನು ಧರ್ಮವನ್ನು ರಕ್ಷಿಸಬೇಕು. ಧರ್ಮವನ್ನು ರಕ್ಷಿಸದೆ ಹೋದರೆ ಮಾನವನನ್ನು ಯಾರೂ ರಕ್ಷಿಸುವುದಿಲ್ಲ, ಮಾನವನು ರಕ್ಷಿಸಲ್ಪಡುವುದಿಲ್ಲ. ಪೂಜೆಯಿಂದ, ತೆಂಗಿನಕಾಯಿಯಿಂದ, ಬಾಳೆ ಹಣ್ಣಿನಿಂದ, ಹರಕೆಗಳಿಂದ, ಪ್ರಾರ್ಥನೆಗಳಿಂದ ಯಾರು ರಕ್ಷಿಸಲ್ಪಡುವುದಿಲ್ಲ. ಕಾರಣ 'ಧರ್ಮವೇ' ಯಾರನ್ನಾದರೂ ರಕ್ಷಿಸುತ್ತದೆ. ಆದ್ದರಿಂದ ಮಾನವನು 'ಧರ್ಮವನ್ನು' ಆಶ್ರಯಿಸಬೇಕು, 'ಧರ್ಮವನ್ನು' ಆಚರಿಸಬೇಕು. ಅದೇ ಮಾನವನಿಗೆ 'ಶರಣ್ಯಂ', ಅನ್ಯತಾ ಶರಣಂನಾಸ್ತಿ.

ಮಾನವನು ಎಲ್ಲವನ್ನೂ ಆಶ್ರಯಿಸುತ್ತಿದ್ದಾನೆ. ಆದರೆ 'ಧರ್ಮವನ್ನು' ಆಶ್ರಯಿಸುತ್ತಿಲ್ಲ, ಧರ್ಮದ ಬಗ್ಗೆ ಆಲೋಚಿಸುತ್ತಿಲ್ಲ. ಸೃಷ್ಟಿಗೆ ಆಧಾರವಾದ 'ಧರ್ಮ'ವನ್ನು ಆಶ್ರಯಿಸದೆ, ಧರ್ಮವನ್ನು ರಕ್ಷಿಸದೆ ಮಾನವನು ಯಾವಾಗಲೂ ಕಷ್ಟಗಳಿಂದ ಹೊರಬೀಳುವುದಿಲ್ಲ. ಆದರೆ ಮಾನವನು ಕಷ್ಟಗಳಿಂದ ಹೊರಬೀಳುವುದಕ್ಕೆ ವಿಗ್ರಹಗಳನ್ನು ಆಶ್ರಯಿಸುತ್ತಿದ್ದಾನೆ, ಗುಡಿಗಳನ್ನು, ಚರ್ಚ್ ಗಳನ್ನು, ಮಸೀದಿಗಳನ್ನು ಆಶ್ರಯಿಸುತ್ತಿದ್ದಾನೆ. ಪೂಜೆಗಳನ್ನು, ಪ್ರಾರ್ಥನೆಗಳನ್ನು, ನಮಾಜುಗಳನ್ನು ಆಶ್ರಯಿಸುತ್ತಿದ್ದಾನೆ. ಆದರೆ 'ಧರ್ಮವನ್ನು' ಮಾತ್ರ ಆಶ್ರಯಸುತ್ತಿಲ್ಲ. ಆದ್ದರಿಂದ ಆಲೋಚಿಸಬೇಕಾದದ್ದು ಧರ್ಮದ ಕುರಿತಾಗಿ ಹೊರತು ಆರಾಧನೆಯ ಬಗ್ಗೆ ಅಲ್ಲ.

ಧರ್ಮವನ್ನು ಆಶ್ರಯಿಸಬೇಕೆಂದರೆ! ಕಾಪಾಡಬೇಕೆಂದರೆ ಧರ್ಮವೆಂದರೆ ಏನೆಂದು ತಿಳಿದುಕೊಳ್ಳಬೇಕು. ಮತ್ತೆ ನಮಗೆ ಧರ್ಮವು ಹೇಗೆ ತಿಳಿಯುತ್ತದೆ? ತಿಳಿದುಕೊಂಡ ಧರ್ಮವನ್ನು ಆಚರಿಸಬೇಕೆಂದರೆ ಏನು ಮಾಡಬೇಕು? ಎನ್ನುವುದನ್ನು ಮೊದಲು ನಾವು ತಿಳಿದುಕೊಳ್ಳಬೇಕು.

**"ಧರ್ಮವೆನ್ನುವುದು ಹೊರಗಿನವರು ನಮಗೆ ಹೇಳುವುದಲ್ಲ. ನಮ್ಮ ಅಂತರಾತ್ಮದಿಂದ ಸಹಜವಾಗಿ ಬರುವುದು" ಎಂದು ಪತ್ರೀಜಿ ಹೇಳಿದ್ದಾರೆ. ಕಾರಣ "ಸೃಷ್ಟಿ ಮಾಡಿದ ಆತ್ಮಕ್ಕೆ ಸೃಷ್ಟಿಯ ಧರ್ಮಗಳು ತಿಳಿಯುತ್ತವೆ. ಆದರೆ ಸೃಷ್ಟಿಸಲ್ಪಟ್ಟ ಮನಸ್ಸಿಗೆ ಸೃಷ್ಟಿಯ ಧರ್ಮಗಳು ತಿಳಿಯುವುದಿಲ್ಲ"**.

ಧರ್ಮವನ್ನು ನಿರ್ದೇಶಿಸಿದ್ದು ಭಗವಂತನೇ ಆದ್ದರಿಂದ, ಧರ್ಮವು ಆತನಿಗೇ ತಿಳಿದಿದೆ. ಹಾಗಾಗಿ ಆತನು ಹೇಳಿದ ಹಾಗೆ ಕೇಳಬೇಕು, ನಡೆದುಕೊಳ್ಳಬೇಕು! ಇದು ಹೇಗೆ ಸಾಧ್ಯವಾಗುತ್ತದೆ?

ಭಗವಂತನು ಎಲ್ಲರಲ್ಲಿ 'ಆತ್ಮದ' ರೂಪದಲ್ಲಿ ಇದ್ದಾನೆ. ಆತನು ಎಲ್ಲರಿಗೂ ಅವರವರ ಧರ್ಮವನ್ನು ಆಗಿಂದಾಗೆ ತಿಳಿಯಪಡಿಸುತ್ತಿದ್ದಾನೆ. ಗಮನಿಸಿದರೆ ನಮಗೆ ಇದು ಸ್ಪಷ್ಟವಾಗಿ ತಿಳಿಯುತ್ತದೆ. ಯಾರಾದರೂ ಸರಿ ಸೃಷ್ಟಿ ಧರ್ಮಗಳಿಗೆ ವಿರುದ್ಧವಾಗಿ ಪ್ರವರ್ತಿಸುತ್ತಿದ್ದರೆ,

ಮಾತನಾಡುತ್ತಿದ್ದರೆ, ಮಾಡುತ್ತಿದ್ದರೆ ಹಿಂದೆಯೇ ಅಂತರಾತ್ಮದಿಂದ ಎಚ್ಚರಿಕೆ ಬರುತ್ತದೆ. ಹಾಗೆ ಮಾಡಬಾರದು ಎಂದು ತಿಳಿಯುತ್ತದೆ. ಹಾಗೆ ಪ್ರತಿ ವಿಷಯದಲ್ಲಿ, ಪ್ರತಿ ಕೆಲಸದಲ್ಲಿ, ಪ್ರತಿಕ್ಷಣ ಎಚ್ಚರಿಕೆ ಬರುತ್ತಲೇ ಇರುತ್ತದೆ. ಅಂದರೆ ಭಗವಂತನು ಅಂತರಾತ್ಮ ರೂಪದಲ್ಲಿ ಎಚ್ಚರಿಸುತ್ತಾ ಇರುತ್ತಾನೆ . ಆದರೆ ಮಾನವನು ಅದನ್ನು ಗಮನಿಸುವುದಿಲ್ಲ. ಆದ್ದರಿಂದ "ಅಂತರಾತ್ಮ ಹೇಳಿದ ವಿಧವಾಗಿ ನಡೆದುಕೊಂಡರೆ ಧರ್ಮವನ್ನು ಆಚರಿಸಿದ ಹಾಗೆ, ಧರ್ಮವನ್ನು ಕಾಪಾಡಿದ ಹಾಗೆ".

ಮಾನವನು ಆತ್ಮವನ್ನು ಅನುಸರಿಸಬೇಕು, ಮನಸ್ಸನ್ನಲ್ಲ, ಕಾರಣ ಆತ್ಮವೇ ಭಗವಂತನು.

ಮನಸ್ಸೆಂದರೆ ಮಾನವ, ಆ ಮನಸ್ಸನ್ನೇ ಮಾಯೆ ಅನ್ನುತ್ತಾರೆ, ಸೈತಾನ್ ಎಂದು ಸಹ ಅನ್ನುತ್ತಾರೆ. ಮನಸ್ಸೆನ್ನುವ ಮಾಯೆಯಿಂದ ಹೊರಗೆ ಬೀಳಬೇಕೆಂದರೆ... ಅಂದರೆ ಸೈತಾನಿನ ಪ್ರಭಾವವು ಹೋಗಬೇಕೆಂದರೆ ಧ್ಯಾನವೇ ಒಳ್ಳೆಯ ಮಾರ್ಗ. ಕಾರಣ ಧ್ಯಾನ ಮಾಡುತ್ತಾ ಮನಸ್ಸಿನ ಪ್ರಭಾವ ಕಡಿಮೆಯಾಗುತ್ತಾ ಬರುತ್ತದೆ, ಆಗ ಅಂತರಾತ್ಮ ಹೇಳಿದಂತೆ ಕೇಳುತ್ತೇವೆ. ಹಾಗೆ ಧ್ಯಾನ ಮಾಡುವುದರಿಂದ ಅಂತರಾತ್ಮವನ್ನು ಕೇಳುವವರು ಎಲ್ಲಾ ಧರ್ಮಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳುತ್ತಾರೆ, ಧರ್ಮವನ್ನು ಆಚರಿಸುತ್ತಾರೆ.

ಆದ್ದರಿಂದ ಧ್ಯಾನವನ್ನು ವಿಶೇಷವಾಗಿ ಮಾಡೋಣ, ಅಂತರಾತ್ಮವು ಮಾಡುವ ಪ್ರಭೋದಗಳನ್ನು ಅಂದರೆ ಧರ್ಮಗಳನ್ನು ಆಚರಿಸೋಣ, ಧರ್ಮವನ್ನು ಕಾಪಾಡೋಣ, ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳೋಣ, ಮುಖ್ಯವಾಗಿ ಕೆಲವು ಧರ್ಮಗಳನ್ನು ತಿಳಿದುಕೊಳ್ಳೋಣ.

ಈ ಸೃಷ್ಟಿಯಲ್ಲಿ ಎಲ್ಲಾ ಒಂದೇ, ಎಲ್ಲಾ ಸಮಾನವೇ ಎನ್ನುವದು ಮೊದಲನೇ ಧರ್ಮ, ಹಾಗೆಯೇ ಸೃಷ್ಟಿಯನ್ನು, ಸೃಷ್ಟಿಯ ಅಂದವನ್ನು ಅನುಭವಿಸುವ ಹಕ್ಕು ಎಲ್ಲರಿಗೂ ಸಮಾನವಾಗಿದೆ ಎನ್ನುವುದು ಇನ್ನೊಂದು ಧರ್ಮ . ಅಷ್ಟೇ ಅಲ್ಲದೆ ಸೃಷ್ಟಿಯಲ್ಲಿನ ಎಲ್ಲಾ ಜೀವಿಗಳು ಆನಂದವಾಗಿ ಜೀವಿಸಬೇಕೆನ್ನುವುದೇ ಇನ್ನೊಂದು ಧರ್ಮ. ಆದ್ದರಿಂದ ತನ್ನ ಆನಂದಕ್ಕಾಗಿ ಇನ್ನೊಬ್ಬರ ಆನಂದವನ್ನು ಕಿತ್ತು ಕೊಳ್ಳಬಾರದು.

ಯಾರು ಏನು ಮಾಡಿದರೆ ಅದನ್ನೇ ಹೊಂದಬೇಕೆನ್ನುವುದು ಇನ್ನೊಂದು ಧರ್ಮ. ಅಂದರೆ ಕೆಟ್ಟದ್ದನ್ನು ಮಾಡಿದರೆ ಕೆಟ್ಟದ್ದು... ಒಳ್ಳೆಯದು ಮಾಡಿದರೆ ಒಳ್ಳೆಯದನ್ನು ಹೊಂದುತ್ತಾರೆ. ಅಷ್ಟೇ ಅಲ್ಲದೆ ಯಾವುದು ಕೊಟ್ಟರೆ ಅದನ್ನೆ, ಏನು ಕೊಟ್ಟರೆ ಅದನ್ನೇ , ಎಷ್ಟು ಕೊಟ್ಟರೆ ಅಷ್ಟನ್ನು ಹೊಂದುತ್ತಾರೆಂದು ತಿಳಿದುಕೊಳ್ಳಬೇಕು. ಆದ್ದರಿಂದ ಏನು ಬಿತ್ತಿದರೆ ಅದೇ ಬೆಳೆಯುತ್ತದೆಯೆಂದು ಜೀಸಸ್ ಹೇಳಿದ್ದಾರೆ. ಅಂದರೆ ಆನಂದವನ್ನು ಹಂಚಿದರೆ ಆನಂದವು, ಶಾಂತಿಯನ್ನು ಹಂಚಿದರೆ ಶಾಂತಿಯು, ದುಃಖವನ್ನುಂಟು ಮಾಡಿದರೆ ದುಃಖವು, ಹಿಂಸೆ ಮಾಡಿದರೆ ಹಿಂಸೆ, ನಷ್ಟವನ್ನು ಉಂಟುಮಾಡಿದರೆ ನಷ್ಟವನ್ನು ಹೊಂದುತ್ತಾರೆಂದು ತಿಳಿದುಕೊಳ್ಳಬೇಕು.

# ಆಚಾರ–ಧರ್ಮ

ಆದರೆ ಪ್ರಸ್ತುತ ಲೋಕದಲ್ಲಿ ಮಾನವರು ಧರ್ಮಗಳಿಗಿಂತಲೂ ಆಚಾರಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ. ಅಷ್ಟೇ ಅಲ್ಲದೆ ಆಚಾರಗಳ ಕುರಿತು ಆಲೋಚಿಸುತ್ತಿದ್ದಾರೆ, ಆದರೆ ಧರ್ಮದ ಬಗ್ಗೆ ಆಲೋಚಿಸುತ್ತಿಲ್ಲ, ಆಚಾರಗಳನ್ನು ಕಾಪಾಡುತ್ತಿದ್ದಾರೆ ಆದರೆ ಧರ್ಮಗಳನ್ನು ಕಾಪಾಡುತ್ತಿಲ್ಲ. ಬೋಧಿಸುವವರು ಕೂಡ ಆಚಾರಗಳನ್ನು ಅನುಸರಿಸಲು ಹೇಳುತ್ತಿದ್ದಾರೆ. ಆದರೆ ಧರ್ಮಗಳನ್ನು ಅನುಸರಿಸುತ್ತಿಲ್ಲ ಕಾರಣ ಧರ್ಮದ ಪ್ರಾಮುಖ್ಯತೆಯ ಬಗ್ಗೆ ತಿಳಿಯದೆ. ಆಚಾರಗಳನ್ನೇ ಧರ್ಮಗಳೆಂದುಕೊಳ್ಳುತ್ತಿದ್ದಾರೆ. ಕಾರಣ ಆಚಾರಗಳಿಗೂ, ಧರ್ಮಗಳಿಗೂ ವ್ಯತ್ಯಾಸವನ್ನು ತಿಳಿಯದಿರುವುದರಿಂದ ಲೇ... ಈ ಎರಡಕ್ಕೂ ವ್ಯತ್ಯಾಸವನ್ನು ತಿಳಿದುಕೊಳ್ಳೋಣ.

ಯಾವುದೇ ಒಂದು ಕುಟುಂಬ ದಲ್ಲಾಗಲಿ, ಕುಲದಲ್ಲಾಗಲಿ, ಮತದಲ್ಲಾಗಲಿ, ಪ್ರಾಂತ್ಯದಲ್ಲಾಗಲಿ ಕೆಲವು ಹಿರಿಯರಿರುತ್ತಾರೆ. ಹಾಗೆ ಕುಟುಂಬದಲ್ಲಿ ಇರುವವರನ್ನು ಕುಟುಂಬದ ಹಿರಿಯರು ಎಂದೆನ್ನುತ್ತಾರೆ. ಅದೇ ಕುಲದಲ್ಲಾದರೆ ಕುಲದ ಹಿರಿಯರು ಎನ್ನುತ್ತಾರೆ. ಮತದಲ್ಲಾದರೆ ಮತದ ಹಿರಿಯರು ಎನ್ನುತ್ತಾರೆ. ಅದೇ ಒಂದು ಪ್ರಾಂತದಲ್ಲಾದರೆ, ದೇಶದಲ್ಲಾದರೆ ನಾಯಕರು ಎನ್ನುತ್ತಾರೆ. ಅವರು ಸಹಜವಾಗಿ ತಮ್ಮ ಕುಟುಂಬಿಕರ ಸೌಕರ್ಯಕ್ಕಾಗಿ , ಕುಲಸ್ಥರ ಸೌಕರ್ಯಕ್ಕಾಗಿ, ಮತಸ್ಥರ ಸೌಕರ್ಯಕ್ಕಾಗಿ, ಪ್ರಾಂತ, ದೇಶ ಪ್ರಜೆಗಳ ಸೌಕರ್ಯಕ್ಕಾಗಿ ಕೆಲವು ನಿಯಮಗಳನ್ನು ಏರ್ಪಾಡು ಮಾಡಿದ್ದಾರೆ. ಹಾಗೆ ಏರ್ಪಾಡು ಮಾಡಿದ ನಿಯಮಗಳನ್ನು ಸಾಂಪ್ರದಾಯಿಕವಾಗಿ ಆ ಕುಟುಂಬದಲ್ಲಿ ,ಆ ಕುಲದಲ್ಲಿ, ಆ ಮತದಲ್ಲಿ ಆಚರಿಸುತ್ತಾ ಇರುತ್ತಾರೆ. ಹಾಗೆ ಆಚರಿಸುತ್ತಾ ಬರುತ್ತಿರುವುದನ್ನೆ "ಆಚಾರಗಳು" ಎನ್ನುತ್ತಾರೆ.

ಹಾಗೆಯೆ ಭಗವಂತನು ತಾನು ಮಾಡಿದ ಸೃಷ್ಟಿಯಲ್ಲಿ ಸಮಸ್ತ ಜೀವಿಗಳು, ಪ್ರಾಣಿಗಳು ಆನಂದವಾಗಿ ಜೀವಿಸುವುದಕ್ಕಾಗಿ ಕೆಲವು ನಿಯಮಗಳನ್ನು ಏರ್ಪಾಡು ಮಾಡಿದ್ದಾನೆ. ಹಾಗೆ ಭಗವಂತನು ಏರ್ಪಾಡು ಮಾಡಿದ ಆ ನಿಯಮಗಳನ್ನೆ “ಧರ್ಮಗಳು” ಎಂದೆನ್ನುತ್ತಾರೆ.

ಆಚಾರಗಳನ್ನು ಮಾನವರು ಏರ್ಪಾಡು ಮಾಡಿಕೊಂಡಿರುವುದು. ಆದರೆ ಧರ್ಮಗಳನ್ನು ಭಗವಂತನು ಮಾಡಿರುವುದು, ಆದರೆ ಗಮನಿಸಿದರೆ ಲೋಕದಲ್ಲಿ ಹಿರಿಯರು ಮಾಡಿದ ಆಚಾರಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ, ಭಗವಂತನು ಮಾಡಿದ ಧರ್ಮಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿಲ್ಲ. ಆಲೋಚಿಸಿದರೆ ಆಚಾರಗಳಿಗಿಂತ ಭಗವಂತನ ಧರ್ಮಗಳೇ ಮುಖ್ಯ. ಕಾರಣ ಮಾನವನು

ಜೀವಿಸುತ್ತಿರುವುದು ಭಗವಂತನ ಸೃಷ್ಟಿಯಲ್ಲಿ. ಈ ಸೃಷ್ಟಿಯನ್ನು ನಡೆಸುತ್ತಿರುವುದು ಭಗವಂತ. ಸೃಷ್ಟಿಯು ನಡೆಯಲ್ಪಡುತ್ತಿರುವುದು ಭಗವಂತನು ಏರ್ಪಾಡು ಮಾಡಿದ ಧರ್ಮ ಸೂಕ್ಷ್ಮಗಳ ಜೊತೆ. ಮಾನವನು ಆಚಾರಗಳಿಗೆ ಕಟ್ಟುಬಿದ್ದು ಅವುಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾನೆ. ತನ್ನ ಕುಟುಂಬಕ್ಕೆ, ಕುಲಕ್ಕೆ, ಮತಕ್ಕೆ, ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾನೆ. ಆದರೆ ಭಗವಂತನ ಧರ್ಮಗಳಿಗೆ, ಸೃಷ್ಟಿ ಧರ್ಮಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿಲ್ಲ, ಭಯಪಡುತ್ತಿಲ್ಲ.

ಆಲೋಚಿಸಿ, ಧರ್ಮವನ್ನು ಆಚರಿಸಲಾರದೆ ಹೋದರೆ, ಸೃಷ್ಟಿ ನಿಯಮಗಳನ್ನು ಅನುಸಾರ ಶಿಕ್ಷೆಯನ್ನು ಅನುಭವಿಸುತ್ತಾರೆ, ನಷ್ಟವನ್ನು ಹೊಂದುತ್ತಾರೆ. ಜೀವನದಲ್ಲಿ ಯಾವಾಗಲೋ ಒಂದು ಬಾರಿ ಅದರ ಫಲಿತವನ್ನು ಅನುಭವಿಸಬೇಕಾಗಿ ಬರುತ್ತದೆ. ಈ ಜನ್ಮದಲ್ಲಾಗಲಿ, ಯಾವುದೋ ಒಂದು ಜನ್ಮದಲ್ಲಾಗಲಿ ಅನುಭವಿಸಿಯೇ ತೀರಬೇಕು. ಮರಣಿಸಿದರೂ ಅದರಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ.

ಯಾರಾದರೂ ಮಾನವರಿಂದ ತಪ್ಪಿಸಿಕೊಳ್ಳಬಹುದು ಆದರೆ ಸೃಷ್ಟಿ ಧರ್ಮದಿಂದ ಯಾರೂ ತಪ್ಪಿಸಿಕೊಳ್ಳಲಾಗುವುದಿಲ್ಲ. ಕಾರಣ ಕಾಣಿಸುವ ಮಾನವರಿಗಿಂತಲೂ ಕಾಣಿಸದಿರುವ ಭಗವಂತನೇ ಶ್ರೇಷ್ಠನು. ಅಷ್ಟೇ ಅಲ್ಲದೆ ಆಚಾರಗಳನ್ನು ಮಾನವರು ತಮ್ಮ ಸೌಕರ್ಯಕ್ಕಾಗಿ ಏರ್ಪಾಡು ಮಾಡಿಕೊಂಡಿರುವುದು .ಆದರೆ ಆಚಾರಗಳು ಭಗವಂತನ ಧರ್ಮವನ್ನು ಅನುಸರಿಸಿ ಏರ್ಪಾಡು ಮಾಡಿರುವುದಲ್ಲ. ಸೃಷ್ಟಿಯಲ್ಲಿ ಮಾನವರಿಗೆ ಕಷ್ಟಗಳು ಬರುವುದು ಧರ್ಮವನ್ನು ಉಲ್ಲಂಘಿಸಿದರೆ ಮಾತ್ರ, ಆಚಾರಗಳನ್ನು ಉಲ್ಲಂಘಿಸಿದಾಗ ಅಲ್ಲ. ಆಚಾರಗಳನ್ನು ಪಾಲಿಸದೆ ಹೋದರೆ ಪಾಪವಲ್ಲ, ಧರ್ಮವನ್ನು ಆಚರಿಸದೆ ಹೋದರೆ ಪಾಪ. ಆಚಾರಗಳನ್ನು ಆಚರಿಸದೆ ಹೋದರೆ ಮಾನವನ ದೃಷ್ಟಿಯಲ್ಲಿ ತಪ್ಪು ,ಆದರೆ ಧರ್ಮವನ್ನು ಆಚರಿಸದೆ ಹೋದರೆ ಸೃಷ್ಟಿಯಲ್ಲಿ ಭಗವಂತನ ಲೆಕ್ಕದಲ್ಲಿ ತಪ್ಪಾಗುತ್ತದೆ.

ಏಕೆಂದರೆ ಒಂದು ಕುಟುಂಬದಲ್ಲಿ ಇರುವ ಆಚಾರಗಳು ಇನ್ನೊಂದು ಕುಟುಂಬದಲ್ಲಿ ಇರುವುದಿಲ್ಲ, ಒಂದು ಕುಲದಲ್ಲಿರುವ ಆಚಾರಗಳು ಇನ್ನೊಂದು ಕುಲದಲ್ಲಿ ಇರುವುದಿಲ್ಲ, ಹಾಗೆಯೇ ಒಂದು ಮತದಲ್ಲಿರುವ ಆಚಾರ ಇನ್ನೊಂದು ಮತದಲ್ಲಿ ಇರುವುದಿಲ್ಲ, ಒಂದು ಪ್ರಾಂತದಲ್ಲಿರುವ ಆಚಾರ ಇನ್ನೊಂದು ಪ್ರಾಂತ್ಯದಲ್ಲಿ ಇರುವುದಿಲ್ಲ. ಆದರೆ ಧರ್ಮವು ಎಲ್ಲಾ ಕುಲಗಳಿಗೂ, ಮತಗಳಿಗೂ, ಪ್ರಾಂತಗಳಿಗೂ ಒಂದೆ. ಆಲೋಚಿಸಿದರೆ ಒಂದು ಕಡೆ ತಪ್ಪಾದರೆ ಎಲ್ಲಾ ಕಡೆಯೂ ತಪ್ಪಾಗಬೇಕು, ಒಂದು ಕಡೆ ಒಪ್ಪುವುದಾದರೆ ಎಲ್ಲಾ ಕಡೆ ಒಪ್ಪುವುದಾಗಬೇಕು. ಅದೇ ಧರ್ಮ.

ಗಮನಿಸಿದರೆ ಒಂದು ಮತದಲ್ಲಿ ಹಣೆಗೆ ಕುಂಕುಮ ಇಟ್ಟುಕೊಳ್ಳುವುದು ಆಚಾರ. ಆ ಮತದಲ್ಲಿ ಕುಂಕುಮ ಇಟ್ಟುಕೊಳ್ಳದೆ ಇದ್ದರೆ ಪಾಪ. ಆದರೆ ಇನ್ನೊಂದು ಮತದಲ್ಲಿ

ಕುಂಕುಮ ಇಟ್ಟುಕೊಳ್ಳದೆ ಇರುವುದೇ ಆಚಾರ. ಇಲ್ಲಿ ಕುಂಕುಮ ಇಟ್ಟುಕೊಳ್ಳದಿದ್ದರೆ ಪಾಪವಲ್ಲ. ಹಾಗೆಯೇ ಇನ್ನೊಂದು ಮತದಲ್ಲಿ ಬುರ್ಖಾ ಹಾಕಿಕೊಳ್ಳುವುದು ಆಚಾರ, ಆ ಮತದಲ್ಲಿ ಬುರ್ಖಾ ಇಲ್ಲದಿದ್ದರೆ ಪಾಪ. ಹೀಗೆ ಮತಗಳ ಪ್ರಕಾರ ಆಚಾರಗಳು ಇರುತ್ತವೆ. ಅಂದರೆ ಎಲ್ಲಾ ಮತಗಳಿಗೆ, ಆಚಾರಗಳು ಒಂದೇ ರೀತಿ ಇರುವುದಿಲ್ಲ. ಆದರೆ ಎಲ್ಲಾ ಮತದವರಿಗೂ ಭಗವಂತನ ಧರ್ಮವೊಂದೆ.

ಹಾಗೆಯೇ ಒಂದು ಮತದಲ್ಲಿ ಪೂಜೆ ಮಾಡುವುದು ಆಚಾರ. ಇನ್ನೊಂದು ಮತದಲ್ಲಿ ಪ್ರಾರ್ಥನೆ ಮಾಡುವುದು ಆಚಾರ, ಮತ್ತೊಂದು ಮತದಲ್ಲಿ ನಮಾಜು ಮಾಡುವುದು ಆಚಾರ, ಹಾಗೆಯೆ ಒಂದು ಮತದಲ್ಲಿ ಗುಡಿಗೆ ಹೋಗುವುದು ಆಚಾರ, ಇನ್ನೊಂದು ಮತದಲ್ಲಿ ಚರ್ಚಿಗೆ ಹೋಗುವುದು ಆಚಾರ, ಮತ್ತೊಂದು ಮತದಲ್ಲಿ ಮಸೀದಿಗೆ ಹೋಗುವುದು ಆಚಾರ. ಹಾಗೆ ಮತಗಳ ಪ್ರಕಾರ ಆಚಾರಗಳು ಬದಲಾಗುತ್ತಾ ಇರುತ್ತವೆ.

ಆದರೆ ಮಾನವವರೆಲ್ಲರಿಗೂ ಸಮಾನವಾದದ್ದು ಧರ್ಮ. ಅಂದರೆ ಎಲ್ಲಾ ಕುಲದವರಿಗೂ, ಮತದವರಿಗೂ "ಧರ್ಮವು" ಒಂದೆ.

ಆಚಾರಗಳು ಕುಟುಂಬದ ಪ್ರಕಾರ, ಕುಲದ ಪ್ರಕಾರ, ಮತದ ಪ್ರಕಾರ, ಪ್ರಾಂತಗಳ ಪ್ರಕಾರ ಬದಲಾಗುತ್ತಾ ಇರುತ್ತವೆ. **"ಬದಲಾಗುವುದು ಧರ್ಮವಲ್ಲ, ಬದಲಾಗದೇ ಇರುವುದೇ ಧರ್ಮ**". ಇದನ್ನು ಗಮನಿಸಿದರೆ ಮಾನವರು ಏರ್ಪಾಡು ಮಾಡಿದ ಆಚಾರಗಳು ಕಾಲಾನು ಗುಣವಾಗಿ ಅದೇ ಕುಟುಂಬದಲ್ಲಿ, ಅದೇ ಕುಲದಲ್ಲಿ, ಅದೇ ಮತದಲ್ಲಿ ಬದಲಾಗುತ್ತಾ ಇರುತ್ತವೆ. ಆದರೆ ಕಾಲವು ಬದಲಾದರೂ, ಧರ್ಮಗಳು ಮಾತ್ರ ಬದಲಾಗುವುದಿಲ್ಲ.

ಮಾನವರು **"ಬದಲಾಗುವ ಆಚಾರಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ, ವಿನಃ ಬದಲಾಗದಿರುವ ಧರ್ಮಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಿಲ್ಲ"**. ಆದ್ದರಿಂದ ಕಷ್ಟಗಳ ಪಾಲಾಗುತ್ತಿದ್ದಾರೆ. ಆದ್ದರಿಂದ ಆಲೋಚಿಸಿ ಧರ್ಮವನ್ನು ರಕ್ಷಿಸಿ, ತಪ್ಪದೇ ಅದು ನಿಮ್ಮನ್ನು ರಕ್ಷಿಸುತ್ತದೆ. ಆದ್ದರಿಂದ **"ಧರ್ಮೋ ರಕ್ಷತಿ ರಕ್ಷಿತಃ"** ಎಂದು ಹೇಳುತ್ತಾರೆ. ಮಾನವರನ್ನು ಕಾಪಾಡುವುದು, **"ಮಾನವನು ಕಾಪಾಡಬೇಕಾಗಿರುವುದು ಧರ್ಮವೊಂದನ್ನೆ"**. ಆದ್ದರಿಂದ ಆಲೋಚಿಸಿ ಧರ್ಮವನ್ನು ಕಾಪಾಡಿ.

ಧರ್ಮವನ್ನು ಕಾಪಾಡಬೇಕಾದರೂ, ಧರ್ಮವನ್ನು ಆಚರಿಸಬೇಕೆಂದರು, ಆ ಶಕ್ತಿ ಬೇಕೆಂದರು ಧ್ಯಾನ ಮಾಡಲೇಬೇಕು. ಧ್ಯಾನ ಮಾಡಿದರೆ ಧರ್ಮವನ್ನು ತಿಳಿದುಕೊಳ್ಳುತ್ತಾರೆ ಆದರಿಸುತ್ತಾರೆ.

# ಪ್ರಕೃತಿಯೆಡೆಗೆ ಮಾನವರ ಧರ್ಮ

ಮಾನವರ ಧರ್ಮಗಳಲ್ಲಿ ಒಂದು ಮುಖ್ಯ ಧರ್ಮ 'ಪ್ರಕೃತಿಯನ್ನು ಕಾಪಾಡುವ ಧರ್ಮ'. **"ಆ ಧರ್ಮವನ್ನು ನಾವು ಕಾಪಾಡಿದರೆ! ಆ ಧರ್ಮವೇ ನಮ್ಮನ್ನು ಕಾಪಾಡುತ್ತದೆ. ಅಂದರೆ ಪ್ರಕೃತಿಯನ್ನು ನಾವು ಕಾಪಾಡಿದರೆ! ಆ ಪ್ರಕೃತಿ ನಮ್ಮನ್ನು ಕಾಪಾಡುತ್ತದೆ"**. ಆದ್ದರಿಂದ ಆ ವಿಷಯವನ್ನು ಸ್ವಲ್ಪ ಆಲೋಚಿಸೋಣ.

ಮೊದಲು 'ಪ್ರಕೃತಿ' ಎಂದರೆ ಯಾರೆಂದು ತಿಳಿದುಕೊಳ್ಳೋಣ. ಒಂದು ರೀತಿಯಾಗಿ ಪ್ರಕೃತಿ ಎಂದರೆ 'ಭಗವಂತನೆ'. ಕಾರಣ ಪ್ರಕೃತಿಯಲ್ಲಿ ಪಂಚಭೂತಗಳಿವೆ. ಅವು "ಭೂಮಿ, ನೀರು, ಅಗ್ನಿ, ವಾಯು, ಆಕಾಶ". ಇವೆಲ್ಲವೂ ಭಗವಂತನಿಂದಲೆ ಏರ್ಪಟ್ಟಿವೆ. ಹಾಗೆ ಸಕಲಚರಾಚರ ಸೃಷ್ಟಿ ಪಂಚಭೂತಗಳಿಂದ ಏರ್ಪಟ್ಟಿದೆ. ಆದ್ದರಿಂದ ಪ್ರಕೃತಿಯಲ್ಲಿರುವ ಸಕಲ ಜೀವಿಗಳು, ಪ್ರಾಣಿಗಳು ಕೂಡ ಪ್ರಕೃತಿಯಲ್ಲಿನ ಭಾಗಗಳೇ, ಅಂದರೆ ಭಗವಂತನೇ...

ಎಲ್ಲವೂ ಭಗವಂತನೇ ಆದ್ದರಿಂದ ನಾವು ಪ್ರಕೃತಿಯನ್ನು ಪ್ರೀತಿಸಬೇಕು, ಪ್ರೀತಿಯಿಂದ ನೋಡಬೇಕು, ಸ್ನೇಹವನ್ನು ಮಾಡಬೇಕು, ಸಹಜೀವನವನ್ನು ಮಾಡಬೇಕು. ಪ್ರಕೃತಿಯ ನಿರ್ಣಯಗಳನ್ನು ಗೌರವಿಸಬೇಕು, ಕಾಪಾಡಬೇಕು. ಅಷ್ಟೇ ಹೊರತು ಪ್ರಕೃತಿಯನ್ನು ನಾಶ ಮಾಡಬಾರದು, ದ್ವೇಷ ಮಾಡಬಾರದು, ಹಿಂಸಿಸಬಾರದು, ಬಾಧಿಸಬಾರದು, ಪ್ರಕೃತಿ ನಿರ್ಣಯಗಳನ್ನು ವಿಮರ್ಶೆ ಮಾಡಬಾರದು. ಇದು ಪ್ರಕೃತಿಯ ಬಗ್ಗೆ ಮಾನವರ ಧರ್ಮ. ಇದಕ್ಕೆ ವಿರುದ್ಧವಾಗಿ ಪ್ರವರ್ತಿಸಿದರೆ.... ಭಗವಂತನಿಗೆ ವಿರುದ್ಧವಾಗಿ ಪ್ರವರ್ತಿಸಿದ ಹಾಗೆ. ಅಂತಹವರು ಅದರ ಫಲಿತವನ್ನು ಅನುಭವಿಸಬೇಕು.

ಆದರೆ ಮಾನವರು ಇದನ್ನು ಗುರುತಿಸದೆ ತಮ್ಮ ಸ್ವಾರ್ಥಕ್ಕಾಗಿ, ತುಚ್ಛವಾದ ತಮ್ಮ ಕೋರಿಕೆಗಳನ್ನು ನೆರವೇರಿಸಿಕೊಳ್ಳಲು ಪ್ರಕೃತಿಯನ್ನು, ಪ್ರಕೃತಿಯಲ್ಲಿನ ಜೀವಿಗಳನ್ನು ನಿತ್ಯವೂ ಎಷ್ಟೋ ರೀತಿಯಾಗಿ ಹಿಂಸಿಸುತ್ತಿದ್ದಾರೆ. ಪ್ರತಿದಿನವೂ ತಮ್ಮ ರುಚಿಗೋಸ್ಕರ ಎಷ್ಟೋ ಲಕ್ಷ ಪ್ರಾಣಿಗಳನ್ನು ಕ್ರೂರವಾಗಿ ಸಾಯಿಸಿ ಭಕ್ಷಿಸುತ್ತಿದ್ದಾರೆ. ರಕ್ತಪಾತವನ್ನು ಸೃಷ್ಟಿಸುತ್ತಾ ಪ್ರಕೃತಿಗೆ ಬಾಧೆಯನ್ನು ಉಂಟುಮಾಡುತ್ತಿ ದ್ದಾರೆ. ಮರಗಳನ್ನು, ಕಾಡನ್ನು ತಮ್ಮ ಇಷ್ಟಾನುಸಾರ ಕಡಿಯುತ್ತಾ ನಾಶ ಮಾಡುತ್ತಿದ್ದಾರೆ. ಪ್ರಾಣಿಗಳ ಮಧ್ಯೆ ಸ್ಪರ್ಧೆಯನ್ನಿಟ್ಟು ಅವು ನೋವು ಪಡುತ್ತಿದ್ದರೆ ತಾವು ವಿನೋದಿಸುತ್ತಿದ್ದಾರೆ. ಪಕ್ಷಿಗಳನ್ನು, ಗಿಣಿಗಳನ್ನು ಪಂಜರದಲ್ಲಿ ಬಂದಿಸಿ, ಮೀನನ್ನು ತೊಟ್ಟಿಯಲ್ಲಿಟ್ಟು, ತಾವು ತಮ್ಮ ಆನಂದಕ್ಕಾಗಿ ಅವುಗಳಿಗೆ ಸ್ವೇಚ್ಛೆ ಇಲ್ಲದೆ ಮಾಡುತ್ತಿದ್ದಾರೆ... ಆಲೋಚಿಸುತ್ತಿಲ್ಲ.

ಅಷ್ಟೇ ಅಲ್ಲದೆ ಮಾನವರನ್ನು, ಬಲಹೀನರನ್ನು, ಸ್ತ್ರೀಯರನ್ನು ಹಿಂಸಿಸುತ್ತಿದ್ದಾರೆ, ದೌರ್ಜನ್ಯ ಮಾಡುತ್ತಿದ್ದಾರೆ. ಅಮಾಯಕರನ್ನು, ಸಾಮಾನ್ಯರನ್ನು ಮೋಸ ಮಾಡುತ್ತಿದ್ದಾರೆ. ಹಾಗೆ ಎಲ್ಲಿ ನೋಡಿದರೂ ಪ್ರಕೃತಿಯ ಮೇಲೆ ಹಿಂಸೆ, ದೌರ್ಜನ್ಯವು ಹೆಚ್ಚಾಗಿ ಹೋಗಿವೆ.

ಮೋಸಗಳು, ಗೂಂಡಾಗಿರಿ ಹೆಚ್ಚಾಗಿವೆ. ತಮ್ಮನ್ನು ತಾವು ನೋಡಿಕೊಳ್ಳುತ್ತಿ ದ್ದಾರೆ. ಇತರರ ಬಗ್ಗೆ ಆಲೋಚಿಸುತ್ತಿಲ್ಲ. ಎಲ್ಲರೂ ತಮ್ಮಂತೆ... ಎಲ್ಲಾ ಪ್ರಾಣಿಗಳು ನಮ್ಮಹಾಗೇ ಎಂದು ಆಲೋಚಿಸುತ್ತಿಲ್ಲ. ಎಲ್ಲವೂ ಪ್ರಕೃತಿಯಲ್ಲಿನ ಭಾಗ ಎಂದು ತಿಳಿದುಕೊಳ್ಳುತ್ತಿಲ್ಲ. ಹಾಗೆ ಪ್ರಕೃತಿಯ ಮೇಲಿನ ಹಿಂಸೆ ದಿನ ದಿನಕ್ಕೆ ಅನೇಕ ರೀತಿಯಾಗಿ ಬೆಳೆದು ಹೋಗಿದೆ. ಯಾರೂ ಪ್ರಕೃತಿಯ ಬಗ್ಗೆ ಆಲೋಚಿಸುತ್ತಿಲ್ಲ. ಆದರೆ ಆಲೋಚಿಸಬೇಕು.

ಪ್ರಕೃತಿಯು ಮಾನವನಿಗೆ ತಾಯಿಯ ಹಾಗೆ. ತಾಯಿಯ ಮಡಿಲಲ್ಲಿ ಮಗುವಿನ ಹಾಗೆ ಮಾನವರು ಪ್ರಕೃತಿಯ ಮಡಿಲಲ್ಲಿ ಜೀವಿಸುತ್ತಿದ್ದಾರೆ. ನಾವೆಲ್ಲರೂ ತಾಯಿಯ ಮಡಿಲಲ್ಲಿ ಇರುವ ಹಸುಗೂಸುಗಳ ಹಾಗೆ. ಮಕ್ಕಳಿಗೆ ತಾಯಿಯು ಎಲ್ಲಾ ಅಗತ್ಯಗಳನ್ನು ಹೇಗೆ ಪೂರೈಸುತ್ತಾಳೊ ಹಾಗೆ ಪ್ರಕೃತಿ ತಾಯಿಯು ಎಲ್ಲವನ್ನು ನಮಗೆ ಒದಗಿಸುತ್ತಾಳೆ. ನಮ್ಮ ಅಗತ್ಯಗಳಿಗೆ ,ಆನಂದಕ್ಕೆ ಬೇಕಾದವುಗಳನ್ನು ಒದಗಿಸುತ್ತಾಳೆ.

ತಾಯಿಯ ಹಾಲನ್ನು ಕುಡಿದರೆ ತಾಯಿಯು ಆಪ್ಯಾಯವಾಗಿ ಸವರುತ್ತಾಳೆ. ಆದರೆ ತಾಯಿಯ ಹಾಲನ್ನು ಕುಡಿಯುತ್ತಾ ಎದೆಯನ್ನು ಕಚ್ಚಿದರೆ, ಗುದ್ದಿದರೆ ತಾಯಿಯು ಆಗ್ರಹಿಸುತ್ತಾಳೆ, ದಂಡಿಸುತ್ತಾಳೆ. ಮಗುವಿನ ಚರ್ಯೆಗಳು ಮಿತಿಮೀರಿದರೆ ಹಾಲು ಕೊಡುವುದಿಲ್ಲವೆಂದು ಹೇಳುತ್ತಾಳೆ. ಆಗ ಮಗು ಸುಮ್ಮನಾಗುತ್ತದೆ.

ಹಾಗೆಯೇ ಪ್ರಕೃತಿಯಲ್ಲಿನ ಸಂಪತ್ತನ್ನು ನಮ್ಮ ಅಗತ್ಯಗಳಿಗೆ ವಿನಯೋಗಿಸಿಕೊಂಡರೆ ಪ್ರಕೃತಿಯು ಸಂತೋಷಿಸುತ್ತದೆ. ಆದರೆ ನಾವು ವಿಪರೀತವಾಗಿ ವಿನಿಯೋಗಿಸಿಕೊಂಡರೆ ಅಂದರೆ ಜೀವ ಹಿಂಸೆ, ಮಾಂಸಭಕ್ಷಣೆ ಮಾಡಿದರೆ ಪ್ರಕೃತಿ ತನ್ನ ಅಗ್ರಹವನ್ನು ವೈಪರಿತ್ಯಗಳಿಂದ ಅಂದರೆ ಭೂಕಂಪ, ಸುನಾಮಿ, ತೂಫಾನುಗಳು, ಕಾಡಿನ ದಹನದಂತಹವುಗಳಿಂದ ನಮಗೆ ಬುದ್ಧಿ ಹೇಳುತ್ತದೆ. ಮಳೆ ಬೀಳುವುದಿಲ್ಲ, ಕ್ಷಾಮ ಉಂಟಾಗುತ್ತದೆ. ಆದ್ದರಿಂದ ಭೂಮಿಯ ಮೇಲಿರುವ ಚರಗಳಾಗಲಿ, ಅಚರಗಳಾಗಲಿ ಪ್ರಕೃತಿಯಲ್ಲಿನ ಭಾಗವೆಂದು, ಯಾವುದನ್ನು ಹಿಂಸಿ ಸಬಾರದೆಂದು ತಿಳಿದುಕೊಳ್ಳಬೇಕು. ಎಲ್ಲವನ್ನು ಪ್ರೀತಿಸಬೇಕು, ಅಗತ್ಯಕ್ಕೆ ಮಾತ್ರ ಉಪಯೋಗಿಸಕೊಳ್ಳಬೇಕು. ಅಲ್ಲಿಯವರೆಗೆ ಪರಿಮಿತಯಾಗಿರಬೇಕು.

**"ಪ್ರಕೃತಿ ವೈಪರಿತ್ಯವೆಂದರೆ ಮಾನವರ ಬಾಧೆಯನ್ನು ಸಹಿಸಲಾರದೆ ಪ್ರಕೃತಿಯು ಆಗ್ರಹಿಸುತ್ತದೆ, ತನ್ನ ಮಕ್ಕಳನ್ನು ಶಿಕ್ಷಿಸುತ್ತದೆ, ಅವರಿಗೆ ಬುದ್ಧಿ ಹೇಳುತ್ತದೆ"** ಪ್ರಕೃತಿ ವೈಪರಿತ್ಯಗಳು ಬರುತ್ತಿವೆ ಎಂದರೆ ಮಾನವರು ಪ್ರಕೃತಿಯ ಧರ್ಮವನ್ನು ನಿರ್ವಹಿಸುತ್ತಿಲ್ಲವೆಂದು ಅರ್ಥ. ಆದ್ದರಿಂದ ಮಾನವರು ಈ ವಿಷಯದ ಬಗ್ಗೆ ಆಲೋಚಿಸಬೇಕು.

# ಸೃಷ್ಟಿ ಕರ್ತರ ಕುರಿತು ಆಲೋಚಿಸಬೇಕು

ಮುಖ್ಯವಾಗಿ ಈ ಸೃಷ್ಟಿಯನ್ನು ಸೃಷ್ಟಿ ಮಾಡಿರುವ ಸೃಷ್ಟಿಕರ್ತರು ಇದ್ದಾರೆ ಎನ್ನುವ ಸಂಗತಿಯನ್ನು ಮರೆಯಬಾರದು. ಕಾರಣ ಸೃಷ್ಟಿಕರ್ತರು ಇಲ್ಲದೆ ಹೋದರೆ ಅಸಲು ಈ ಸೃಷ್ಟಿಯು ಹೇಗೆ ಉಂಟಾಗುತ್ತದೆ? ಈ ಸೃಷ್ಟಿಯಲ್ಲಿ 84 ಲಕ್ಷ ಜೀವಿಗಳು, ಜೀವ ರಾಶಿಗಳು ಹೇಗೆ ಬರುತ್ತವೆ? ಅವುಗಳಲ್ಲಿ ಭಾಗವಾದ ನಾವು ಹೇಗೆ ಇರುತ್ತೇವೆ? ಆದ್ದರಿಂದ ಸೃಷ್ಟಿಕರ್ತನ ಕುರಿತು ಆಲೋಚಿಸಬೇಕು.

ಈ ಸೃಷ್ಟಿಕರ್ತನನ್ನು ಹಲವರು ಹಲವು ರೀತಿಯಾಗಿ ಕರೆಯುತ್ತಾರೆ. ಮುಸ್ಲಿಮರು "ಅಲ್ಲಾ" ಎಂದು, ಕ್ರಿಶ್ಚಿಯನ್ನರು "ತಂದೆ" ಎಂದು, ಹಿಂದುಗಳು  ವಿವಿಧ ಹೆಸರುಗಳಿಂದ ಕರೆಯುತ್ತಾರೆ. 'ಭಗವಂತನೆಂದು',  ಪರಬ್ರಹ್ಮ, ಪರಮಾತ್ಮ, ಪರಮೇಶ್ವರ, ಸೃಷ್ಟಿಕರ್ತ, 'ವಿಶ್ವಾತ್ಮ' ಎಂದು ಹೇಳುತ್ತಾರೆ. ಇನ್ನು 'ಆದಿಶಕ್ತಿ', 'ಪರಾಶಕ್ತಿ', 'ಲಲಿತಾದೇವಿ' ಎಂದು ವಿವಿಧ ಹೆಸರುಗಳಿಂದ ಕರೆಯುತ್ತಿರುತ್ತಾರೆ. ಯಾರು ಯಾವ ಹೆಸರಿನಿಂದ ಕರೆದರೂ ಒಟ್ಟಾಗಿ ಈ ಸೃಷ್ಟಿಯನ್ನು ಸೃಷ್ಟಿ ಮಾಡಿದ ಸೃಷ್ಟಿಕರ್ತ ಅಂದರೆ 'ಭಗವಂತನು' ಇದ್ದಾನೆಂದು ತಿಳಿಯುತ್ತದಲ್ಲವೆ? ಆದ್ದರಿಂದ 'ಭಗವಂತನಿ'ದ್ದಾನೆ ಆತನ ಬಗ್ಗೆ, ಆತನ ಶಕ್ತಿಯ ಬಗ್ಗೆ ಆಲೋಚಿಸಬೇಕು.

ಮಾನವರು **"ಪ್ರಾಮುಖ್ಯತೆ ಇಲ್ಲದ ವಿಷಯಗಳ ಕುರಿತು ಎಷ್ಟೋ ಆಲೋಚಿಸುತ್ತಾರೆ. ಆದರೆ ಸೃಷ್ಟಿಯಲ್ಲಿ ಎಲ್ಲಕ್ಕಿಂತ ಶ್ರೇಷ್ಠರಾದ 'ಭಗವಂತನ' ಬಗ್ಗೆ  ಆಲೋಚಿಸುತ್ತಿಲ್ಲ"**. ಮಾನವರ ದುಃಖಕ್ಕೆ ಇದೊಂದು ಕಾರಣ.

ಆದರೆ ಎಷ್ಟು ಹೊಂದಿದರೂ.... ಎಷ್ಟು ಸಾಧಿಸಿದರು.... ಎಲ್ಲಕ್ಕಿಂತಲೂ ಭಗವಂತನ ಕುರಿತು ಆಲೋಚಿಸಬೇಕು, ತಿಳಿದುಕೊಳ್ಳಬೇಕು ಇದು ತುಂಬಾ ತುಂಬಾ ಮುಖ್ಯ. ಕಾರಣವೇನೆಂದರೆ ಅವೆಲ್ಲವೂ ಅಶಾಶ್ವತ, ಭಗವಂತನೇ ಶಾಶ್ವತ. ಅಷ್ಟೇ ಅಲ್ಲದೆ ಅವೆಲ್ಲವು ದುಃಖವನ್ನು ಹೆಚ್ಚು ಮಾಡುತ್ತದೆ ಹೊರತು, ಕಡಿಮೆ ಮಾಡುವುದಿಲ್ಲ, ಹೋಗಲಾಡಿಸುವುದಿಲ್ಲ. ಆದರೆ ಭಗವಂತನನ್ನು ಹೊಂದಿದರೆ ದುಃಖವನ್ನು ನಿವಾರಿಸಿಕೊಳ್ಳಬಹುದು, ಶಾಶ್ವತವಾಗಿ ಹೊರ ಬೀಳಬಹುದು. ಆದ್ದರಿಂದ ಭಗವಂತನ ಕುರಿತು ತಿಳಿದುಕೊಳ್ಳೋಣ. ಭಗವಂತನ ಬಗ್ಗೆ ತಿಳಿದುಕೊಳ್ಳಬೇಕೆಂದರೆ ಕೆಲವು ಪ್ರಶ್ನೆಗಳನ್ನು ಹಾಕಿಕೊಳ್ಳಬೇಕು ಅವುಗಳಿಗೆ ಉತ್ತರವನ್ನು ತಿಳಿದುಕೊಳ್ಳಬೇಕು, ಅವುಗಳ ಬಗ್ಗೆ ಅಧ್ಯಯನ ಮಾಡಬೇಕು, ಚೆನ್ನಾಗಿ ಆಲೋಚಿಸಬೇಕು, ಪೂರ್ತಿಯಾಗಿ ಅರ್ಥ ಮಾಡಿಕೊಳ್ಳಬೇಕು, ಆಚರಿಸಬೇಕು. ಅಂತಹವರ ಜೀವನ ಧನ್ಯ, ಅವರ ಜನ್ಮ ಸಾರ್ಥಕ.

ಮುಖ್ಯವಾಗಿ ಭಗವಂತನನ್ನು ಇಷ್ಟಪಡುವವರು, ಭಗವಂತನನ್ನು ಆರಾಧಿಸುವುದಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದರು.

ಪ್ರಾಮುಖ್ಯತೆ ಕೊಡಬೇಕೆಂದರೆ, ಈ ಕೆಳಗಿನ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕು. ಅವುಗಳ ಬಗ್ಗೆ ಆಲೋಚಿಸಬೇಕು.

1) ಭಗವಂತನಿದ್ದಾನೆ ಎನ್ನುತ್ತಾರೆ. ಆದರೆ ಭಗವಂತನು ಏಕೆ ಇದ್ದಾನೆ? ಆಲೋಚಿಸಬೇಕು.
2) ಭಗವಂತನೆಂದರೆ ನನಗೆ ತುಂಬಾ ಇಷ್ಟ ಎಂದು ಅನ್ನುತ್ತಾರೆ. ಆದರೆ ಭಗವಂತನಿಗೆ ತಾವು ಇಷ್ಟವೇ? ಎನ್ನುವುದನ್ನು ಆಲೋಚಿಸಬೇಕು. ಏನು ಮಾಡಿದರೆ? ಹೇಗಿದ್ದರೆ? ಭಗವಂತನಿಗೆ ಇಷ್ಟವಾಗುತ್ತೇವೆ ಆಲೋಚಿಸಬೇಕು.
3) ಭಗವಂತನನ್ನು ಆರಾಧಿಸುವ ವಿಷಯದಲ್ಲಿ, ಬೇರೆ ವಿಷಯಗಳಲ್ಲಿಯೂ ತಮಗೆ ಇಷ್ಟ ಬಂದ ಹಾಗೆ ಮಾಡುತ್ತಿದ್ದಾರೆ, ಆದರೆ ತಾವು ಮಾಡುವ ಕೆಲಸಗಳನ್ನು ಭಗವಂತನು ಮೆಚ್ಚುವನೇ? ಎನ್ನುವುದನ್ನು ಆಲೋಚಿಸಬೇಕು!
4) ದೀರ್ಘಕಾಲ ಪೂಜೆ ಮಾಡಿದರೆ, ಆನಂದ ಪಡುತ್ತಾನೆ ಎಂದು ಭಾವಿಸುತ್ತಿದ್ದಾರೆ, ಪೂಜೆ ಮಾಡುವುದಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ. ಆದರೆ ಭಗವಂತನು ಯಾವುದಕ್ಕೆ ಆನಂದ ಪಡುತ್ತಾನೆ? ಅನ್ನುವುದನ್ನು ಆಲೋಚಿಸಬೇಕು.
5) ಭಗವಂತನಿಗೆ ಪುಷ್ಪಗಳನ್ನು ಸಮರ್ಪಿಸುತ್ತಾರೆ. ಆದರೆ ಆತನಿಗೆ ಯಾವ ಪುಷ್ಪ ಇಷ್ಟವೆಂದು ಆಲೋಚಿಸಬೇಕು.
6) ಭಗವಂತನು ಹೇಗೆ ಇರುತ್ತಾನೆ? ಎಲ್ಲಿರುತ್ತಾನೆ? ಏನು ಮಾಡುತ್ತಿರುತ್ತಾನೆ? ಎನ್ನುವುದನ್ನು ಮುಖ್ಯವಾಗಿ ಆಲೋಚಿಸಬೇಕು!
7) ಯಾವಾಗಲೂ ಭಗವಂತನನ್ನು ಕೋರುತ್ತಿದ್ದಾರೆ, ಆದರೆ ಭಗವಂತನ ಬಗ್ಗೆ ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸುತ್ತಿಲ್ಲ, ಆತನ ಬಗ್ಗೆ ಆಲೋಚಿಸುತ್ತಿಲ್ಲ.
8) ಭಗವಂತನನ್ನು ಕೋರುವುದಕ್ಕೆ ಗಂಟೆಗಳ ಕಾಲ ಮೀಸಲಿಡುತ್ತಿದ್ದಾರೆ. ಆದರೆ ಭಗವಂತನ ಕುರಿತು ತಿಳಿದುಕೊಳ್ಳುವುದಕ್ಕೆ, ಆಲೋಚಿಸುವುದಕ್ಕೆ ದಿನದಲ್ಲಿ ಕನಿಷ್ಠಪಕ್ಷ ಒಂದು ಗಂಟೆಯಾದರೂ ಮೀಸಲಿಡುತ್ತಿದ್ದೇವೆಯೇ? ಎನ್ನುವ ವಿಷಯವನ್ನು ಆಲೋಚಿಸಬೇಕು.
9) ಹೆಚ್ಚು ಸಮಯ ಭಗವಂತನನ್ನು ಆರಾಧಿಸುತ್ತಾರೆ ಆದರೆ, ಭಗವಂತನು ಹೇಳಿದ್ದನ್ನು ಆಚರಿಸುತ್ತಿಲ್ಲ. ಆಚರಿಸಬೇಕಲ್ಲವೆ? ಏಕೆ ಆಚರಿಸುತ್ತಿಲ್ಲ ಅನ್ನುವ ವಿಷಯವನ್ನು ಆಲೋಚಿಸಬೇಕು.

10) ಭಗವಂತನು  ದೊಡ್ಡವನೆಂದು ಅನ್ನುತ್ತೇವೆ. ಆದರೆ ಅಂತಹ ಶ್ರೇಷ್ಠನಾದ ಭಗವಂತನು ಹೇಳಿದ್ದು ಶ್ರೇಷ್ಠವಾದದ್ದಲ್ಲವೆ? ಅವನು ಹೇಳಿದ್ದನ್ನು ಏಕೆ ಆಚರಿಸುವುದಿಲ್ಲ?  ಏಕೆ ಪ್ರಯತ್ನಿಸುತ್ತಿಲ್ಲ ಅನ್ನುವುದರ ಬಗ್ಗೆ ಆಲೋಚಿಸಬೇಕು.

11) ಭಗವಂತನನ್ನು ಪ್ರಾರ್ಥಿಸುವುದಲ್ಲ, ಆತನು ಹೇಳಿದ್ದನ್ನು ಅನುಸರಿಸುವುದರ ಕುರಿತು ಆಲೋಚಿಸಬೇಕು.

12) ಭಗವಂತನು ಕೋರಿಕೆಗಳನ್ನು ತೀರಿಸುವನೆಂದು, ಕಷ್ಟಗಳನ್ನು ತೊಲಗಿಸುವವನೆಂದು, ಪಾಪಗಳನ್ನು  ಕ್ಷಮಿಸುವವನೆಂದು ಆರಾಧಿಸುತ್ತಾರೆ. ಆದರೆ ಭಗವಂತನು ಕೋರಿಕೆಗಳನ್ನು ತೀರಿಸುವನೇ? ಕಷ್ಟಗಳನ್ನು ತೊಲಗಿಸುವನೇ? ಪಾಪಗಳನ್ನು ಕ್ಷಮಿಸುವನೇ? ಎನ್ನುವುದನ್ನು ಆಲೋಚಿಸಬೇಕು.

13) ಭಗವಂತನು ಅಲ್ಪವಾದ ಕಾಣಿಕೆಗಳನ್ನು ನಿರೀಕ್ಷಿಸುತ್ತಾನೆಂದು ಭಾವಿಸುತ್ತಾರೆ. ಆದರೆ ಸೃಷ್ಟಿ ಎಲ್ಲವೂ ಆತನದೆ  ಸೃಷ್ಟಿಯಲ್ಲಿರುವುದೆಲ್ಲಾ ಆತನದೆ. ಆತನಿಗೆ ಯಾರು ಏನು ಕೊಡಬಲ್ಲರು ಎನ್ನುವ ವಿಷಯವನ್ನು ಆಲೋಚಿಸಬೇಕು.

14) ಆತನು ಹೊಗಳಿಕೆಗಳಿಂದ, ಸ್ತೋತ್ರಗಳಿಂದ ವಶ ಮಾಡಿಕೊಳ್ಳಬಹುದೆಂದು ಭಾವಿಸುತ್ತಾರೆ, ಆದರೆ ಆತನು ಯಾವುದಕ್ಕೆ ವಶವಾಗುತ್ತಾನೆ? ಎನ್ನುವ ವಿಷಯವನ್ನು ಆಲೋಚಿಸಬೇಕು.

15) ಭಗವಂತನು ಮಂದಿರದಲ್ಲಿ, ಗುಡಿಯಲ್ಲಿ ಇದ್ದಾನೆಂದು ಭಾವಿಸುತ್ತಾರೆ, ಅಲ್ಲಿ ಪವಿತ್ರವಾಗಿರುತ್ತಾರೆ. ಆದರೆ ಆತನು ಸರ್ವಾಂತರ್ಯಾಮಿ ಎನ್ನುವ ವಿಷಯವನ್ನು ಆಲೋಚಿಸಬೇಕು. ಎಲ್ಲೆಡೆ ಪವಿತ್ರವಾಗಿ ಇರಬೇಕು. ಅದರ ಕುರಿತು ಆಲೋಚಿಸಬೇಕು.

16) ಲೋಕದಲ್ಲಿ ರೂಪವನ್ನು ಸರಿ ಮಾಡಿಕೊಂಡು ಅಂದರೆ ಬಾಹ್ಯ ಶುದ್ಧಿ ಮಾಡಿಕೊಂಡು ಗುಡಿಗೆ ಹೋಗುತ್ತಾರೆ. ಆದರೆ ಭಗವಂತನು ಪ್ರಾಮುಖ್ಯತೆ ಕೊಡುವುದು ರೂಪ ಅಥವಾ ಗುಣಕ್ಕಾ? ಅಂದರೆ, ಬಾಹ್ಯಶುದ್ಧಿ ಅಥವಾ ಅಂತರ್ ಶುದ್ಧಿಗೋ...ಅನ್ನುವ ವಿಷಯವನ್ನು ಆಲೋಚಿಸಬೇಕು.

17) ಭಗವಂತನನ್ನು ಆರಾಧಿಸಿದರೆ ಅನು ಗ್ರಹಿಸುತ್ತಾನೆಂದು, ಆರಾಧಿಸದೆ ಹೋದರೆ ಆಗ್ರಹಿಸುತ್ತಾನೆಂದು ಭಾವಿಸುತ್ತಾರೆ. ಆದರೆ ಆತನು ಹಾಗೆ ಪ್ರವರ್ತಿಸುವನೇ? ಆತನಿಗೆ ಆಗ್ರಹ, ಅನುಗ್ರಹಗಳು ಇವೆಯೇ? ಎನ್ನುವ ವಿಷಯವನ್ನು ಆಲೋಚಿಸಬೇಕು.

18) ಆರಾಧನೆ ಎಂದರೆ ಏನು? ಯಾವ ರೀತಿ ಆರಾಧನೆಯನ್ನು ಮಾಡಬೇಕು? ಎನ್ನುವುದನ್ನು ಆಲೋಚಿಸಬೇಕು.

19) ಭಕ್ತಿ ಎಂದರೇನು? ಯಾವುದನ್ನು ಭಕ್ತಿ ಎನ್ನುತ್ತಾರೆ? ಎನ್ನುವ ವಿಷಯವನ್ನು ಆಲೋಚಿಸಬೇಕು.

20) ಭಗವಂತನನ್ನು ಕೋರಿದರೆ ಮುಕ್ತಿ ಬರುವುದಿಲ್ಲ! ಸೇರಿದರೆ ಮುಕ್ತಿ ಬರುತ್ತದೆ ಎನ್ನುವ ವಿಷಯವನ್ನು ಆಲೋಚಿಸಬೇಕು.

21) ಭಗವಂತನನ್ನು ಸೇರಬೇಕೆಂದರೆ ಮೊದಲು ಆತನು ಯಾರೆಂದು ತಿಳಿದುಕೊಳ್ಳಬೇಕಲ್ಲವೆ? ಎಲ್ಲಿರುತ್ತಾನೆಂದು? ಹೇಗೆ ಸೇರಬೇಕೆಂದು ತಿಳಿದುಕೊಳ್ಳಬೇಕು? ಈ ವಿಷಯದ ಕುರಿತು ಆಲೋಚಿಸಬೇಕು.

22) ಭಗವಂತನ ಕುರಿತು ತಿಳಿದಿದೆ ಎನ್ನುವ ಹಾಗೆ ಮಾತನಾಡುತ್ತಾರೆ. ಆತನ ಬಗ್ಗೆ ಏನು ತಿಳಿದಿದೆ? ಅನ್ನುವ ವಿಷಯವನ್ನು ಆಲೋಚಿಸಬೇಕು.

ನಾವು ಹೀಗೆ ಹೇಳಿಕೊಳ್ಳುತ್ತಾ ಹೋದರೆ ಭಗವಂತನ ಬಗ್ಗೆ ಆಲೋಚಿಸಬೇಕಾದವುಗಳು, ತಿಳಿದುಕೊಳ್ಳಬೇಕಾದವು ಎಷ್ಟೋ ಇವೆ ಕಾರಣ ಆತನು ಎಷ್ಟೊ ದೊಡ್ಡವನು. ಒಂದು ರೀತಿಯಾಗಿ ಹೇಳಬೇಕೆಂದರೆ ಭಗವಂತನ ಬಗ್ಗೆ ಪೂರ್ತಿಯಾಗಿ ತಿಳಿದುಕೊಳ್ಳುವುದು ಯಾರಿಗಾದರೂ ಅಸಾಧ್ಯವೆ. ಆದರೆ ಸ್ವಲ್ಪವಾದರೂ ತಿಳಿದುಕೊಳ್ಳಬೇಕು, ಆತನ ಬಗ್ಗೆ ಸ್ವಲ್ಪವನ್ನಾದರೂ ಅವಗಾಹನೆ ಮಾಡಿಕೊಳ್ಳಬೇಕು. ಅಷ್ಟೇ ಹೊರತು ಏನು ತಿಳಿದುಕೊಳ್ಳದೆ, ಏನೂ ಆಲೋಚಿಸದೆ ಮಾಡುವ ಕೆಲಸಗಳು, ಆರಾಧನೆಗಳು ವ್ಯರ್ಥವಾಗುತ್ತವೆ. ದುಃಖವನ್ನು ತೊಲಗಿಸುವುದಿಲ್ಲ, ದುಃಖವನ್ನು ಹೆಚ್ಚು ಮಾಡುತ್ತವೆ. ಆದ್ದರಿಂದ ಭಗವಂತನ ಬಗ್ಗೆ ಆಲೋಚಿಸುವುದು ತುಂಬಾ ತುಂಬಾ ಮುಖ್ಯ.

ಹಾಗೆಯೇ ಶ್ರೀ ಕೃಷ್ಣ ಭಗವಂತನು ಭಗವದ್ಗೀತೆಯಿಂದ ಅದ್ಭುತವಾದ ಸಂದೇಶವನ್ನು ಮಾನವ ಲೋಕಕ್ಕೆ ಬೋಧಿಸಿದ್ದಾನೆ. ದುಃಖದಿಂದ ಹೊರ ಬರಲು, ಆನಂದವಾಗಿ ಜೀವಿಸಲು, ಮಾನವರು ಏನು ಮಾಡಬೇಕು? ಜೀವನದ ಲಕ್ಷ್ಯವೇನು? ಏನು ಮಾಡಿದರೆ ಶಾಶ್ವತ ಆನಂದವನ್ನು ಹೊಂದುತ್ತಾರೆ? ಇಂತಹ ಎಷ್ಟೋ ವಿಷಯಗಳನ್ನು ಭಗವಂತನು ಬೋಧಿಸಿದ್ದಾನೆ. ಮಾನವರು ತಪ್ಪದೆ ಇವೆಲ್ಲವುದರ ಬಗ್ಗೆ ಆಲೋಚಿಸಬೇಕು. ಆತನು ಬೋಧಿಸಿದ ಭಗವದ್ಗೀತೆ ಪ್ರತಿ ಮನೆಯಲ್ಲಿ ಇರಬೇಕು, ಅಧ್ಯಯನ ಮಾಡಬೇಕು, ಅರ್ಥ ಮಾಡಿಕೊಳ್ಳಬೇಕು, ಆಚರಿಸಬೇಕು, ಮುಖ್ಯವಾಗಿ ಆತನು ಹೇಳಿದ್ದನ್ನು ಆಲೋಚಿಸಬೇಕು.

ಭಗವಂತನು ಬೋಧಿಸಿದ್ದಕ್ಕಿಂತ ಶ್ರೇಷ್ಠವಾದ ವಿಷಯಗಳನ್ನು ಯಾರು ಬೋಧಿಸಬಲ್ಲರು? ಆತನು ಬೋಧಿಸಿದ್ದೆಲ್ಲವೂ ಅಕ್ಷರಶಃ ಸತ್ಯವಲ್ಲವೆ? ಮತ್ತೆ ಆತನು ಹೇಳಿದ ಬಗ್ಗೆ ಆಲೋಚಿಸುತ್ತಿಲ್ಲವೆಂದರೆ ಆತನನ್ನು ನಿರ್ಲಕ್ಷ್ಯ ಮಾಡಿದ ಹಾಗೆ, ಇದರಿಂದ ನಮಗೇ ನಷ್ಟ. ಹಾಗಾಗಿ ಆಲೋಚಿಸಿ.

# ಭಗವಂತನು ಹೇಳಿರುವುದೇನು!? ಮಾನವನು ಮಾಡುತ್ತಿರುವುದೇನು!?

ಭಗವಂತನ ಬಗ್ಗೆ ಇನ್ನೂ ಸ್ವಲ್ಪ ವಿಷಯಗಳನ್ನು ತಿಳಿದುಕೊಳ್ಳೋಣ. ಏಕೆಂದರೆ ಭಗವಂತನನ್ನು ಆರಾಧಿಸುವನಿಗಿಂತ ಭಗವಂತನು ಹೇಳಿರುವುದನ್ನು ಆಚರಿಸುವವನು ಶ್ರೇಷ್ಠನಾದವನು... ಆಲೋಚಿಸಿದರೆ ತಿಳಿಯುತ್ತದೆ. ಭಗವಂತನು ಏನು ಹೇಳಿದ್ದಾನೆ? ಆದರೆ ನಾವು ಏನು ಮಾಡುತ್ತಿದ್ದೇವೆ? ಎನ್ನುವುದನ್ನು ಸ್ವಲ್ಪ ತಿಳಿದುಕೊಳ್ಳೋಣ.

ಅಷ್ಟೇ ಅಲ್ಲದೆ ಮಾನವನು ಜೀವನದಲ್ಲಿ ದುಃಖವನ್ನು ಬೇಡವೆಂದುಕೊಳ್ಳುತ್ತಾನೆ , ದುಃಖವು ಬರಬಾರದು ಎಂದುಕೊಳ್ಳುತ್ತಾನೆ. ಆದರೆ ವಿಚಿತ್ರವೇನೆಂದರೆ, ಮಾನವನು ಕೋರಿಕೊಂಡು, ಪ್ರಯತ್ನಿಸಿ, ಸಿದ್ಧಪಡಿಸಿಟ್ಟುಕೊಂಡ ಸುಖಗಳನ್ನು ಅನುಭವಿಸಲಾರದೆ ಹೋಗುತ್ತಿದ್ದಾನೆ. ಕೋರಿಕೊಂಡು ತಂದುಕೊಂಡದ್ದನ್ನು, ಪ್ರಯತ್ನಿಸಿ ದುಃಖವನ್ನೆ ಅನುಭವಿಸುತ್ತಿದ್ದಾನೆ. ಅಂದರೆ ಬೇಕೆನ್ನುವುದನ್ನು ಹೊಂದುಲಾಗುತ್ತಿಲ್ಲ, ಬೇಡ ಅನ್ನುವುದನ್ನು ಅನುಭವಿಸುತ್ತಿದ್ದಾನೆ.

ಮಾನವನು ಅಂದುಕೊಂಡಿದ್ದಕ್ಕೆ ವಿರುದ್ಧವಾಗಿ ನಡೆಯುವುದಕ್ಕೆ ಮುಖ್ಯವಾದ ಕಾರಣ ಭಗವಂತನು ಹೇಳಿರುವುದು ಒಂದಾದರೆ, ಮಾನವನು ಮಾಡುವುದು ಇನ್ನೊಂದು. ಭಗವಂತನು ಹೇಳಿರುವುದಕ್ಕೆ ವಿರುದ್ಧವಾಗಿ ಮಾಡಿದರೆ... ವಿರುದ್ಧವಾದ ಫಲಿತಗಳು ಬರುತ್ತದೆ? ಆದ್ದರಿಂದ ಭಗವಂತನು ಹೇಳಿದ್ದನ್ನೆ ಮಾನವನು ಮಾಡಬೇಕು. ಆಗ ಜೀವನವು ಆನಂದವಾಗಿರುತ್ತದೆ. ಮತ್ತೆ ಭಗವಂತನು ಏನು ಹೇಳಿದ್ದಾನೆ? ಮಾನವನು ಏನು ಮಾಡುತ್ತಿದ್ದಾನೆ? ಎನ್ನುವ ಕೆಲವು ವಿಷಯಗಳನ್ನು ತಿಳಿದುಕೊಳ್ಳೋಣ.

ಶ್ರೀ ಕೃಷ್ಣ ಭಗವಂತನು ಭಗವದ್ಗೀತೆಯಲ್ಲಿ ಏನು ಮಾಡಬೇಕೆಂದು ನಮಗೆ ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಅದನ್ನೇ ಮಾಡಬೇಕು. ಗೀತೆಯಲ್ಲಿ ಭಗವಂತನು ಏನು ಹೇಳಿದ್ದಾರೆ? ಮಾನವನು ಏನನ್ನು ಮಾಡುತ್ತಿದ್ದಾನೆ?

1. ಆತನು ತಮ್ಮನ್ನು ತಾವೇ  ಉದ್ದರಿಸಿಕೊಳ್ಳಬೇಕು ಎಂದರೆ, ಮಾನವನು ನೀನೆ ಉದ್ಧರಿಸು ಎನ್ನುತ್ತಾನೆ. (ಭ॥ ಗಿ॥ 6–5)
2. ಆತನು ಮರಣಾ ನಂತರ ಜೀವನವಿದೆ ಎಂದರೆ, ಮಾನವನು ಪ್ರಸ್ತುತ ಇರುವ ಜೀವನವೆ ಜೀವನವು ಎನ್ನುವ ಹಾಗೆ ಪ್ರವರ್ತಿಸುತ್ತಿದ್ದಾನೆ.(ಭ॥ ಗಿ॥ 16–5)
3. ಆತನು ಯೋಗಿಯಾಗೆಂದು ಹೇಳಿದರೆ, ಮಾನವನು ಭೋಗಿಯಾಗಿ ತಯಾರಾಗುತ್ತಿದ್ದಾನೆ.(ಭ॥ ಗಿ॥ 16–46)

4. ಆತನು ನಾನೆ ಆತ್ಮ ಎಂದರೆ, ಮಾನವನು ವಿಗ್ರಹದಲ್ಲಿ ದೇವರು ಇದ್ದಾನೆ ಎನ್ನುತ್ತಾನೆ. (ಭ॥ ಗಿ॥ 10–20)
5. ಆತನು ನಾನು ಎಲ್ಲಾ ಜೀವಿಗಳಲ್ಲಿ ಇದ್ದೇನೆ ಎಂದರೆ ಮಾನವನು ಆತನು ಎಲ್ಲಾ ಗುಡಿಗಳಲ್ಲಿ ಇದ್ದಾನೆ ಎನ್ನುತ್ತಾನೆ. (ಭ॥ ಗಿ॥ 10–20)
6. ಎಲ್ಲರಲ್ಲಿಯೂ ನಾನೇ , ಎಲ್ಲಾ ನಾನೆ, ಎಲ್ಲವೂ ನನ್ನಲ್ಲಿಯೆ ಇವೆ, ಎಲ್ಲವೂ ನನ್ನಲ್ಲಿನ ಭಾಗಗಳೆ, ಎಂದರೆ,ಮಾನವನು ಮಾತ್ರ ತಾನು ಬೇರೆ ಇತರ ಮಾನವರು, ಪ್ರಾಣಿಗಳು ಬೇರೆಂದು ಅಂದುಕೊಳ್ಳುತ್ತಾನೆ, ಬೇರೆಯಾಗಿ ಪ್ರವರ್ತಿಸುತ್ತಾನೆ. (ಭ॥ ಗಿ॥ 11–5)
7. ಇತರರ ಕಷ್ಟವನ್ನು ತನ್ನ ಕಷ್ಟವೆಂದು ಭಾವಿಸೆಂದರೆ, ಮಾನವನು ತನ್ನ ಆನಂದಕ್ಕಾಗಿ ಇತರರನ್ನು, ಇತರ ಜೀವಿಗಳನ್ನು ಕಷ್ಟಪಡಿ ಸುತ್ತಿದ್ದಾನೆ. (ಭ॥ ಗಿ॥ 16–32)
8. ಮರಣ ಹೊಂದಿದವರ ಬಗ್ಗೆ, ಮರಣ ಹೊಂದುವವರ ಬಗ್ಗೆಯಾಗಲಿ ದುಃಖಿಸ ಬೇಡವೆಂದರೆ, ಮಾನವನು ಅವರ ಕುರಿತು ದುಃಖಿಸುತ್ತಾನೆ. (ಭ॥ ಗಿ॥ 12–11)
9. ಮಾನವನಿಗೆ ಮರಣವಿಲ್ಲವೆಂದರೆ, ಮಾನವನು ತಾನು ಮರಣಿಸುತ್ತೇನೆ ಎಂದು ಕೊಳ್ಳುತ್ತಾನೆ, ಹಾಗೂ ಭಯಪಡುತ್ತಾನೆ. (ಭ॥ ಗಿ॥ 2–20)
10. ಆತನು ಶೀತೋಷ್ಣ ಗಳಿಗೆ, ಸುಖ– ದುಃಖಗಳಿಗೆ, ಮಾನಾಪಮಾನಗಳಿಗೆ ಸ್ಪಂದಿಸಬಾರದು ಎಂದರೆ, ಮಾನವನು ಸ್ಪಂದಿಸುತ್ತಾನೆ. (ಭ॥ ಗಿ॥ 2–38)
11. ಆತನು ಗುಣಗಳನ್ನು ಸರಿ ಮಾಡಿಕೊಳ್ಳಿ ಎಂದರೆ, ಮಾನವನು ರೂಪವನ್ನು ಸರಿಮಾಡಿಕೊಳ್ಳುವುದಕ್ಕೆ ಪ್ರಾಮುಖ್ಯತೆ ಕೊಡುತ್ತಿದ್ದಾನೆ.
12. ಆತನು ಕರ್ಮ ಮಾಡುವುದಕ್ಕೆ ನಿನಗೆ ಅಧಿಕಾರವಿದೆ ಆದರೆ, ಫಲಿತವನ್ನು ನಿರೀಕ್ಷಿಸುವುದಕ್ಕೆ ಅಧಿಕಾರವಿಲ್ಲ ಎಂದರೆ ಫಲಿತಗಳನ್ನು ನಿರೀಕ್ಷಿಸಿ ಪೂಜಾದಿ ಕರ್ಮವನ್ನು ಮಾಡುತ್ತಿದ್ದಾನೆ. (ಭ.ಗಿ.12–7)
13. ಆತನು ಪ್ರತಿಫಲವನ್ನು ನಿರೀಕ್ಷಿಸದೆ ಮಾಡು ಎಂದರೆ ಮಾನವನು ಕೋರಿಕೆಗಳ ಬಗ್ಗೆ ಅಂದರೆ ಫಲವನ್ನು ನಿರೀಕ್ಷಿಸಿ ಮಾಡುತ್ತಿದ್ದಾನೆ. (ಭ.ಗಿ.12–12)
14. ಆತನು ಗುಣಗಳೆನ್ನುವ ಪ್ರೀತಿಯ ಪುಷ್ಪಗಳನ್ನು ಸಮರ್ಪಿಸೆಂದರೆ, ಮಾನವನು ಮಾಮೂಲಿನ ಪುಷ್ಪಗಳನ್ನು ಸಮರ್ಪಿಸುತ್ತಾನೆ. ಆತನು ಒಳ್ಳೆಯ ಕೆಲಸಗಳೆನ್ನುವ ಫಲಗಳನ್ನು ಸಮರ್ಪಿಸಿ ಎಂದರೆ, ಮಾನವನು ಮಾಮೂಲು ಫಲಗಳನ್ನು ಸಮರ್ಪಿಸುತ್ತಾನೆ. ಒಳ್ಳೆಯ ಆಲೋಚನೆಗಳೆನ್ನುವ ಪತ್ರವನ್ನು ಸಮರ್ಪಿಸಿ ಎಂದರೆ ಮಾನವನು ಮಾಮೂಲಿನ ಪತ್ರಗಳನ್ನು ಸಮರ್ಪಿಸುತ್ತಾನೆ. ಆತನು ನಿರ್ಮಲ ಮನಸ್ಸೆನ್ನುವ ಉದಕವನ್ನು ಸಮರ್ಪಿಸೆಂದರೆ ಮಾನವನು ಬರಿ ನೀರನ್ನು ಸಮರ್ಪಿಸುತ್ತಾನೆ. (ಭ.ಗಿ.9–26)

15. ಆತನು ಆತ್ಮ ನಾನು ಎನ್ನುವ ಭಾವದಲ್ಲಿ ಇರು ಎಂದರೆ, ಮಾನವನು ದೇಹವೇ ನಾನು ಎನ್ನುವ ಭಾವದಲ್ಲಿ ಇರುತ್ತಾನೆ.(ಭ.ಗಿ.10–20)
16. ಆತನು ಜೀವ ಹಿಂಸೆ ಮಾಡಬೇಡವೆಂದರೆ, ಮಾನವನು ಜೀವ ಹಿಂಸೆಯನ್ನು ಮಾಡಿ ಮಾಂಸಭಕ್ಷಣೆ ಮಾಡುತ್ತಿದ್ದಾನೆ.(ಭ.ಗಿ.16–20)
17. ಆತನು ಆಮೆಯ ಹಾಗೆ ಇಂದ್ರಿಯಗಳನ್ನು ಅಂತರ್ಮುಖ ಮಾಡು ಎಂದರೆ, ಮಾನವನು ಬಹಿರ್ಮುಖ ಕಾರ್ಯಗಳನ್ನೆ ಮಾಡುತ್ತಿದ್ದಾನೆ.(ಭ.ಗಿ.2–58)
18. ಆತನು ನಾನು ಮಾಡುತ್ತಿದ್ದೇನೆ ಎನ್ನುವ ಭಾವ ಅಂದರೆ ಕತೃತ್ವ ಭಾವವಿಲ್ಲದೆ ಮಾಡು ಎಂದರೆ, ಮಾನವನು ಎಲ್ಲವನ್ನು ನಾನೆ ಮಾಡುತ್ತಿದ್ದೇನೆ ಎಂದುಕೊಳ್ಳುತ್ತಾನೆ.
19. ಆತನು ಮರಣ ಸಮಯದಲ್ಲಿ ಯಾವ ಭಾವದಲ್ಲಿದ್ದರೆ ಅದನ್ನೆ ಹೊಂದುತ್ತೀಯ ಎಂದರೆ, ಮಾನವನು ಆತ್ಮ ಭಾವದಲ್ಲಿ ಅಂದರೆ ಭಗವಂತನ ಭಾವದಲ್ಲಿ ಇರದೆ ಪ್ರಾಪಂಚಿಕ ಭಾವದಲ್ಲಿ ಇರುತ್ತಿದ್ದಾನೆ. ಮತ್ತೆ, ಮತ್ತೆ ಜನ್ಮಗಳನ್ನು ಹೊಂದುತ್ತಿದ್ದಾನೆ. (ಭ.ಗಿ.8–6)
20. ಆತನು ಎಲ್ಲವನ್ನು, ಎಲ್ಲರನ್ನು ಸಮಾನವಾಗಿ ಭಾವಿಸೆಂದರೆ ಎಲ್ಲರೂ, ಎಲ್ಲವೂ ಬೇರೆ, ಬೇರೆ ಎಂದು ಭಾವಿಸುತ್ತಿದ್ದಾನೆ. (ಭ.ಗಿ.5–18)
21. ಆತನು ಎಲ್ಲಕ್ಕಿಂತ ಕರ್ಮಫಲ ತ್ಯಾಗ ಶ್ರೇಷ್ಠವೆಂದರೆ ಮಾನವನು ಮಾಡಿದ ಕರ್ಮಕ್ಕೆ ಫಲಿತವನ್ನು ಕೋರುತ್ತಿದ್ದಾನೆ. ಕೋರಿಕಗಳ ಕುರಿತಾಗಿಯೇ ಕರ್ಮಗಳನ್ನು ಮಾಡುತ್ತಾನೆ. (ಭ.ಗಿ.4–20)
22. ಆತನನ್ನು ದರ್ಶಿಸಬೇಕೆಂದರೆ ದಿವ್ಯ ನೇತ್ರವನ್ನು ಸಂಪಾದಿಸಿಕೊಳ್ಳಬೇಕು, ಆದರೆ ಮಾನವನು ಭೌತಿಕ ನೇತ್ರಗಳಿಂದ ವಿಗ್ರಹವನ್ನು ದರ್ಶಿಸಿಕೊಂಡು ಭಗವಂತನನ್ನು ದರ್ಶಿಸಿದೆನೆಂದುಕೊಳ್ಳುತ್ತಾನೆ. (ಭ.ಗಿ.11–8)
23. ಆತನನ್ನು ಯಾವ ವಿಧವಾಗಿ ಭಾವಿಸಿದರೆ ಆ ವಿಧವಾಗಿಯೆ ಅನುಗ್ರಹಿಸುತ್ತೇನೆಂದರೆ ಮಾನವನು ತಾನು ಅಲ್ಪನೆಂದು ಅಂದುಕೊಳ್ಳುತ್ತಾ ಭಗವಂತನನ್ನು ಯಾಚಿಸುತ್ತಿದ್ದಾನೇ ಹೊರತು ತಾನು ಕೂಡ ಆತನ ಒಂದು ಅಂಶ ತಾನು ಎಂದು... ಸಮಾನವೆಂದು, ಸ್ನೇಹ ಭಾವದಿಂದ ಪ್ರವರ್ತಿಸುತ್ತಿಲ್ಲ.

ಮೇಲಿನ ವಿಷಯಗಳನ್ನು ಆಲೋಚಿಸಿದರೆ ಭಗವದ್ಗೀತೆಯಿಂದ ಭಗವಾನನು ಬೋಧಿಸಿದ್ದು ಒಂದು ಮಾನವರು ಆಚರಿಸುವುದು ಇನ್ನೊಂದು. ಆದ್ದರಿಂದಲೆ ಕಷ್ಟಗಳು, ಹಾಗಾಗಿ ಆಲೋಚಿಸಿ... ಭಗವಾನನು ಬೋಧಿಸಿದ್ದನ್ನು ಆಚರಣೆಯಲ್ಲಿ ಇಡಿ.

# ಭಗವಂತನ ಶಕ್ತಿ ಅಪಾರ – ಅನಂತ

ಅಷ್ಟೇ ಅಲ್ಲ ಭಗವಂತನ ಕುರಿತು, ಭಗವಂತನ ಶಕ್ತಿಯ ಕುರಿತು ತಿಳಿದುಕೊಳ್ಳದೆ ಆತನ ಶಕ್ತಿಯನ್ನು ಕಡಿಮೆ ಅಂದಾಜು ಮಾಡಿ ಆತನನ್ನು ಸಾಮಾನ್ಯ ಮಾನವನಾಗಿ ಭಾವಿಸುತ್ತಾ ಆತನ ಶಕ್ತಿಯನ್ನು ಕಡಿಮೆ ಎಂದು ಭಾವಿಸಿ ಪ್ರವರ್ತಿಸುತ್ತಿದ್ದಾನೆ. ಹಾಗೆ ಪ್ರವರ್ತಿಸುವುದರಿಂದ ಒಂದು ರೀತಿಯಾಗಿ ಅವನನ್ನು ಅವಮಾನಿಸಿದಂತೆ ಆಗುತ್ತದೆ, ಅಂದರೆ ಗೌರವಿಸಿದಂತೆ ಆಗುವುದಿಲ್ಲ. ಈ ವಿಷಯವನ್ನು, ಈ ಕೆಳಗಿನ ಶ್ಲೋಕದಲ್ಲಿ ಹೀಗೆ ಹೇಳಿದ್ದಾರೆ.

**ಶ್ಲೋಕ: ಅವಜಾನಂತಿ ಮಾಂ ಮೂಢ ಮಾನುಷೀಂ ತನುಮಾಶ್ರೀತಂ। ಪರಂ ಭಾವ ಮಜಾನಂತೊ ಮಮ ಭೂತಮಹೇಶ್ವರಂ॥ (ಭ.ಗಿ.9–11)**

ತಾ:– ನನ್ನ ಪರತತ್ವವನ್ನು ಅರಿಯದ ಮೂಢರು, ಸಮಸ್ತ ಪ್ರಾಣಿಗಳನ್ನು ಸೃಷ್ಟಿಸಿದ ನನ್ನನ್ನು, ಮನುಷ್ಯ ದೇಹವನ್ನು ಧರಿಸಿದವನಾಗಿ ಭಾವಿಸಿ ಅವಮಾನಿಸುತ್ತಿದ್ದಾರೆ. ಎಂದರ್ಥ

ಸರ್ವಾಂತರ್ಯಾಮಿ, ಸರ್ವವ್ಯಾಪಿಯಾದ ಭಗವಂತನನ್ನು ಯಾವುದೋ ಗುಡಿಯಲ್ಲಿ ಮಾತ್ರವೆ ಇರುವ ಹಾಗೆ ಭಾವಿಸುವುದು, ಹಾಗೇ ಪ್ರವರ್ತಿಸುವುದು ಆತನ ಶಕ್ತಿಯನ್ನು ಅನುಮಾನಿಸುವುದಲ್ಲದೆ, ಮತ್ತೇನು? ಅಲ್ಲದೆ ಯಾರ ಪ್ರವರ್ತನೆ ನೋಡಿದರೂ, ದೇವಸ್ಥಾನಕ್ಕೆ ಹೋದಾಗ... ವಿಗ್ರಹದ ಎದುರು ಇದ್ದಾಗ ಮಾತ್ರವೇ...ಪವಿತ್ರವಾಗಿ ಇರುತ್ತಾರೆ. ಹೊರಗೆ, ಬಂದಾಕ್ಷಣ ಅವರ ಪ್ರವರ್ತನೆ ಮತ್ತೆ ಮೊದಲ ಹಂತಕ್ಕೆ ಬರುತ್ತದೆ.ಕಾರಣ ಆತನು ಗುಡಿಯಲ್ಲೇ ಇರುತ್ತಾನೆಂದು ಭಾವಿಸುವುದು. ಹಾಗಿದ್ದಲ್ಲಿ ಇದು ದೇವರ ಶಕ್ತಿಗೆ ತಕ್ಕ ಹಾಗೆ ಪ್ರವರ್ತಿಸುವುದು ಹೇಗೆ ಆಗುತ್ತದೆ? ಭಗವಂತನ ಶಕ್ತಿಯನ್ನು ಅವಗಾಹನೆ ಮಾಡಿಕೊಂಡವರು ಎಲ್ಲಾ ಕಡೆ ಪವಿತ್ರವಾಗಿರುತ್ತಾರೆ. ಎಲ್ಲದರಲ್ಲೂ, ಎಲ್ಲರಲ್ಲೂ ದೈವವನ್ನು ನೋಡುತ್ತಾರೆ.

ದೇವಸ್ಥಾನಕ್ಕೆ ಹೋದಾಗ ಕೋರಿಕೆಗಳನ್ನು ಮನಸ್ಸಿನಲ್ಲಿ ಕೋರಿಕೊಳ್ಳುತ್ತಾರೆ. ಕಾರಣ ಮನಸ್ಸಲ್ಲಿ ಅಂದುಕೊಂಡದ್ದು ತಿಳಿದುಕೊಳ್ಳುವ ಶಕ್ತಿ ಭಗವಂತನಿಗೆ ಇದೆ ಎಂದು ಅವರ ಅಭಿಪ್ರಾಯ... ಆಲೋಚಿಸಿ ಮನಸ್ಸಿನಲ್ಲಿ ಅಂದುಕೊಂಡದ್ದೆಲ್ಲಾ ತಿಳಿದುಕೊಳ್ಳುವ ಶಕ್ತಿ ಇದ್ದಾಗ ನಮ್ಮ ಮನಸ್ಸಿನಲ್ಲಿನ ಕೋರಿಕೆಗಳು ಆತನಿಗೆ ತಿಳಿಯವುದಿಲ್ಲವೇ ? ಮತ್ತೆ ಪ್ರತ್ಯೇಕಿಸಿ ಕೋರುವುದೇಕೆ? ಹಾಗೆ ಕೋರುತ್ತಿದ್ದೇವೆಂದರೆ, ಆತನ ಶಕ್ತಿಯನ್ನು ಕಡಿಮೆಯಾಗಿ ಭಾವಿಸುತಿದ್ದೇವೆಂದು ಅಲ್ಲವೆ? ಇನ್ನೂ ಆಲೋಚಿಸಿ ಎಲ್ಲವನ್ನು ತಿಳಿದುಕೊಳ್ಳುವ ಶಕ್ತಿ ಇರುವ ಭಗವಂತನಿಗೆ ನಮ್ಮ ಕೋರಿಕೆಗಳನ್ನು ಹೇಳಿಕೊಳ್ಳುವುದಕ್ಕೆ ಮಧ್ಯವರ್ತಿಗಳು ಬೇಕೇ? ಆತನೇನಾದರೂ ಮಧ್ಯವರ್ತಿಗಳನ್ನು

ನಿಯಮಿಸಿಕೊಂಡಿದ್ದಾನೆಯೇ? ಆಲೋಚಿಸಿದರೆ ಇವೆಲ್ಲವೂ ಆತನ ಶಕ್ತಿಗೆ ತಕ್ಕ ಹಾಗೆ ಪ್ರವರ್ತಿಸುವುದು ಅಲ್ಲವೆಂದು ತಿಳಿಯುತ್ತದೆ.

ಭಗವಂತನು ನಿದ್ದೆ ಹೋಗುತ್ತಾನೆಂದು ಭಾವಿಸಿ, ಉದಯವೆ ಸುಪ್ರಭಾತವನ್ನು ಹಾಡುತ್ತಾರೆ. ಭಗವಂತನಿಗೆ ನಿದ್ರೆ ಅಗತ್ಯವೆಂದು ಭಾವಿಸಿ ಜೋಗುಳ ಹಾಡುತ್ತಾರೆ. ಅಷ್ಟೆ ಹೊರತು ಭಗವಂತನು ನಿದ್ರೆ ಹೋಗುವನೇ? ಆತನಿಗೆ ನಿದ್ರೆ ಅಗತ್ಯವೇ? ಆತನು ನಿದ್ರೆ ಹೋದರೆ ಲೋಕಗಳು ಏನಾಗುತ್ತವೆ? ಎನ್ನುವುದನ್ನು ಆಲೋಚಿಸುವುದಿಲ್ಲ. ಹೀಗೆ ಮಾಡುವುದು ಆತನ ಶಕ್ತಿಯನ್ನು ಕಡಿಮೆ ಅಂದಾಜು ಮಾಡಿದಂತೆ ಆಗುತ್ತದೆ, ಶಕ್ತಿಯನ್ನು ನಂಬಿದಂತೆ ಆಗುವುದಿಲ್ಲ.

ಆಲೋಚಿಸಿ ಹುಟ್ಟು ಸಾವು ಇಲ್ಲದ ದೇವರಿಗೆ ಹಸಿವು ಬಾಯಾರಿಕೆ ಇರುತ್ತವೆಯೆ? ಇರುವುದಿಲ್ಲ ಅಲ್ಲವೆ? ಮತ್ತೆ ನೈವೇದ್ಯವನ್ನು ನೀಡುತ್ತಿದ್ದೇವೆಂದರೆ ಆತನ ಶಕ್ತಿಯನ್ನು ಕಡಿಮೆಯಾಗಿ ಭಾವಿಸುತ್ತಿದ್ದೇವೆಂದರ್ಥ?

ಇನ್ನೂ ಆಲೋಚಿಸಿ, ದೇವರಿಗೆ ಕೊಳಕು ಅಂಟುತ್ತದೆಯಾ? ಶುದ್ಧಿ ಮಾಡಬೇಕಾ? ಸ್ನಾನ ಅವಸರವೆ ? ಅಂದರೆ ಇಲ್ಲವಲ್ಲ? ಮತ್ತೆ ಅಭಿಷೇಕವನ್ನು ಮಾಡುತ್ತಿದ್ದೇವೆಂದರೆ ಆತನ ಶಕ್ತಿಯನ್ನು ನಂಬುತ್ತಿಲ್ಲ.

ಆಲೋಚಿಸಿ ಭಗವಂತನಿಗೆ ಕಿವಿಗಳು ಇವೆಯಾ? ಬೆವರು ಇದೆಯಾ? ಅಂದರೆ ಇಲ್ಲವಲ್ಲ? ಮತ್ತೆ ಮೈಕನ್ನು ಇಟ್ಟು ಕಿರುಚುತ್ತಿದ್ದೇವೆಂದರೆ ಆತನ ಶಕ್ತಿಗೆ ತಕ್ಕ ಹಾಗೆ ಪ್ರವರ್ತಿಸುತ್ತಿಲ್ಲವಲ್ಲ? ಶಕ್ತಿಯನ್ನು ಕಡಿಮೆ ಅಂದಾಜಿಸುತ್ತಿದ್ದೇವೆ.

ಇನ್ನೂ ಆಲೋಚಿಸಿದರೆ ಭಗವಂತನು ಕಾಣಿಕೆಯನ್ನು ಕೋರುವನೇ ? ಮುಡುಪು ಬಯಸುವನೇ? ಇವೆಲ್ಲವೂ ಅಗತ್ಯವಿಲ್ಲವೆಂದು ಖಚಿತವಾಗಿ ಹೇಳಬಹುದು. ಕಾರಣ ಈ ಸೃಷ್ಟಿ ಆತನದು. ಈ ಭೂಮಿಯ ಮೇಲೆ ಎಲ್ಲಾ ಸಂಪತ್ತು ಆತನದೆ , ಎಲ್ಲವನ್ನು ಆತನೆ ಸೃಷ್ಟಿಸಿಕೊಂಡಿರುವುದು. ಹಾಗಿರುವಾಗ ಇಂತಹ ಅಲ್ಪವಾದ ಕಾಣಿಕೆಯನ್ನು ಬಯಸುತ್ತಿದ್ದಾನೆಂದು ಕಾಣಿಕೆಯನ್ನು ಸಮರ್ಪಿಸುವುದು, ಹುಂಡಿಯಲ್ಲಿ ಹಣವನ್ನು ಹಾಕುವುದು... ಇಂತಹ ಕೆಲಸದ ಬಗ್ಗೆ ಆಲೋಚಿಸಿದರೆ ಆತನ ಶಕ್ತಿಯನ್ನು ಕಡಿಮೆ ಮಾಡಿದಂತೆ ಆಗುತ್ತದೆ.

ಆದ್ದರಿಂದ ಆಲೋಚಿಸಿ, ಭಗವಂತನ ಶಕ್ತಿಯನ್ನು ಕಡಿಮೆ ಅಂದಾಜು ಮಾಡಬೇಡಿ. ಆತನನ್ನು ಮಾನವನಾಗಿ ಭಾವಿಸಬೇಡಿ, ಆತನ ಶಕ್ತಿಗೆ ತಕ್ಕ ಹಾಗೆ ಪ್ರವರ್ತಿಸಿ. ಭಗವಂತನ ಶಕ್ತಿ ಅಪಾರ, ಅನಂತ ಎಂದು ತಿಳಿದುಕೊಳ್ಳಿ.

ಭಗವಂತನ ವಿಷಯದಲ್ಲಿ ಇನ್ನೂ ಆಲೋಚಿಸಬೇಕಾದ ವಿಷಯಗಳಿವೆ. ಯಾರಾದರೂ ತಂದೆಯನಲ್ಲದೆ ತಂದೆಯ ಆಸ್ತಿಯನ್ನು ಕೋರಿದರೆ ಹೇಗೆ ಇರುತ್ತದೆಯೋ, ಹಾಗೆಯೇ ಭಗವಂತನನ್ನು ಅಲ್ಲದೆ ಆತನ ಆಸ್ತಿಯಾದ ಸೃಷ್ಟಿಯಲ್ಲಿನ

ಎಲ್ಲವನ್ನು ಬಯಸಿದರೆ ಹಾಗೆಯೇ ಇರುತ್ತದೆ. ಕಾರಣ ಇವರೆಲ್ಲರೂ ಕೋರಿಕೆಗಳಿಂದ ಆರಾಧಿಸುತ್ತಿದ್ದಾರೆ, ಆದರೆ ಕೋರಿಕೆಗಳಿಲ್ಲದೆ ಆರಾಧಿಸುವವರು ತಂದೆಯನ್ನು ಕೋರುತ್ತಿರುವ ಹಾಗೆ ಅಂದರೆ ಸೃಷ್ಟಿಯಲ್ಲಿರುವುದು ಅಲ್ಲದೆ ಸೃಷ್ಟಿಕರ್ತನನ್ನು ಅಂದರೆ ಭಗವಂತನನ್ನು ಕೋರುತ್ತಿರುವ ಹಾಗೆ. ಆದ್ದರಿಂದ ಯಾವುದು ಮುಖ್ಯ ಎಂದು ಆಲೋಚಿಸಿ.

ಆಲೋಚಿಸಿದರೆ ವಿಶ್ವವಲ್ಲದೆ ವಿಶ್ವನಾಥನೆ ಶ್ರೇಷ್ಠನೆಂದು, ದೊಡ್ಡವನೆಂದು ತಿಳಿಯುತ್ತದೆ. ವಿಶ್ವವನ್ನು, ವಿಶ್ವದಲ್ಲಿರುವ ಎಲ್ಲವನ್ನು ಅಲ್ಲದೇ ಈ ವಿಶ್ವಕ್ಕೆ ನಾಥನಾದ ಭಗವಂತನನ್ನು ಕೋರಬೇಕು, ಆಶ್ರಯಿಸಬೇಕು.

ಇನ್ನು ಆಲೋಚಿಸಿ ಎಲ್ಲರೂ ಗುಡಿಗೆ ಹೋಗಿ ಬಂದು ದೇವನ ದರ್ಶನ ಮಾಡಿದೆವೆಂದು ಹೇಳುತ್ತಾರೆ... ಇವರು ದರ್ಶಿಸಿಕೊಂಡದ್ದು ಯಾರನ್ನ? ದೇವರನ್ನ? ವಿಗ್ರಹವನ್ನ?

ಆಲೋಚಿಸಿ ಮಾನವರು ವಿಗ್ರಹವನ್ನು, ಫೋಟೋಗಳನ್ನು ಪೂಜಿಸುವ ಸಮಯದಲ್ಲಿ ದೇವರಾಗಿ ಭಾವಿಸುತ್ತಾರೆ ಹೊರತು ನಂತರ ದೇವರು ಇಲ್ಲವೆನ್ನುವ ಹಾಗೆ ಪ್ರವರ್ತಿಸುತ್ತಾರೆ. ಅಷ್ಟೇ ಅಲ್ಲದೆ ಅವರು ಯಾವುದನ್ನು ದೇವರೆಂದು ಭಾವಿಸುತ್ತಾರೊ, ಯಾರನ್ನು ದೇವರೆಂದು ಭಾವಿಸುತ್ತಾರೊ ಅದನ್ನೇ ದೇವರು ಎನ್ನುವ ಹಾಗೆ ಪ್ರವರ್ತಿಸುತ್ತಾರೆ. ಬೇರೆ ಸಮಯದಲ್ಲಿ ದೇವರು ಇಲ್ಲವೆನ್ನುವ ಹಾಗೆ ಪ್ರವರ್ತಿಸುತ್ತಾರೆ.

ಗುಡಿಯಲ್ಲಿ ವಿಗ್ರಹವನ್ನು ದೇವರೆನ್ನುತ್ತಾರೆ. ಗುಡಿಯ ಹೊರಗೆ ಇರುವ ವಿಗ್ರಹಗಳು ದೇವರು ಅಲ್ಲವೆನ್ನುವ ಹಾಗೆ ಪ್ರವರ್ತಿಸುತ್ತಾರೆ. ಗೋಡೆಗೆ ಹಾಕಿದ ಫೋಟೋವನ್ನು ದೇವರೆನ್ನುತ್ತಾರೆ. ಲಗ್ನಪತ್ರಿಕೆಯ ಮೇಲಿರುವ ಫೋಟೋಗಳನ್ನು ದೇವರು ಅಲ್ಲವೇನೊ ಎಂಬಂತೆ ಹೊರಗೆ ಬಿಸಾಡುತ್ತಾರೆ. ಕ್ಯಾಲೆಂಡರ್ ನಲ್ಲಿ ತಾರೀಖುಗಳು ಇರುವವರೆಗೆ ದೇವರಿಗೆ ಕೈ ಮುಗಿಯುತ್ತಾರೆ. ತಾರೀಖುಗಳು ಆಗಿ ಹೋದರೆ ಕ್ಯಾಲೆಂಡರ್ ಅನ್ನು ಹೊರಗೆ ಬಿಸಾಡುತ್ತಾರೆ. ಆಲೋಚಿಸಿದರೆ ಇಂತಹ ಎಷ್ಟೋ ವಿಷಯವನ್ನು ನಾವು ಗಮನಿಸಬಹುದು.

ಲೋಕದಲ್ಲಿ ವಿಗ್ರಹ ಆರಾಧನೆ ಮೂರು ಕಾರಣಗಳಿಂದ ಮಾಡುತ್ತಿದ್ದಾರೆ.

(1) ವಿಗ್ರಹವೇ ಭಗವಂತನೆಂದು ಭಾವಿಸುತ್ತಾ ಆರಾಧಿಸುವವರು ಕೆಲವರು.

(2) ವಿಗ್ರಹದಲ್ಲಿ ಭಗವಂತನಿದ್ದಾನೆಂದು ಭಾವಿಸಿ ಆರಾಧಿಸುವವರು ಕೆಲವರು.

(3) ವಿಗ್ರಹವನ್ನು ಆರಾಧಿಸಿದರೆ ಭಗವಂತನನ್ನು ಆರಾಧಿಸಿದ ಹಾಗೆ ಎಂದು ಭಾವಿಸುತ್ತಾ ಆರಾಧಿಸುವವರು ಇನ್ನೂ ಕೆಲವರು. ಆದರೆ ಯಾರು ಯಾವ ರೀತಿಯಾಗಿ ಆರಾಧಿಸುತ್ತಿದ್ದರು ಇಲ್ಲಿ ಇನ್ನೂ ಸ್ವಲ್ಪ ಆಲೋಚಿಸಬೇಕು. ಇಲ್ಲದೆ ಹೋದರೆ ನಷ್ಟ ಹೋಗುವುದು ನಾವೆ.

(1) ವಿಗ್ರಹವನ್ನೆ ಭಗವಂತೆನೆಂದು ಭಾವಿಸುವವರು ಆಲೋಚಿಸಬೇಕಾಗಿರುವುದು ಏನೆಂದರೆ? ವಿಗ್ರಹವನ್ನು ನಾವೆ ಅಲ್ಲವೆ ತಯಾರು ಮಾಡಿರುವುದು? ಮತ್ತೆ ನಾವು ಭಗವಂತನನ್ನು ತಯಾರು ಮಾಡಲು ಆಗುವುದೇ? ಆ ಶಕ್ತಿಯು ನಮಗಿದೆಯೇ? ನಾವು ತಯಾರು ಮಾಡಿರುವ ವಿಗ್ರಹ ಭಗವಂತನಾಗುವನೇ? ಎನ್ನುವ ವಿಷಯಗಳನ್ನು ಕಡ್ಡಾಯವಾಗಿ ಆಲೋಚಿಸಬೇಕು.

(2) ವಿಗ್ರಹದಲ್ಲಿ ಭಗವಂತನಿಲ್ಲ ಎಂದು ಭಾವಿಸುವವರು ಕೂಡ ಆಲೋಚಿಸಬೇಕಾಗಿದೆ. ವಿಗ್ರಹದಲ್ಲಿ ಭಗವಂತ ನಿಲ್ಲವೇ? ಎಂದು ಪ್ರಶ್ನಿಸುತ್ತಿದ್ದಾರೆಂದರೆ... ವಿಗ್ರಹದಲ್ಲಿ ಇರುವುದು ಭಗವಂತನೇ? ವಿಗ್ರಹವು ಭಗವಂತನೇ? ಎಂದು ಪ್ರಶ್ನಿಸಿಕೊಂಡರೆ ವಿಗ್ರಹದಲ್ಲಿಯೇ ಇರುತ್ತಾನೆಂದುಕೊಂಡರೆ, ವಿಗ್ರಹ ಭಗವಂತನಲ್ಲ.

ಆಲೋಚಿಸಿದರೆ ವಿಗ್ರಹದಲ್ಲಿ ಭಗವಂತನಿದ್ದಾಗ ಎಲ್ಲಾ ಜೀವಿಗಳಲ್ಲಿ ಇರುವುದಿಲ್ಲವೇ? ಎಲ್ಲಾ ಪ್ರಾಣಿಗಳಲ್ಲಿ ಇರುವುದಿಲ್ಲವೇ? ಯಾವ ಪ್ರಾಣಿಯನ್ನು ಪೂಜಿಸಿದರೂ ಭಗವಂತನನ್ನು ಪೂಜಿಸಿದ ಹಾಗೆ.... ವಿಗ್ರಹವನ್ನು ಬಿಟ್ಟು ಮಿಕ್ಕೆಲ್ಲವನ್ನು ಏಕೆ ಪೂಜಿಸಬೇಕು ? ಕನಿಷ್ಠಪಕ್ಷ ಏಕೆ ಗೌರವಿಸುವುದು? ಏಕೆ ಹಿಂಸಿಸದೆ ಇರುವುದು? ಇವೆಲ್ಲವನ್ನೂ ನಾವು ಆಲೋಚಿಸಬೇಕಲ್ಲವೆ?

ವಿಗ್ರಹವನ್ನು ಪೂಜಿಸಿದರೆ ಭಗವಂತನನ್ನು ಪೂಜಿಸಿದ ಹಾಗೆ ಆದಾಗ...ಯಾವ ಪ್ರಾಣಿಯನ್ನು ಹಿಂಸಿಸಿದರೂ ಭಗವಂತನನ್ನು ಹಿಂಸಿಸಿದ ಹಾಗೆಲ್ಲವೆ? ಯಾವ ಮಾನವನನ್ನು ಅವಮಾನಿಸಿದರೂ, ನಷ್ಟವನ್ನುಂಟು ಮಾಡಿದರೂ, ಕಷ್ಟವನ್ನುಂಟು ಮಾಡಿದರೂ ಭಗವಂತನನ್ನು ಬಾಧಿಸಿದ ಹಾಗಲ್ಲವೆ? ಅವಮಾನಿಸಿದ ಹಾಗಲ್ಲವೆ? ಮತ್ತೆ ಏಕೆ ಇವೆಲ್ಲವನ್ನು ಮಾಡುತ್ತಿದ್ದೇವೆ? ಎಂದು ಆಲೋಚಿಸಬೇಕಲ್ಲವೆ? ಮತ್ತೆ ವಿಗ್ರಹದಲ್ಲಿ ಭಗವಂತನಿದ್ದಾಗ ಎಲ್ಲಾ ವಿಗ್ರಹಗಳಲ್ಲಿ ಕೂಡ ಇರುತ್ತಾನಲ್ಲವೆ? ಅಂದರೆ ಎಲ್ಲಾ ವಿಗ್ರಹದಲ್ಲಿ ಇರುವುದು ಒಬ್ಬನೇನಾ? ಮತ್ತೆ ಕೆಲವು ವಿಗ್ರಹಗಳನ್ನು ಆರಾಧಿಸಿ ಕೆಲವನ್ನು ಏಕೆ ದ್ವೇಷಿಸುವುದು? ಹಾಗೆಯೇ ಕೆಲವು ರೂಪಗಳನ್ನು ದ್ವೇಷಿಸುತ್ತಿದ್ದೇವೆಂದರೆ ಒಳಗಿರುವುದನ್ನು ನೋಡುತ್ತಿಲ್ಲವೆಂದರ್ಥ....

ಇನ್ನೂ ಆಲೋಚಿಸಿದರೆ ವಿಗ್ರಹದಲ್ಲಿ ದೇವರಿದ್ದಾಗ ವಿಗ್ರಹಗಳಿಗೆ ಪ್ರಾಣ ಪ್ರತಿಷ್ಠೆ ಏಕೆ ಮಾಡುತ್ತಿದ್ದಾರೆ? ಪ್ರಾಣ ಪ್ರತಿಷ್ಠೆಯನ್ನು ಮಾಡದಿದ್ದರೆ ಆರಾಧನೆಗೆ ಅರ್ಹವಲ್ಲವೆಂದು ಏಕೆ ಹೇಳುತ್ತಾರೆ?

ಆಲೋಚಿಸಿದರೆ ಈ ಪ್ರಾಣ ಪ್ರತಿಷ್ಠೆಯ ವಿಷಯದಲ್ಲಿ ಕೂಡ ಎಷ್ಟೋ ಪ್ರಶ್ನೆಗಳು ಉದಯಿಸುತ್ತವೆ. ಅಸಲು ಪ್ರಾಣ ಪ್ರತಿಷ್ಠೆ ಎಂದರೇನು? ವಿಗ್ರಹದಲ್ಲಿ ಪ್ರಾಣವನ್ನು ಪ್ರತಿಷ್ಠೆ

ಮಾಡುವುದು ಅಂದರೆ ಪ್ರಾಣವನ್ನು ಸುರಿಯುವುದೆಂದು ಹೇಳುತ್ತಾರೆ. ಇಲ್ಲಿ ಕೂಡ ಆಲೋಚಿಸಿದರೆ ಪ್ರಾಣವೇ ಭಗವಂತ, ವಿಗ್ರಹ ಅಲ್ಲವೆಂದು ತಿಳಿಯುತ್ತದೆ ಅಲ್ಲವೆ?

ಇನ್ನೂ ಆಲೋಚಿಸಿದರೆ ಪ್ರಾಣವಿಲ್ಲದೆ ಇರುವುದಕ್ಕೆ ಪ್ರಾಣವನ್ನು ನೀಡುವುದೇಕೆ? ಪ್ರಾಣ ಇರುವುದನ್ನೆ ಆರಾಧಿಸಬಹುದಲ್ಲವೆ? ಇಲ್ಲಿ ವಿಚಿತ್ರವೇನಂದರೆ ಪ್ರಾಣವಿರುವುದನ್ನು ಹಿಂಸಿಸುತ್ತಿದ್ದಾರೆ, ಸಾಯಿಸುತ್ತಿದ್ದಾರೆ, ಭಕ್ಷಿಸುತ್ತಿದ್ದಾರೆ. ಪ್ರಾಣವಿಲ್ಲದೆ ಇರುವುದಕ್ಕೆ ಪ್ರಾಣವನ್ನು ನೀಡಿದೆವೆಂದು ಹೇಳಿ ಆರಾಧಿಸುತ್ತಿದ್ದಾರೆ. ಎಷ್ಟು ವಿಚಿತ್ರ ಆಲೋಚಿಸಿ.

ಇನ್ನೂ ಆಲೋಚಿಸಿದರೆ,ಪ್ರಾಣ ಪ್ರತಿಷ್ಠೆಯನ್ನು ಮಾಡಿದೆವು ಎನ್ನುತ್ತಾರೆ. ಮತ್ತೆ ಪ್ರಾಣವನ್ನು ಸುರಿದಿರುವರೇ? ಇಲ್ಲವೆ? ಇದು ಹೇಗೆ ತಿಳಿಯುತ್ತದೆ? ಇಲ್ಲದೆ ಹೋದರೆ ಸುಮ್ಮನೆ ಮಂತ್ರಗಳನ್ನು ಓದಿದ್ದಾರಾ? ಆಲೋಚಿಸಿ. ಪ್ರಾಣವಿರುವ ಪ್ರತಿಯೊಂದು ಕದಲುತ್ತದಲ್ಲವೆ? ಮತ್ತೆ ಪ್ರಾಣವನ್ನು ನೀಡಿದಾಗ ವಿಗ್ರಹವು ಏಕೆ ಕದಲುತ್ತಿಲ್ಲ? ಕದಲ ಬೇಕಲ್ಲವೆ?

ಮಂತ್ರಗಳನ್ನು ಓದಿದರೆ ಪ್ರಾಣವನ್ನು ನೀಡಿದಂತಾದರೆ ಅವೇ ಮಂತ್ರಗಳನ್ನು ಓದಿ ಪ್ರಾಣ ಹೋದ ಜೀವಿಗಳನ್ನು ಬದುಕಿಸಬಹುದಲ್ಲವೆ? ಏಕೆ ಹಾಗೆ ಮಾಡುವುದಿಲ್ಲ? ಏಕೆ ಅಳುತ್ತಾರೆ? ಬಾಧೆ ಪಡುತ್ತಾರೆ?

ಆದ್ದರಿಂದ ಭಗವಂತನ ವಿಷಯದಲ್ಲಿ ಆಲೋಚಿಸಬೇಕಾದವು ಎಷ್ಟೋ ಇವೆ. ಹಾಗೆ ಆಲೋಚಿಸದೆ ಮಾಡುವ ಕೆಲಸದಿಂದ ನಷ್ಟ ಹೋಗುವುದು ನಾವೇ ಎಂದು ತಿಳಿದುಕೊಳ್ಳಿ. ಭಗವಂತನಿದ್ದಾನೆ, ಇರುವುದು ಒಂದೇ ಅಲ್ಲ, ಆತನು ತುಂಬಾ ಶಕ್ತಿಯನ್ನು ಹೊಂದಿದವನು, ಶ್ರೇಷ್ಠನಾದವನು, ಇದನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು. ಆದ್ದರಿಂದ ಭಗವಂತನ ಪ್ರಕಾರ ನಾವಿರಬೇಕು, ಅಷ್ಟೇ ಹೊರತು ಆತನು ನಾವು ಭಾವಿಸಿದ ಹಾಗೆ ಮಾತ್ರ ಇರುವುದಿಲ್ಲ.

3) ಕೆಲವರು ಏನೆನ್ನುತ್ತಾರೆಂದರೆ ಅದೇನು ಅಲ್ಲ ನಾನು ವಿಗ್ರಹವನ್ನೇ ಆರಾಧಿಸಿದರೆ ಭಗವಂತನನ್ನು ಆರಾಧಿಸಿದ ಹಾಗೆಂದು ಭಾವಿಸುತ್ತಿದ್ದೇನೆ. "ಯದ್ಭಾವಂ ತದ್ಭವತಿ" ಎನ್ನುತ್ತಾರೆಂದು ಹೇಳುತ್ತಾರೆ. ಆದರೆ ಇಲ್ಲಿ ಆಲೋಚನೆ ಮಾಡಬೇಕಾಗಿದೆ.

ಉದಾ: ನೀವು ಕತ್ತಲಲ್ಲಿ ಹೋಗುವಾಗ ದಾರಿಯಲ್ಲಿ 'ಹಗ್ಗ'ವು ಬಿದ್ದಿದೆ. ನೀವು ಅದನ್ನು 'ಹಾವು' ಎಂದು ಭಾವಿಸಿ ಭಯ ಪಟ್ಟು ಕಿರುಚುತ್ತೀರಾ. ಹಾಗೆ ನೀವು ಹಗ್ಗವನ್ನು ನೋಡಿ ಹಾವೆಂದು ಭಾವಿಸಿದ ಮಾತ್ರಕ್ಕೆ ಆ ಹಗ್ಗ ಹಾವು ಆಗಿ ಹೋಗುತ್ತದೆಯೇ ? ನೀವು ಕೂಗಿಕೊಂಡ ಮಾತ್ರಕ್ಕೆ ಅದು ಬಂದು ನಿಮ್ಮನ್ನು ಕಚ್ಚುವುದೇ ? ಆಲೋಚಿಸಿ. ವಿಗ್ರಹವನ್ನು ನೀವು ದೇವರೆಂದು ಭಾವಿಸಿದ ಮಾತ್ರಕ್ಕೆ ವಿಗ್ರಹವು ದೇವರಾಗುವನೇ ? ನೀವು ಏನೇ ಮಾಡಿದರೂ ಆತನು ಬಂದು ನಿಮ್ಮನ್ನು ಅನುಗ್ರಹಿಸುವನೇ? ಅದು ನಿಮ್ಮ ಭ್ರಾಂತಿ.

ಹಾಗೆ ನೀವು ಕುಳಿತುಕೊಳ್ಳುವ ಕುರ್ಚಿಯನ್ನು ಇದು ಬಂಗಾರದ ಕುರ್ಚಿ ಎಂದು

ಭಾವಿಸಿದರೆ ಅದು ಬಂಗಾರದ ಕುರ್ಚಿ ಆಗುವುದೇ ? ಹಾಗೆ ಯಾರ ಬಂಗಲೆಯನ್ನೋ ನಿಮ್ಮದೆಂದು ಭಾವಿಸಿದರೆ ನಿಮ್ಮದಾಗುವುದೇ? ಆದ್ದರಿಂದ ತಿಳಿದುಕೊಳ್ಳಿ ಭಾವ... ಭಾವವೇ ? ಸತ್ಯ... ಸತ್ಯವೇ ?

ಆದ್ದರಿಂದ ಭಗವಂತನ ವಿಷಯದಲ್ಲಿ ಭಾವಕ್ಕಲ್ಲದೆ ಸತ್ಯಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು. ಸತ್ಯವನ್ನು ತಿಳಿದುಕೊಳ್ಳಬೇಕು, ಸತ್ಯವನ್ನು ಆಶ್ರಯಿಸಬೇಕು, ಕಾರಣ ಸತ್ಯವೇ ಭಗವಂತ. ಅಷ್ಟೆ ಅಲ್ಲದೆ ಭಗವಂತನು ನಿನ್ನ ಭಾವದ ರೀತಿ ಇರುವುದಿಲ್ಲ. ಏಕೆಂದರೆ ಭಾವವು ಬದಲಾಗುತ್ತಿರುತ್ತದೆ, ಮನುಷ್ಯ ,ಮನುಷ್ಯನಿಗೆ ಬೇರೆ ಬೇರೆಯಾಗಿ ಇರುತ್ತದೆ. ಆದರೆ ಸತ್ಯವೊಂದೆ, ಸತ್ಯವು ಬದಲಾಗುವುದಿಲ್ಲ. ಕಾಲವು ಬದಲಾದರೂ, ಯುಗಗಳು ಬದಲಾದರು, ಬದಲಾಗದಿರುವುದು ಸತ್ಯವೊಂದೆ. ಸತ್ಯವು ನಿತ್ಯವಾದದ್ದು, ಶಾಶ್ವತವಾದದ್ದು, ಅಂದರೆ ಯಾವಾಗಲೂ ಇರುವುದು. ಆದ್ದರಿಂದ ಅಂತಹ ಸತ್ಯವನ್ನು ಆಶ್ರಯಿಸಬೇಕು, ಅಂದರೆ ಸತ್ಯವಾದ ಭಗವಂತನನ್ನು ಆಶ್ರಯಿಸಬೇಕು.

ಈ ಸೃಷ್ಟಿಯಲ್ಲಿ ಯಾವುದು ಸತ್ಯ? ಅಂದರೆ 'ಆತ್ಮವೇ' ಸತ್ಯ, ಅಂದರೆ 'ಆತ್ಮವೇ' ಭಗವಂತ. ಆದ್ದರಿಂದ ಆತ್ಮವನ್ನು ಆಶ್ರಯಿಸಬೇಕು, ಆತ್ಮವನ್ನು ಆರಾಧಿಸಬೇಕು. ಆತ್ಮದ ಕಡೆ ಭಕ್ತಿಯನ್ನು ಹೊಂದಿರಬೇಕು. ಹಾಗಾದರೆ ಆತ್ಮ ಎಲ್ಲಿದೆ....? ಎಲ್ಲರಲ್ಲಿದೆ, ಎಲ್ಲಾ ಕಡೆ ಇದೆ. ಆದ್ದರಿಂದ ಭಗವಂತನು ಸರ್ವಾಂತರ್ಯಾಮಿ ಎನ್ನುತ್ತಾರೆ.

ಆದ್ದರಿಂದ ಎಲ್ಲರಲ್ಲಿರುವ ಆತ್ಮ ನಿನ್ನಲ್ಲಿಯೂ ಇದೆ ಆದ್ದರಿಂದ ಅಂತರ್ಮುಖರಾಗಬೇಕು. ಅಂದರೆ ಧ್ಯಾನವನ್ನು ಆಶ್ರಯಿಸಬೇಕು. ಇದೇ ನಿಜವಾದ ಆರಾಧನೆ, ಭಗವಂತನನ್ನು ಆಶ್ರಯಿಸುವುದು ಎಂದರೆ ಅದೇ.... ಇದೆಲ್ಲವೂ ಎಷ್ಟೋ ಆಲೋಚಿಸಿದರೆ ತಿಳಿಯುತ್ತದೆ, ಎಷ್ಟೋ ವಿಚಾರಣೆ ಮಾಡಿದರೆ ತಿಳಿಯುತ್ತದೆ.

**ಸತ್ಯ ಸಾಯಿಬಾಬಾ**

1. ಸತ್ಯ,
2. ಧರ್ಮ
3. ಪ್ರೇಮ
4. ಅಹಿಂಸೆ
5. ಶಾಂತಿಗಳೆನ್ನುವ ಅಂಶಗಳನ್ನು ಹೇಳುತ್ತಾ ಮುಖ್ಯವಾಗಿ ಮೊದಲನೆಯದು 'ಸತ್ಯ' ಎಂದು ಹೇಳಿದ್ದಾರೆ. ಸತ್ಯಕ್ಕೆ ಅಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಆತನ ಸಂದೇಶವೇನೆಂದರೆ ಸತ್ಯವನ್ನು ಆಶ್ರಯಿಸಬೇಕು, ಧರ್ಮವನ್ನು ಆಚರಿಸಬೇಕು, ಪ್ರೀತಿಯನ್ನು ಹಂಚಬೇಕು, ಅಹಿಂಸೆಯನ್ನು ಪಾಲಿಸಬೇಕು, ಶಾಂತಿಯಾಗಿ ಜೀವಿಸಬೇಕು, ಎಲ್ಲರನ್ನೂ ಜೀವಿಸಲು ಬಿಡಬೇಕು, ಇದೇ ಬಾಬಾ ಅವರ ಸಂದೇಶ. ಈ ಸಂದೇಶದಲ್ಲಿ ಎಲ್ಲವೂ ಬೆರೆತಿವೆ.

ಹಾಗೆ ಭಗವಂತನ ಕುರಿತು ಆಲೋಚಿಸಬೇಕಾದದ್ದು ಇನ್ನೂ ಕೆಲವನ್ನು ನೋಡೋಣ.

(1) ಭಗವಂತನು ಸರ್ವಾಂತರ್ಯಾಮಿ ಎನ್ನುತ್ತಾ, ಆತನು ಆಲಯದಲ್ಲಿ, ಚರ್ಚಿನಲ್ಲಿ, ಮಸೀದಿಯಲ್ಲಿ ಮಾತ್ರವೇ ಇರುವ ಹಾಗೆ ಪ್ರವರ್ತಿಸುತ್ತಾರೆ. ಮಿಕ್ಕ ಕಡೆ ಆತನು ಇಲ್ಲದೆ ಇರುವ ಹಾಗೆ ಪ್ರವರ್ತಿಸುತ್ತಾರೆ?

(2) ಭಗವಂತನು ಎಲ್ಲರಲ್ಲೂ ಇದ್ದಾನೆಂದು, ಹೊರಗೆ ಬೇರೆಯಾಗಿ ಇರುವ ಹಾಗೆ ಪೂಜೆಯನ್ನು ತೀರ್ಥಯಾತ್ರೆಗಳನ್ನು ಏಕೆ ಮಾಡುತ್ತಿದ್ದೇವೆ?

(3) ಭಗವಂತನ ಶಕ್ತಿ ಅಪಾರವೆಂದು, ಆತನಿಗೆ ತಿಳಿಯದೆ ಇರುವುದು ಏನೂ ಇಲ್ಲವೆಂದು, ಪಾಪಗಳನ್ನು ಏಕೆ ಮಾಡುತ್ತಿದ್ದೇವೆ?

(4) ಮನಸ್ಸಿನಲ್ಲಿ ಕೋರಿಕೊಂಡದ್ದು ಭಗವಂತನಿಗೆ ತಿಳಿಯುತ್ತದೆಯೆಂದು ಮನಸ್ಸಿನಲ್ಲಿ ಕೋರಿಕೊಳ್ಳುತ್ತಾ, ತನ್ನ ಆಲೋಚನೆಗಳು, ಭಾವನೆಗಳು ಭಗವಂತನಿಗೆ ತಿಳಿಯದೆನ್ನುವ ಹಾಗೆ ದುಷ್ಟ ಆಲೋಚನೆಗಳನ್ನು ಏಕೆ ಮಾಡುತ್ತಿದ್ದೇವೆ?

(5) ಮನಸ್ಸಿನಲ್ಲಿ ಯಾವಾಗ, ಎಲ್ಲಿ ಯಾವಾಗ ಏನು , ಕೋರಿಕೊಂಡರು ತಿಳಿದುಕೊಳ್ಳುವ ಶಕ್ತಿ ಭಗವಂತನಿಗಿದೆ ಎಂದು ತಿಳಿದಿದೆ. ಆದರೆ ತನಗೆ ಬಂದ ಕಷ್ಟಗಳು ತಿಳಿಯವು ಎನ್ನುವ ಹಾಗೆ ಪ್ರತ್ಯೇಕಿಸಿ ಏಕೆ ಕೋರುತ್ತಿದ್ದೇವೆ? ಏಕೆ ಪ್ರಾರ್ಥಿಸುತ್ತಿದ್ದೇವೆ?

(6) ಭಗವಂತನೆಂದರೆ ಇಷ್ಟ, ಭಕ್ತಿ, ಗೌರವ ವೆಂದು ಪೂಜಿಸುತ್ತಾ, ಪ್ರಾರ್ಥಿಸುತ್ತಾ, ಅಂತರಾತ್ಮ ರೂಪದಲ್ಲಿ ಭಗವಂತನು ಹೇಳುವುದನ್ನು ಏಕೆ ಕೇಳುತ್ತಿಲ್ಲ.

(7) ಭಗವಂತನಿಗೆ ತಿಳಿಯದಿರುವುದು ಏನೂ ಇಲ್ಲವೆಂದು, ಆತನ ಭಗವದ್ಗೀತೆ, ಬೈಬಲ್, ಕುರಾನ್ ಗಳಿಂದ ಹೇಳಿರುವುದನ್ನು ಏಕೆ ಆಚರಿಸುತ್ತಿಲ್ಲ?

ಹೀಗೆ ಭಗವಂತನ ಬಗ್ಗೆ ಎಷ್ಟನ್ನು ಆಲೋಚಿಸಬೇಕು. ಹಾಗೆ ಭಗವಂತನ ಕುರಿತು ಎಷ್ಟು ಆಲೋಚಿಸಿದರೆ... ಎಷ್ಟನ್ನು ತಿಳಿದುಕೊಂಡರೆ, ನಾವು ಅಷ್ಟು ಲಾಭವನ್ನು ಪಡೆಯುತ್ತೇವೆ. ಆತನ ಬಗ್ಗೆ ತಿಳಿಯದಿದ್ದರೆ ನಮ್ಮ ಪ್ರವರ್ತನೆ ಒಂದು ರೀತಿಯಾಗಿ ಇರುತ್ತದೆ, ತಿಳಿದುಕೊಂಡರೆ ನಮ್ಮ ಪ್ರವರ್ತನೆ ಇನ್ನೊಂದು ರೀತಿಯಾಗಿರುತ್ತದೆ. ಆದ್ದರಿಂದ ಕಡ್ಡಾಯವಾಗಿ ಸರಿಯಾಗಿ ಭಗವಂತನ ಕುರಿತು ಚೆನ್ನಾಗಿ ಆಲೋಚಿಸಬೇಕು.

# ಇರಬೇಕಾದದ್ದು ದೈವ ಭೀತಿಯಲ್ಲ- ಪಾಪ ಭೀತಿ

ಆಲೋಚಿಸಿದರೆ ಮಾನವರಿಗೆ ಇರಬೇಕಾದದ್ದು "ಪಾಪ ಭೀತಿ" ಆದರೆ ಮಾನವರಿಗೆ ಇರುವುದು "ದೈವಭೀತಿ".

ಏಕೆಂದರೆ ದಿನಾಲೂ ಪೂಜೆಯನ್ನು ಮಾಡುತ್ತಾ ಯಾವಾಗಲಾದರೂ ಒಂದು ದಿನ ಪೂಜೆಯನ್ನು ಬಿಟ್ಟರೆ ಎಷ್ಟೋ ಭಯಪಡುತ್ತಾರೆ. ಕಾರಣ ಪೂಜೆ ಮಾಡದಿದ್ದರೆ,ದೇವರು ಕೋಪ ಮಾಡಿಕೊಳ್ಳುತ್ತಾರೆಂದು ಅವರ ಉದ್ದೇಶ. ವಾರ ವಾರ ದೇವಸ್ಥಾನಗಳಿಗೆ ಹೋಗುತ್ತಾರೆ. ಒಂದು ವಾರ ದೇವಸ್ಥಾನಕ್ಕೆ ಹೋಗದೆ ಇದ್ದರೆ, ದೇವರಿಗೆ ಸಂಬಂಧಪಟ್ಟ, ರೂಢಿಯಾಗಿರುವ ಕೆಲಸ ಯಾವುದನ್ನು ಬಿಟ್ಟರು ಏನಾದರೂ ಕೆಟ್ಟದ್ದು ನಡೆಯುತ್ತದೆ ಎಂದು ಭಯಪಡುತ್ತಾರೆ. ಅಥವಾ ದೇವರಿಗೆ ಕೋಪ ಬರುತ್ತದೆ ಎಂಬ ಭಯವಿರುತ್ತದೆ.

**"ಹಾಗೆ ಎಲ್ಲರೂ ದೇವರಿಗೆ ಭಯಪಡುತ್ತಾ ದೈವಭೀತಿಯಿಂದ ಜೀವಿಸುತ್ತಿದ್ದಾರೆ. ಆದರೆ, ಪಾಪಗಳನ್ನು ಮಾಡುವುದಕ್ಕೆ ಮಾತ್ರ ಭಯಪಡುತ್ತಿಲ್ಲ"**. ಆದ್ದರಿಂದ ಪಾಪಗಳನ್ನು ಯಥೇಚ್ಛವಾಗಿ, ಧೈರ್ಯವಾಗಿ ಮಾಡುತ್ತಿದ್ದಾರೆ.

ತಿಳಿದುಕೊಳ್ಳಿ ಮಾನವನು ಭಯ ಪಡಬೇಕಾದದ್ದು ಪಾಪ ಮಾಡುವುದಕ್ಕೆ. ಪಾಪ ಮಾಡಿದರೆ ಕಷ್ಟಗಳು ಬರುತ್ತವೆ. ಆದರಿಂದ ಆಲೋಚಿಸಿ, ದೈವಕ್ಕೆ ಭಯಪಡಬೇಕಾ? ಪಾಪಗಳನ್ನು ಮಾಡುವುದಕ್ಕೆ ಭಯಪಡಬೇಕಾ?

# ಹಣವಿದ್ದರೆ ಸಾಕೇ?

ಮುಖ್ಯವಾಗಿ ಮಾನವನು ಹಣಕ್ಕೆ ಹೆಚ್ಚಾದ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾನೆ. ಧನವಿದ್ದರೆ ಸಾಕು ಎಂದುಕೊಳ್ಳುತ್ತಿದ್ದಾನೆ. ಧನ ಸಂಪಾದನೆಯೇ ಮಾನವನ ಪ್ರಥಮ ಆದ್ಯತೆ.. ಆಲೋಚಿಸಿ, ಧನವಿದ್ದರೆ ಸಾಕೆ? ಆದ್ದರಿಂದ ಈ ವಿಷಯದ ಕುರಿತು ಆಲೋಚಿಸೋಣ.

ಆಲೋಚಿಸಿದರೆ ಮಾನವನು ಎಷ್ಟೆ ಸಂಪಾದಿಸಿದರೂ, ಎಷ್ಟೇ ಸುಖಗಳನ್ನು ಸಂಪಾದಿಸಿಕೊಂಡರು, ಕಡೆಗೆ ದುಃಖಗಳ ಪಾಲಾಗಿ ಆ ಸುಖವನ್ನು ಅನುಭವಿಸಲಾರದೆ ಹೋಗುತ್ತಿದ್ದಾನೆ. ಎಷ್ಟೊ ಬುದ್ಧಿವಂತಿಕೆ ಇದೆ ಎಂದು ಭಾವಿಸುವ ಮಾನವನು ತನ್ನ ದುಃಖವನ್ನು ಮಾತ್ರ ನಿವಾರಿಸಿಕೊಳ್ಳಲಾರದೆ ಹೋಗುತ್ತಿದ್ದಾನೆ. ಇದಕ್ಕೆ ಮುಖ್ಯ ಕಾರಣ ಮಾನವನು 'ಪಾಪ, ಪುಣ್ಯ'ಗಳ ಕುರಿತು ಆಲೋಚಿಸದೆ ಇರುವುದು.

ಮಾನವನು ಈ 'ಪಾಪ, ಪುಣ್ಯ'ಗಳ ಕುರಿತು ಆಲೋಚಿಸದೆ ಎಷ್ಟು ಧನವನ್ನು ಸಂಪಾದಿಸಿದರೂ ತಾನು ಅಂದುಕೊಂಡ ಹಾಗೆ ಜೀವಿಸಲಾರರು. ಅಂದರೆ ಸುಖವಾಗಿ ಇರಲಾರನು, ದುಃಖವನ್ನು ನಿವಾರಿಸಿಕೊಳ್ಳಲಾರನು. ಆದ್ದರಿಂದ ಮುಖ್ಯವಾಗಿ 'ಪಾಪ, ಪುಣ್ಯ'ಗಳ ಕುರಿತು ಆಲೋಚಿಸಬೇಕು. ಏಕೆಂದರೆ ಪಾಪದಿಂದಲೆ ದುಃಖ ಬರುತ್ತದೆ. ದುಃಖವಿದ್ದರೆ ಎಷ್ಟು ಧನವಿದ್ದರೂ, ಸುಖ ಸಂತೋಷಗಳಿದ್ದರೂ ಅನುಭವಿಸಲಾರನು. ಜೀವನವು ನರಕ ಪ್ರಾಯವಾಗುತ್ತದೆ.

ಆದ್ದರಿಂದ ಯಾವುದು ಪಾಪವೆಂದು ತಿಳಿದುಕೊಳ್ಳಬೇಕು. ಏಕೆ ಪಾಪವನ್ನು ಮಾಡಬಾರದೆಂದು ತಿಳಿದುಕೊಳ್ಳಬೇಕು. ಹಾಗೇ ಪುಣ್ಯವನ್ನು ಏಕೆ ಮಾಡಬೇಕೆಂದು ತಿಳಿದುಕೊಳ್ಳಬೇಕು. ಆಗ ಮಾನವನ ಜೀವನವು ತಾನು ಅಂದುಕೊಂಡ ಹಾಗೆ ಇರುತ್ತದೆ. ಸಂತೋಷವಾಗಿ ಜೀವಿಸಲಾಗುವುದೇ . ಹೊರತು ಎಷ್ಟು ಪೂಜೆಗಳನ್ನು ಮಾಡಿದರು, ಪ್ರಾರ್ಥನೆಗಳನ್ನು ಮಾಡಿದರು, ನಮಾಜುಗಳನ್ನು, ಭಜನೆಗಳನ್ನು ಮಾಡಿದರು ಪ್ರಯೋಜನವಿರದು. ಆದ್ದರಿಂದ ಮುಖ್ಯವಾಗಿ ಮಾನವನು ಆಲೋಚಿಸ ಬೇಕಿರುವುದು 'ಪಾಪ, ಪುಣ್ಯಗಳ' ಕುರಿತು ಧನ ಸಂಪಾದನೆಯ ಬಗ್ಗೆ ಅಲ್ಲ. ಧನವನ್ನು ಎಷ್ಟು ಸಂಪಾದಿಸಿದರು ದುಃಖವು ಹೋಗುವುದಿಲ್ಲ, ಪುಣ್ಯವೂ ಬರುವುದಿಲ್ಲ ಮೇಲಾಗಿ ಅಧರ್ಮವಾಗಿ ಸಂಪಾದಿಸಿದರೆ ಪಾಪವು ಸುತ್ತಿಕೊಳ್ಳುತ್ತದೆ. ಆದ್ದರಿಂದ 'ಹಣವೇ' ಪ್ರಧಾನವಲ್ಲ ಎಂದು ತಿಳಿದುಕೊಳ್ಳಬೇಕು. ಪಾಪ ಪುಣ್ಯಗಳ ಕುರಿತು ತಿಳಿದುಕೊಳ್ಳೋಣ.

ಪಾಪ ಪುಣ್ಯಗಳೆನ್ನುವುದು ತಮಗೆ ತಾವೇ ತಮ್ಮ ಜೀವನದಲ್ಲಿ ಮಾಡಿಕೊಂಡ ಕರ್ಮಗಳ ಪ್ರಕಾರ ಮಾತ್ರ ಬರುತ್ತದೆ. ಇನ್ನೊಬ್ಬರು ಕೊಡುವುದಲ್ಲ.... ಅಂದರೆ ಇನ್ನೊಬ್ಬರನ್ನು ಅರ್ಥಿಸಿದರೂ, ಪ್ರಾರ್ಥಿಸಿದರೂ, ಕೀರ್ತಿಸಿದರೂ ಪುಣ್ಯವೆನ್ನುವುದು ಬರುವುದಿಲ್ಲ, ಪಾಪವೆನ್ನುವುದು ಹೋಗುವುದಿಲ್ಲ. ಯಾರಿಗಾದರೂ ಪುಣ್ಯ ಬರಬೇಕೆಂದರೆ ಒಳ್ಳೆಯ ಕರ್ಮವನ್ನು ಮಾಡಬೇಕು. ಪಾಪವು ಬರಬಾರದೆಂದರೆ ಕೆಟ್ಟ ಕರ್ಮಗಳನ್ನು ಮಾಡಕೂಡದು. ಇದೇ ಸೃಷ್ಟಿಯೊಂದರ ಕರ್ಮ ಸಿದ್ಧಾಂತ. ಆದ್ದರಿಂದ ಮೊದಲು ಕರ್ಮ ಸಿದ್ಧಾಂತದ ಕುರಿತು ಯೋಗಿಗಳು ಏನು ಹೇಳಿದ್ದಾರೊ ತಿಳಿದು ಕೊಳ್ಳೋಣ.

(1) ಶ್ರೀ ಕೃಷ್ಣ ಭಗವಾನನು "ಯಾರು ಯಾವ ಕರ್ಮವನ್ನು ಮಾಡಿಕೊಂಡರೆ ಆ ಕರ್ಮಫಲವನ್ನೆ ಅನುಭವಿಸುತ್ತಾರೆ" ಎಂದು ಹೇಳಿದ್ದಾನೆ.

(2) ಯೇಸುಕ್ರಿಸ್ತರು "ನೀವು ಯಾವುದನ್ನು ಬಿತ್ತಿದರೆ ಅದನ್ನೆ ಪಡೆಯುವೆ " ಎಂದು ಹೇಳಿದ್ದಾರೆ.

(3) ಮಹಮ್ಮದ್ ಪ್ರವಕ್ತರು "ನಾಳೆ ಗೋಸ್ಕರ (ಬರುವ ಜನ್ಮ) ಈ ದಿನ ಬೆಳೆ ಯುವ ಹೊಲವೆ ಈ ಲೋಕ" ಎಂದು ಹೇಳಿದ್ದಾರೆ.

(4) ಬ್ರಹ್ಮರ್ಷಿ ಸುಭಾಷ್ ಪತ್ರೀಜಿ ಯವರು "ಒಳ್ಳೆಯದು ಮಾಡಿದರೆ ಒಳ್ಳೆಯದು, ಕೆಟ್ಟದ್ದನ್ನು ಮಾಡಿದರೆ ಕೆಟ್ಟದ್ದು" ಎಂದು ಹೇಳಿದ್ದಾರೆ.

(5) ಗುರುನಾನಕ್ "ಎಷ್ಟು ಮಾಡಿದರೆ ಅಷ್ಟೇ ಅನುಭವಿಸಬೇಕು. ಮತ್ತೊಬ್ಬರನ್ನು ಏನೇ ಅಂದುಕೊಂಡರೂ ಪ್ರಯೋಜನವಿಲ್ಲ" ವೆಂದು ಹೇಳಿದ್ದಾರೆ.

(6) ರಾಧಾ ಸ್ವಾಮಿ "ಯಾವ ಯಾವ ಕರ್ಮಗಳನ್ನು ಮಾಡುತ್ತೇವೋ ಅಂತಹ ಅನುಭವಗಳನ್ನು ಹೊಂದಬೇಕಾಗಿರುತ್ತದೆ".

(7) ಮಹಾಜ್ಞಾನಿ ಸಹಜೋಬಾಯಿ: "ಪಶು, ಪಕ್ಷಿ, ನರ, ಸುರ, ಅಸುರ, ಜಲಚರ, ಕೀಟಕಗಳೆಲ್ಲವೂ ಅವು ಮಾಡಿಕೊಂಡ ಕರ್ಮಗಳನ್ನು ಅನುಭವಿಸುತ್ತಿವೆ" ಎಂದರು.

(8) ತುಳಸೀದಾಸರು: "ಈ ಪ್ರಪಂಚದಲ್ಲಿ ಕರ್ಮ ಸಿದ್ಧಾಂತಕ್ಕೆ ದೊಡ್ಡಪೀಠವು" ಎಂದಿದ್ದಾರೆ.

ಇವರೆಲ್ಲರು ಕರ್ಮ ಸಿದ್ಧಾಂತದ ಬಗ್ಗೆ ಸ್ಪಷ್ಟವಾಗಿ ತಿಳಿ ಹೇಳಿದ್ದಾರೆ. ಆದ್ದರಿಂದ ಕರ್ಮವನ್ನು ಮಾಡುವಾಗ ಚೆನ್ನಾಗಿ ಆಲೋಚಿಸಬೇಕು.

ಒಂದು ಚಿಕ್ಕ ವಸ್ತುವನ್ನು ಕೊಳ್ಳುವುದಕ್ಕೆ ಎಷ್ಟೊ ಆಲೋಚಿಸುತ್ತೇವೆ, ಎಷ್ಟೊ ಅಂಗಡಿಗಳನ್ನು ತಿರುಗಿ, ಅದರ ಗುಣಮಟ್ಟ ಪರಿಶೀಲಿಸಿ ಕೊಳ್ಳುತ್ತೇವೆ. ಮತ್ತೆ ಕರ್ಮಗಳನ್ನು ಮಾಡುವಾಗ ಏಕೆ ಆಲೋಚಿಸುವುದಿಲ್ಲ? ಹಾಗೆ ಆಲೋಚಿಸದೆ ಕರ್ಮವನ್ನು ಮಾಡಿದರೆ ದುಃಖವನ್ನು ಹೊಂದುವುದಿಲ್ಲವೆ? ಆದ್ದರಿಂದ ಕರ್ಮಗಳ ಬಗ್ಗೆ ತಿಳಿದುಕೊಳ್ಳೋಣ. ಮುಖ್ಯವಾಗಿ ಪುಣ್ಯ ಕರ್ಮಗಳ ಕುರಿತು ತಿಳಿದುಕೊಳ್ಳೋಣ. ಅಸಲು ಪುಣ್ಯವೆಂದರೆ ಏನು? ಪುಣ್ಯವನ್ನು ಮಾಡಿದರೆ ಬರುವ ಫಲಿತವೇನು? ಪುಣ್ಯವನ್ನು ಹೇಗೆ ಮಾಡಬಹುದು ತೆಗೆದುಕೊಳ್ಳೋಣ.

## ಪುಣ್ಯವೆಂದರೆ?

**ಯಾವ ಕೆಲಸವನ್ನು ಮಾಡಿದರೆ ಜೀವನದಲ್ಲಿ ಭೋಗವು ಉಂಟಾಗುತ್ತದೆಯೊ ಅದನ್ನು ಪುಣ್ಯ ಎನ್ನುತ್ತಾರೆ.** ಇತರರಿಗೆ, ಇತರ ಜೀವಿಗಳಿಗೆ ಆನಂದವನ್ನು ಉಂಟು ಮಾಡುವುದು. ಆನಂದವನ್ನು ಉಂಟುಮಾಡುವ ಕೆಲಸಗಳನ್ನು ಮಾಡುವುದೆ ಪುಣ್ಯ. ಇವುಗಳನ್ನೆ ಒಳ್ಳೆಯ ಕೆಲಸಗಳು ಎನ್ನುತ್ತಾರೆ.

ಸಮಾಜಕ್ಕೆ, ಲೋಕಕ್ಕೆ ಒಳ್ಳೆಯ ಕೆಲಸಗಳನ್ನು ಮಾಡಿದರೆ ಬರುವ ಪುಣ್ಯದಿಂದ ನಮ್ಮ ಜೀವನದಲ್ಲಿ ಒಳ್ಳೆಯದು ಜರಗುತ್ತದೆ. ಅಂದರೆ ಭೋಗವಂತವಾಗಿ ಜೀವಿಸುತ್ತೇವೆ, ಆನಂದವನ್ನು ಪಡೆಯುತ್ತೇವೆ. ಮತ್ತೆ ಒಳ್ಳೆಯ ಕರ್ಮಗಳನ್ನು ಮಾಡಬೇಕೆಂದರೆ ಒಳ್ಳೆಯ

ಗುಣಗಳಿರಬೇಕು, ಒಳ್ಳೆಯ ಮನಸ್ಸಿರಬೇಕು. ಆಗ ಒಳ್ಳೆಯ ಕರ್ಮಗಳನ್ನು ಮಾಡಲಾಗುತ್ತದೆ, ಪುಣ್ಯವನ್ನು ಸಂಪಾದಿಸಲಾಗುತ್ತದೆ. ಆದ್ದರಿಂದ ಒಳ್ಳೆಯ ಗುಣಗಳನ್ನು ಸಂಪಾದಿಸುವುದಕ್ಕೆ ಪ್ರಯತ್ನಿಸಬೇಕು.

ಧ್ಯಾನವನ್ನು ಮಾಡಿದರೆ ನಮ್ಮಲ್ಲಿಯ ಗುಣಗಳು ಬದಲಾಗಿ ಒಳ್ಳೆಯ ಕೆಲಸಗಳು ಅಂದರೆ ಒಳ್ಳೆಯ ಕರ್ಮಗಳನ್ನು ಮಾಡಲಾಗುತ್ತದೆ. ಒಳ್ಳೆಯ ಭವಿಷ್ಯತ್ತು ಸಂಪಾದಿಸಿಕೊಳ್ಳಲಾಗುತ್ತದೆ. ಅಂದರೆ ಪುಣ್ಯವನ್ನು ಸಂಪಾದಿಸಿಕೊಂಡವರಾಗುತ್ತೇವೆ. ಜೀವನದಲ್ಲಿ ಭೋಗವನ್ನು ಅನುಭವಿಸುತ್ತೇವೆ.

## ಪಾಪವೆಂದರೆ?

ಪಾಪದ ಕುರಿತು ಸರಿಯಾದ ಅವಗಾ ಹನೆ ಇದ್ದರೆ ಪಾಪಗಳನ್ನು ಕ್ಷಮಿಸೆಂದು ಭಗವಂತನನ್ನು ಪ್ರಾರ್ಥಿಸುವುದಿಲ್ಲ, ಪಾಪಗಳನ್ನು ಮಾಡದೆ ಇರುತ್ತೇವೆ. ಆದ್ದರಿಂದ ಪಾಪದ ಬಗ್ಗೆ ತಿಳಿದುಕೊಳ್ಳೋಣ.

**"ಯಾವ ಕೆಲಸವನ್ನು ಮಾಡಿದರೆ ಜೀವನದಲ್ಲಿ ದುಃಖವು ಉಂಟಾಗುತ್ತದೊ ಆ ಕೆಲಸವನ್ನು ಪಾಪ ಎನ್ನುತ್ತಾರೆ"**. ಅಂದರೆ ದುಃಖವನ್ನುಂಟು ಮಾಡುವುದೆ ಪಾಪ. ಇನ್ನೂ ಆಳವಾಗಿ ಆಲೋಚಿಸಿದರೆ **"ನಮ್ಮಿಂದ ಸೃಷ್ಟಿಯಲ್ಲಿ ಯಾವ ಪ್ರಾಣಿಗಾಗಲಿ, ಯಾವ ಜೀವಿಗಾಗಲಿ, ಯಾವ ಮನುಷ್ಯನಿಗಾಗಲಿ ಸ್ವಲ್ಪವೂ ಕಷ್ಟ, ನಷ್ಟ, ಬಾಧೆ ಉಂಟಾದರೂ ಅದು ಪಾಪ..." ಲೋಕದಲ್ಲಿ ನಮ್ಮಿಂದ ಯಾರಿಗಾದರೂ ಕಷ್ಟ ಉಂಟಾದರೂ ಅದು ಪಾಪವಾಗುತ್ತದೆ. ಅಂದರೆ "ಇತರರಿಗೆ, ಇತರ ಜೀವಿಗಳಿಗೆ ಕಷ್ಟವನ್ನುಂಟು ಮಾಡುವುದೇ ಪಾಪ"**.

ಇತರರಿಗೆ ಉಂಟುಮಾಡಿದ ಕಷ್ಟವೆ ಪಾಪವಾಗಿ ಅದರ ಫಲಿತವು ನಾವು ಕಷ್ಟಗಳ ರೂಪದಲ್ಲಿ ಅನುಭವಿಸುತ್ತಿದ್ದೇವೆ. ಇದೆ ಸೃಷ್ಟಿಯ ಧರ್ಮ. ಆದ್ದರಿಂದ ಪಾಪ ಮಾಡಿದವರು ದುಃಖಗಳ ಪಾಲಾಗುತ್ತಿದ್ದಾರೆ. ಕಾರಣ ಎಲ್ಲಾ ಭಗವತ್ ಸ್ವರೂಪರೇ , ಸೃಷ್ಟಿಯಲ್ಲಿ ಭಗವಂತನದಲ್ಲದ್ದು ಯಾವುದೂ ಇಲ್ಲ, ಮೊದಲು ಇದನ್ನು ತಿಳಿದುಕೊಳ್ಳಬೇಕು. ಇರುವೆಗೆ ಹಾನಿ ಜರುಗಿದರೂ ಅದು ಭಗವಂತನಿಗೆ ಕಷ್ಟವನ್ನುಂಟು ಮಾಡಿದ ಹಾಗೆ ಎಂದು ತಿಳಿದುಕೊಳ್ಳಬೇಕು. ಭಗವಂತನಿಗೆ ಕಷ್ಟವನ್ನುಂಟು ಮಾಡಿದ್ದು ಪಾಪವಲ್ಲದೆ ಏನಾಗುತ್ತದೆ? ಆದ್ದರಿಂದ ಅದರ ಫಲಿತವನ್ನು ತಪ್ಪದೆ ಅನುಭವಿಸಲೇಬೇಕು.

ಲೋಕದಲ್ಲಿ ಭಗವಂತನ ಅನುಗ್ರಹಕ್ಕೋಸ್ಕರ, ಆತನನ್ನು ಆನಂದವಾಗಿ ಇಡುವುದಕ್ಕೆ ವಿಗ್ರಹಗಳಿಗೆ ಶೋಡಶೋಪಚಾರ ಪೂಜೆಗಳನ್ನು ಮಾಡುತ್ತಿದ್ದಾರೆ. 16 ರೀತಿಯ

ಉಪಚಾರಗಳನ್ನು ಮಾಡಿ ವಿಗ್ರಹಗಳನ್ನು ಆನಂದವಾಗಿರುಸುತ್ತಿದ್ದಾರೆ. ಫೋಟೋಗಳನ್ನು ಪ್ರಾರ್ಥಿಸುತ್ತಿದ್ದಾರೆ, ಭಜನೆಗಳನ್ನು, ಸ್ತೋತ್ರಗಳನ್ನು ಮಾಡುತ್ತಿದ್ದಾರೆ. ಇವೆಲ್ಲವೂ ಭಗವಂತನನ್ನು ಆನಂದವಾಗಿ ಇಡುವುದಕ್ಕೆ ಮಾಡುತ್ತಿರುವುದು ಅಲ್ಲವೆ? ಆದರೆ ಇಲ್ಲಿ ಆಲೋಚಿಸ ಬೇಕಾಗಿರುವುದು ಮಾನವರು ವಿಗ್ರಹಗಳನ್ನು, ಬೊಂಬೆಗಳನ್ನು ಆನಂದ ಪಡಿಸುತ್ತಿದ್ದಾರೆ. ಆದರೆ ಸಾಕ್ಷಾತ್ ಎಲ್ಲಾ ಜೀವಿಗಳ ರೂಪದಲ್ಲಿರುವ ಆ ಭಗವಂತನನ್ನು ಕಷ್ಟಪಡಿಸುತ್ತಿದ್ದಾರೆ. ಆಲೋಚಿಸಿ ಭಗವಂತನಿಗೆ ಕಷ್ಟವನ್ನುಂಟು ಮಾಡಿದರೆ ಆತನ ಅನುಗ್ರಹವು ಹೇಗೆ ಉಂಟಾಗುತ್ತದೆ? ಆತನಿಗೆ ಕಷ್ಟವನ್ನುಂಟು ಮಾಡಿ ಹೇಗೆ ಲಾಭವನ್ನು ಹೊಂದುತ್ತೇವೆ? ಹೇಗೆ ಆನಂದವಾಗಿ ಜೀವಿಸುತ್ತೇವೆ? ಆದ್ದರಿಂದ ಪಾಪವೆಂದರೆ ಭಗವಂತನಿಗೆ ಉಂಟು ಮಾಡುವ ಕಷ್ಟ ಹೊರತು ಇತರರಿಗೆ, ಇತರ ಜೀವಿಗಳಿಗೆ ಅಲ್ಲವೆಂದು ಅರ್ಥ ಮಾಡಿಕೊಳ್ಳಬೇಕು ಇದನ್ನು ಆಲೋಚಿಸಿದಾಗ ಪಾಪಗಳನ್ನೇ ಮಾಡುವುದಿಲ್ಲ.

ಆದರೆ ಇದೆಲ್ಲವೂ ಆಲೋಚಿಸದೆ ಭಗವಂತನ ಕುರಿತು ತಿಳಿದುಕೊಳ್ಳದೆ ಪಾಪಗಳನ್ನು ಮಾಡುತ್ತಾ ಕಷ್ಟಗಳ ಪಾಲಾಗುತ್ತಿದ್ದಾರೆ. ಕಷ್ಟಗಳನ್ನು ಅನುಭವಿಸಲಾರದೆ, ಕಷ್ಟಗಳು ಏತಕ್ಕಾಗಿ ಬರುತ್ತಿವೆ ಎಂದು ಗ್ರಹಿಸಲಾರದೆ, ಕಷ್ಟಗಳಿಂದ ಹೊರಬೀಳುವುದಕ್ಕೆ ಬಗೆಬಗೆಯ ಮಾರ್ಗಗಳನ್ನು ಅನುಸರಿಸುತ್ತಿದ್ದಾರೆ, ಬಗೆ ಬಗೆಯ ಗುರುಗಳನ್ನು ಆಶ್ರಯಿಸುತ್ತಿದ್ದಾರೆ, ಬಗೆಬಗೆಯ ಸ್ವಾಮೀಜಿಗಳನ್ನು, ಬಾಬಾಗಳನ್ನು ಆಶ್ರಯಿಸುತ್ತಿದ್ದಾರೆ. ಆದರೆ ಎಷ್ಟು ಮಾಡಿದರೂ ಕಷ್ಟಗಳನ್ನು ಹಿಮೆಟ್ಟಿಸಲಾರದೆ ಹೋಗುತ್ತಿದ್ದಾರೆ.

ಅಷ್ಟೇ ಅಲ್ಲದೆ ನಿಜವಾದ ಕಾರಣ ಅರ್ಥವಾಗದೆ ಬಗೆ ಬಗೆಯ ಮೂಢನಂಬಿಕೆಗಳ ಮೇಲೆ ಆಧಾರ ಪಡುತ್ತಿದ್ದಾರೆ. ಹಾಗೆ ತಾಯಿತಗಳು, ರುದ್ರಾಕ್ಷಿಗಳು, ಉಂಗುರಗಳು, ಮಂತ್ರದ ಬಳೆಗಳು, ಹಾರಗಳು, ಹಗ್ಗಗಳು, ನಾಮಗಳು, ವಿಭೂತಿಗಳು, ರಕ್ಷಾ ಕವಚಗಳಂತಹವು ಗಳನ್ನು ಧರಿಸುತ್ತಿದ್ದಾರೆ. ಆದರೆ ಫಲಿತ ಕಾಣಿಸುತ್ತಿಲ್ಲ, ಕಾರಣ ಅವರು ಮಾಡಿದ ಪಾಪ ಕರ್ಮಗಳೆ. ಆದ್ದರಿಂದ ಆಲೋಚಿಸಿ, ಇವೆಲ್ಲವೂ ಕಷ್ಟಗಳಿಗೆ, ಸಮಸ್ಯೆಗಳಿಗೆ ಪರಿಷ್ಕಾರ ಮಾರ್ಗಗಳಲ್ಲ. ಕಷ್ಟಗಳು ಬರಕೂಡದೆಂದರೆ ಕೆಟ್ಟ ಕೆಲಸಗಳನ್ನು ಮಾಡಬಾರದು. ಅಂದರೆ ಪಾಪಕರ್ಮಗಳನ್ನು ಮಾಡದಿರುವುದೇ ಪರಿಷ್ಕಾರವೆಂದು ತಿಳಿದುಕೊಳ್ಳಬೇಕು.

ಇನ್ನೂ ಆಲೋಚಿಸಿದರೆ ಕಷ್ಟಗಳು ಬಂದವರು ವಾಸ್ತು ದೋಷವೆನ್ನುತ್ತಾರೆ. ವಾಸ್ತು ಸರಿ ಮಾಡುತ್ತಾರೆ, ಜಾತಕ ದೋಷವೆನ್ನುತ್ತಾರೆ. ಜಾತಕ ನೋಡುವವರನ್ನು ಸಂಪರ್ಕಿಸುತ್ತಾರೆ. ಸಂಖ್ಯಾ ದೋಷವೆನ್ನುತ್ತಾರೆ, ನಾಮದಲ್ಲಿ ದೋಷ ಎನ್ನುತ್ತಾರೆ, ನೆಗೆಟಿವ್ ಫೋರ್ಸ್ ಎನ್ನುತ್ತಾರೆ. ಹೀಗೆ ಬಗೆಬಗೆಯಾಗಿ ಆಲೋಚಿಸುತ್ತಾರೆ ಆದರೆ ಅಸಲು ಕಾರಣ ಆಲೋಚಿಸುವುದಿಲ್ಲ. ಎಲ್ಲವೂ ತಾವು ಮಾಡಿದ ಕೆಲಸದಿಂದ ಬಂದಿದೆ ಎಂದು

ತಿಳಿದುಕೊಳ್ಳುವುದಿಲ್ಲ. ಕೆಟ್ಟ ಕೆಲಸಗಳನ್ನು ಮಾಡದೆ ಇರುವುದಿಲ್ಲ, ಪಾಪಗಳನ್ನು ಬಿಡುವುದಿಲ್ಲ. ಆದ್ದರಿಂದ ಈ ಪಾಪಗಳನ್ನು ಏಕೆ ಮಾಡುತ್ತಿದ್ದೀರಿ? ಅದಕ್ಕೆ ಕಾರಣವನ್ನು ಆಲೋಚಿಸೋಣ.

## ಕೆಟ್ಟದ್ದು ಮಾಡುವುದಕ್ಕೆ ಕಾರಣ

ಆಲೋಚಿಸಿದರೆ ಮಾನವನು ಕೆಟ್ಟದ್ದನ್ನು ಮಾಡುವುದಕ್ಕೆ, ಒಳ್ಳೆಯದನ್ನು ಮಾಡದಿರುವುದಕ್ಕೆ ಕಾರಣ, ಒಳ್ಳೆಯದು ಕೆಟ್ಟದ್ದು ತಿಳಿಯದೆ ಅಲ್ಲ.... ಮಾನವನಿಗೆ ಎಲ್ಲಾ ತಿಳಿದಿದೆ. ಒಳ್ಳೆಯದು ತಿಳಿದಿದೆ, ಕೆಟ್ಟದ್ದು ತಿಳಿದಿದೆ, ತಾನು ಮಾಡುತ್ತಿರುವುದು ಕೆಟ್ಟದ್ದು ಎಂದು ತಿಳಿದಿದೆ. ಕೆಟ್ಟದ್ದನ್ನು ಮಾಡಬಾರದೆಂದೂ ತಿಳಿದಿದೆ. ಮತ್ತೆ ಕೆಟ್ಟದ್ದನ್ನು ಏಕೆ ಮಾಡುತ್ತಿದ್ದಾನೆ? ಒಳ್ಳೆಯದನ್ನು ಏಕೆ ಮಾಡುತ್ತಿಲ್ಲ?

ಕಾರಣ **"ಒಳ್ಳೆಯದು ಮಾಡುವುದು ಕಷ್ಟ, ಕೆಟ್ಟದ್ದು ಮಾಡುವುದು ಸುಲಭ". ಆದ್ದರಿಂದ ಮಾನವನು "ಕಷ್ಟವಾದ ಒಳ್ಳೆಯದನ್ನು ಮಾಡುವುದು ಬಿಟ್ಟು, ಸುಲಭವಾದ ಕೆಟ್ಟದ್ದನ್ನೆ ಮಾಡುತ್ತಿದ್ದಾನೆ"** ಆದ್ದರಿಂದ ಲೋಕದಲ್ಲಿ ಒಳ್ಳೆಯದಕ್ಕಿಂತ ಕೆಟ್ಟದ್ದೆ ಹೆಚ್ಚಾಗಿ ಕಾಣಿಸುತ್ತಿದೆ. ಆದರೆ ಇಲ್ಲಿ ಆಲೋಚಿಸಬೇಕಾದದ್ದು ಏನೆಂದರೆ "ಕಷ್ಟವೆಂದು ಒಳ್ಳೆಯದು ಮಾಡುವುದನ್ನು ಬಿಟ್ಟರೆ ಜೀವನದಲ್ಲಿ ಲಾಭವನ್ನು ಹೊಂದುವುದಿಲ್ಲ, ನಷ್ಟವನ್ನು ಹೊಂದುತ್ತಾರೆ. ಹಾಗೆಯೆ ಸುಲಭವೆಂದು ಕೆಟ್ಟದ್ದು ಮಾಡಿದರೆ ತಾತ್ಕಾಲಿಕವಾದ ಲಾಭಗಳು ಉಂಟಾದ ಹಾಗೆ ಕಾಣಿಸಿದರು ಕಡೆಗೆ ಜೀವನದಲ್ಲಿ ಕಷ್ಟಗಳ ಪಾಲಾಗುತ್ತಾರೆ, ದುಃಖವನ್ನು ಹೊಂದುತ್ತಾರೆ".

## ಜ್ಞಾನವೆಂದರೆ?

ಮಾನವರಿಗೆ ಪಾಪ, ಪುಣ್ಯಗಳ ಕುರಿತು, ಒಳ್ಳೆಯದು, ಕೆಟ್ಟದ್ದರ ಕುರಿತು ಸರಿಯಾದ ಅವಗಾಹನೆ ಇಲ್ಲದಿರುವುದಕ್ಕೆ ಮುಖ್ಯ ಕಾರಣ ಮಾನವರಿಗೆ **'ಜ್ಞಾನ'**ವಿಲ್ಲದಿರುವುದು, **"ಜ್ಞಾನ"** ದ ಹಿರಿಮೆ ತಿಳಿಯದಿರುವುದು. ಅಷ್ಟೇ ಅಲ್ಲದೆ ಯಾವಾಗಲೂ ಹಣವೇ ದೊಡ್ಡದೆಂದು ಭಾವಿಸುವುದರಿಂದ, ಜ್ಞಾನದ ಶ್ರೇಷ್ಠತೆಯು ತಿಳಿಯದೆ ಹೋಗುತ್ತಿದ್ದಾರೆ. ಜ್ಞಾನವನ್ನು ಸಂಪಾದಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿಲ್ಲ, ಅಜ್ಞಾನದಲ್ಲಿ ಜೀವಿಸುತ್ತಿದ್ದಾರೆ, ತಿಳಿದು ಕೂಡ ಮಾಡಬಾರದ ಕೆಲಸವನ್ನು ಮಾಡುತ್ತಿದ್ದಾರೆ, ನಷ್ಟಕ್ಕೆ ಗುರಿಯಾಗುತ್ತಿದ್ದಾರೆ, ಕಷ್ಟಗಳ ಪಾಲಾಗುತ್ತಿದ್ದಾರೆ.

ಆದ್ದರಿಂದ ಮೊದಲು ಜ್ಞಾನವೆಂದರೆ ಏನೆಂದು ತಿಳಿದುಕೊಳ್ಳೋಣ. ಜ್ಞಾನವು ಎರಡು ವಿಧಗಳು.

**(1) ಸತ್ಯ ಜ್ಞಾನ (2) ಅಸತ್ಯಜ್ಞಾನ**

ಭಗವಂತನಿಗೆ ಸಂಬಂಧಿಸಿದ ಜ್ಞಾನವನ್ನು ಸತ್ಯಜ್ಞಾನ ಎನ್ನುತ್ತಾರೆ. ಭಗವಂತನ ಸೃಷ್ಟಿಗೆ ಸಂಬಂಧಿಸಿದ ಜ್ಞಾನವನ್ನು ಅಸತ್ಯ ಜ್ಞಾನವೆನ್ನುತ್ತಾರೆ. ಭಗವಂತನನ್ನು "ಪುರುಷ" ಅಥವಾ "ಆತ್ಮ" ಎಂದು ಕೂಡ ಹೇಳುತ್ತಾರೆ. ಸೃಷ್ಟಿಯನ್ನು "ಪ್ರಕೃತಿ" ಅಥವಾ 'ಅನಾತ್ಮ' ಎಂದು ಕೂಡ ಹೇಳುತ್ತಾರೆ. ಒಂದು ರೀತಿಯಾಗಿ ಈ ಪುರುಷ, ಪ್ರಕೃತಿಗಳ ಸಮ್ಮಿಲನ. ಆದ್ದರಿಂದ ಭಗವಂತನ ಕುರಿತು, ಭಗವಂತನ ಸೃಷ್ಟಿಯ ಕುರಿತು, ಸೃಷ್ಟಿಯಲ್ಲಿನ ಜೀವಿಗಳ ಕುರಿತು, ಸೃಷ್ಟಿ ನಿಯಮಗಳು ಅಂದರೆ ಧರ್ಮಗಳ ಕುರಿತು ತಿಳಿದುಕೊಳ್ಳುವುದು ಜ್ಞಾನ. ಇವುಗಳ ಬಗ್ಗೆ ಎಷ್ಟು ಹೆಚ್ಚಾಗಿ ತಿಳಿದುಕೊಂಡರೆ ಅವರನ್ನು ಅಷ್ಟು ಜ್ಞಾನಿಗಳೆನ್ನುತ್ತಾರೆ. ಇವುಗಳ ಬಗ್ಗೆ ತಿಳಿದುಕೊಳ್ಳದಿದ್ದರೆ ಅವರನ್ನು "ಅಜ್ಞಾನಿ" ಎನ್ನುತ್ತಾರೆ.

ಈ ಜ್ಞಾನವಿರುವವರು ಸೃಷ್ಟಿಗೆ, ಸೃಷ್ಟಿ ಧರ್ಮಗಳಿಗೆ ಅನುಗುಣವಾಗಿ ಪ್ರವರ್ತಿಸುತ್ತಾರೆ, ಆನಂದವಾಗಿ ಜೀವಿಸುತ್ತಾರೆ. ಈ ಜ್ಞಾನವಿಲ್ಲದವರು ಸೃಷ್ಟಿಗೆ, ಸೃಷ್ಟಿಯ ಧರ್ಮಗಳಿಗೆ ವಿರುದ್ಧವಾಗಿ ಪ್ರವರ್ತಿಸುತ್ತಾರೆ, ಕಷ್ಟಗಳ ಪಾಲಾಗುತ್ತಾರೆ, ದುಃಖವನ್ನು ಹೊಂದುತ್ತಾರೆ. ಅಂದರೆ ಮಾನವನ ದುಃಖಕ್ಕೆ ಕಾರಣ ಜ್ಞಾನವಿಲ್ಲದೆ ಇರುವುದು.

'ಜ್ಞಾನವನ್ನು' ಬೆಳಕಿನ ಜೊತೆ ಹೋಲಿಸುತ್ತಾರೆ, ಅಜ್ಞಾನವನ್ನು ಕತ್ತಲಿನ ಜೊತೆ ಹೋಲಿಸುತ್ತಾರೆ. ಕತ್ತಲೆಯು ಯಾರಿಗಾದರೂ ಕಷ್ಟವೇ, ಹಾಗೆ ಅಜ್ಞಾನವೂ ಕಷ್ಟವೇ. ಹಾಗೆಯೇ ಬೆಳಕು ಎಷ್ಟು ಸುಖವೋ , ಜ್ಞಾನವು ಅಷ್ಟು ಸುಖ. ಒಂದು ರೀತಿಯಾಗಿ ಜ್ಞಾನವಿಲ್ಲದವನು ಕಣ್ಣಿದ್ದರೂ ಕುರುಡನು ಅಂದುಕೊಳ್ಳಬಹುದು. ಏಕೆಂದರೆ ಕತ್ತಲಲ್ಲಿ ಕಣ್ಣಿದ್ದರೂ ಕೂಡ ಕುರುಡನ ಹಾಗೆ ಪ್ರವರ್ತಿಸುತ್ತಾನೆ.

ಕುರುಡನು ಪ್ರಯಾಣಿಸಲಾರನು ಎಲ್ಲರ ಸಹಾಯವನ್ನು ಬೇಡುತ್ತಾನೆ. ಹಾಗೆಯೆ ಜ್ಞಾನವಿಲ್ಲದವನು ಜೀವಿಸಲಾರನು, ಕಷ್ಟಗಳ ಪಾಲಾಗುತ್ತಾನೆ. ಅವರ ಸಹಾಯ, ಇವರ ಸಹಾಯವನ್ನು ಕೇಳಿ ಕೊಳ್ಳುತ್ತಾನೆ. ದಾರಿ ತೋರಿಸಿ ಎಂದು, ಕಷ್ಟಗಳಿಂದ ಹೊರ ಬೀಳುವ ಮಾರ್ಗವನ್ನು ತೋರಿಸಿ ಎಂದು ಗುರುಗಳನ್ನು, ಪಂಡಿತರನ್ನು, ದೇವರುಗಳನ್ನು ಬೇಡಿಕೊಳ್ಳುತ್ತಾನೆ. ಆದ್ದರಿಂದ ಮಾನವರಿಗೆ ಜ್ಞಾನವು ತುಂಬಾ ಅವಶ್ಯಕವಾಗಿದೆ. ಯಾರಾದರೂ ಆಗಲಿ ಮೊದಲು ಜ್ಞಾನದ ಬಗ್ಗೆ ಆಲೋಚಿಸಬೇಕು. ಮಾನವನು ಭೂಮಿಯ ಮೇಲೆ ಬಂದಿರುವುದು ಜ್ಞಾನವನ್ನು ಸಂಪಾದಿಸಿಕೊಳ್ಳುವುದಕ್ಕಾಗಿ, ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ.

ಆದರೆ ಪ್ರಸ್ತುತ.. ಲೋಕದಲ್ಲಿ ಎಲ್ಲರೂ ಹಣಕ್ಕೆ ಪ್ರಾಮುಖ್ಯತೆ ಕೊಡುತ್ತಿದ್ದಾರೆ.ಹಣ ದೊಡ್ಡದೆಂದು ಹೇಳುತ್ತಿದ್ದಾರೆ. ಆದರೆ ಯಾರೂ ಜ್ಞಾನದ ಕುರಿತು ಆಲೋಚಿಸುತ್ತಿಲ್ಲ. ಜ್ಞಾನದ ಶ್ರೇಷ್ಠತೆಯನ್ನು ತಿಳಿದುಕೊಳ್ಳುತ್ತಿಲ್ಲ. ಜ್ಞಾನವನ್ನು ಸಂಪಾದಿಸಿಕೊಳ್ಳುವುದಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಿಲ್ಲ. ಆದ್ದರಿಂದ ಮೊದಲು ಧನಕ್ಕೆ, ಜ್ಞಾನಕ್ಕಿರುವ ಭೇದವನ್ನು

ತಿಳಿದುಕೊಳ್ಳೋಣ. ಧನವಿದ್ದವರಿಗೆ, ಜ್ಞಾನವಿದ್ದವರಿಗೆ ಇರುವ ಬೇಧವೇನೆಂದು ತಿಳಿದುಕೊಳ್ಳೋಣ.

| | | |
|---|---|---|
| ಧನವು ಅಶಾಶ್ವತ | – | ಜ್ಞಾನವು ಶಾಶ್ವತ. |
| ಧನವನ್ನು ಕದಿಯಲಾಗುತ್ತದೆ | – | ಜ್ಞಾನವನ್ನು ಕದಿಯಲಾಗುವುದಿಲ್ಲ. |
| ಧನವನ್ನು ಹೆಚ್ಚಿಸಿಕೊಂಡರೆ ಕರಗುತ್ತದೆ | – | ಜ್ಞಾನವನ್ನು ಹೆಚ್ಚಿಸಿಕೊಂಡರೆ ಬೆಳೆಯುತ್ತದೆ. |
| ಧನವು ಜೊತೆಯಲ್ಲಿ ಬರುವುದಿಲ್ಲ | – | ಜ್ಞಾನವು ಎಷ್ಟು ಜನ್ಮಗಳನ್ನೆತ್ತಿದರು ಜೊತೆಯಲ್ಲಿ ಬರುತ್ತದೆ. |
| ಧನವು ದುಃಖವನ್ನು ಹೆಚ್ಚಿಸುತ್ತದೆ | – | ಆದರೆ ಜ್ಞಾನವು ದುಃಖವನ್ನು ಬರಿದಾಗಿಸುತ್ತದೆ. |
| ಧನವಿರುವವರಿಗೆ ಮುಕ್ತಿಯು ಬರುವುದಿಲ್ಲ | – | ಜ್ಞಾನವಿರುವವರಿಗೆ ಮುಕ್ತಿಯು ಲಭಿಸುತ್ತದೆ. |

ಮೇಲಿನ ವಿಷಯಗಳನ್ನು ನೋಡಿದರೆ ಜ್ಞಾನವೇ ಶ್ರೇಷ್ಠವೆಂದು ತಿಳಿಯುತ್ತದೆ. ಆದ್ದರಿಂದ **"ಹಣದಲ್ಲಿ ಬಡವರಾದದ್ದಕ್ಕೆ ದುಃಖಿಸಬೇಡಿ. ಜ್ಞಾನದಲ್ಲಿ ಬಡವರಾದರೆ ದುಃಖಿಸಿ"** ಜ್ಞಾನವು ಬೆಳೆಯ ಬೇಕೆಂದರೂ, ನಮ್ಮಲ್ಲಿ ಜ್ಞಾನಜ್ಯೋತಿಯು ಬೆಳಗಬೇಕೆಂದರೂ ಒಂದೆ ಮಾರ್ಗ ಅದೇ ಧ್ಯಾನ ಮಾರ್ಗ. "ಧ್ಯಾನವನ್ನು ಮಾಡಿ– ಜ್ಞಾನ ಜ್ಯೋತಿಯನ್ನು ಬೆಳಗಿಸಿಕೊಳ್ಳಿ" ಆದ್ದರಿಂದಲೆ "ತಮಸೋಮ ಜ್ಯೋತಿರ್ಗಮಯ" ಎಂದು ಹೇಳುತ್ತಾರೆ. ಅಷ್ಟೇ ಅಲ್ಲದೆ ಯೋಗಿಗಳೆಲ್ಲರೂ ಜ್ಞಾನಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟರು, ಜ್ಞಾನವಂತರಾದರು, ಲೋಕದಲ್ಲಿ ಶ್ರೇಷ್ಠರೆಂದು ಗುರ್ತಿಸಲ್ಪಟ್ಟರು.

## ಅಜ್ಞಾನವೆಂದರೆ?

ಇಲ್ಲಿಯವರೆಗೆ ಜ್ಞಾನವು ಶ್ರೇಷ್ಟವೆಂದು ತಿಳಿದುಕೊಂಡೆವು. ಆದ್ದರಿಂದ ಜ್ಞಾನವಿಲ್ಲದಿದ್ದರೆ ಯಾರಾದರೂ ಅಜ್ಞಾನದಲ್ಲಿ ಇರುತ್ತಾರೆ, ನಷ್ಟ ಹೊಂದುತ್ತಾರೆ, ದುಃಖ ಪಡುತ್ತಾರೆ. ಆದ್ದರಿಂದ ಜ್ಞಾನವೆಂದರೆ ಏನು? ನಾವು ಅಜ್ಞಾನದಲ್ಲಿ ಇದ್ದೇವೆಯೇ ? ಜ್ಞಾನವಂತರಾಗಿದ್ದೇವೆಯೇ? ಅಜ್ಞಾನದಲ್ಲಿ ಇರುವವರ ಪ್ರವರ್ತನೆ ಹೇಗೆ ಇರುತ್ತದೆ ಎಂದು ತಿಳಿದುಕೊಳ್ಳೋಣ.

**"ತಿಳಿದು ಕೂಡ ತಿಳಿಯದೆ ಇರುವವರ ಹಾಗೆ ಪ್ರವರ್ತಿಸುವುದು ಅಜ್ಞಾನ**". ಪ್ರಸ್ತುತ ನಾವು ಹಾಗೆಯೇ ಪ್ರವರ್ತಿಸುತ್ತಿದ್ದೇವೆ. ಈ ಅಜ್ಞಾನದ ಕಾರಣವಾಗಿ ಎಲ್ಲಾ ತಿಳಿದೂ ನಾವು ತಪ್ಪುಗಳನ್ನು, ಪಾಪಗಳನ್ನು ಮಾಡುತ್ತಿದ್ದೇವೆ. ಜೀವನವನ್ನು ದುಃಖಮಯವಾಗಿ ಮಾಡಿಕೊಳ್ಳುತ್ತಿದ್ದೇವೆ. ಅಜ್ಞಾನದಿಂದ ಜೀವಿಸಿದರೆ ಯಾರೂ ಸುಖ ಶಾಂತಿಗಳನ್ನು

ಹೊಂದುವುದಿಲ್ಲ, ಇತರರಿಗೆ ಒಳ್ಳೆಯದನ್ನು ಮಾಡುವುದಿಲ್ಲ, ಕೇಡನ್ನು ಬಯಸುತ್ತಾರೆ. ಅಜ್ಞಾನದಲ್ಲಿ ಜೀವಿಸುವಷ್ಟು ಕಾಲವು ಜನನ ಮರಣ ಚಕ್ರದಲ್ಲಿ ಸಿಲುಕಿಕೊಂಡು ಕಷ್ಟಗಳನ್ನು , ದುಃಖ ಸಮಸ್ಯೆಗಳನ್ನು, ರೋಗಗಳನ್ನು, ಅನುಭವಿಸುತ್ತಾ ಇರುತ್ತೇವೆ. ಆದ್ದರಿಂದ ಮೊದಲು ನಾವು ಅಜ್ಞಾನದಿಂದ ಪ್ರವರ್ತಿಸುತ್ತಿರುವ ಕೆಲವನ್ನು ತಿಳಿದುಕೊಳ್ಳೋಣ.

1. ಭೂಮಿಯ ಮೇಲೆ ಕಣ್ಣಿಗೆ ಕಾಣಿಸುವ ಎಲ್ಲವೂ ನಶಿಸಿ ಹೋಗುವುದೇ ಎಂದು ತಿಳಿದಿದೆ. ಆದರೆ ಅವುಗಳನ್ನೆ ಕೋರಿಕೊಳ್ಳುವುದು, ಅವುಗಳಿಗೋಸ್ಕರ ತಾಪತ್ರಯ ಪಡುವುದು, ಅವುಗಳಿ ಗೋಸ್ಕರ ಪ್ರಯತ್ನಿಸುವುದು.
2. ಭೌತಿಕ ಸಂಪತ್ತು ಶಾಶ್ವತವಲ್ಲವೆಂದು ತಿಳಿದಿದೆ, ಆದರೆ ಅದಕ್ಕಾಗಿಯೇ ಜೀವನವೆಲ್ಲಾ ವ್ಯರ್ಥ ಮಾಡಿಕೊಳ್ಳುವುದು.
3. ಯಾವುದು ಇರುವುದಿಲ್ಲ, ಯಾವುದು ಶಾಶ್ವತ ವಲ್ಲವೆಂದು ತಿಳಿದು ಕೂಡ ತಮಗಿರುವುದನ್ನೆಲ್ಲ ನೋಡಿ ಹೆಮ್ಮೆ ಪಡುತ್ತಿರುವುದು.
4. ಎಷ್ಟು ಸಂಪಾದಿಸಿದರೂ, ಸುಖಗಳಿದ್ದರೂ, ಜೀವನದಲ್ಲಿ ಶಾಂತಿ, ಆನಂದ ಇಲ್ಲವೆಂದು ತಿಳಿದಿದೆ, ಆದರೆ ಸಂಪತ್ತು, ಸುಖಗಳನ್ನು ಕೋರಿಕೊಳ್ಳುವುದು, ಅವುಗಳಿಗೆ ಪ್ರಾಮುಖ್ಯತೆಯನ್ನು ಕೊಡುವುದು, ಅವುಗಳಿಗಾಗಿ ಪ್ರಯತ್ನಿಸುವುದು.
5. ಯುಗಯುಗ– ಗಳಿಂದ ಎಷ್ಟೊ ಜನ ಮಹಾರಾಜರು, ಐಶ್ವರ್ಯವಂತರು... ಅವರ ರಾಜ್ಯಗಳನ್ನು, ಐಶ್ವರ್ಯಗಳನ್ನು ಕಳೆದುಕೊಂಡರೆಂದು ತಿಳಿದಿದೆ, ಆದರೆ ಅವುಗಳನ್ನೆ ಕೋರಿಕೊಳ್ಳುತ್ತಾ ಅವುಗಳಿಗಾಗಿ ಜೀವನವನ್ನು ವ್ಯರ್ಥ ಮಾಡಿಕೊಳ್ಳುವುದು.
6. ಹೆಂಡತಿ, ಮಕ್ಕಳು ಇವರಾರು ಶಾಶ್ವತವಲ್ಲ, ಜೊತೆಯಲ್ಲಿ ಬರುವುದಿಲ್ಲ, ಈ ದೇಹವು ಇರುವಷ್ಟರವರೆಗೆ ಎಂದು ತಿಳಿದಿದೆ. ಆದರೆ ಅವರು ಶಾಶ್ವತವೆನ್ನುವ ಹಾಗೆ ಪ್ರವರ್ತಿಸುವುದು.
7. ಮರಣಿಸುತ್ತೇವೆ ಎಂದು ತಿಳಿದೂ ಮರಣವು ಇಲ್ಲವೆನ್ನುವ ಹಾಗೆ ಪ್ರವರ್ತಿಸುವುದು.
8. ಮೊದಲಿನಿಂದಲೂ ಎಷ್ಟೋ ಜನ ಮರಣಿಸುತ್ತಿರುವು ದನ್ನು ನೋಡುತ್ತಿದ್ದೇವೆ, ಯಾರು ಶಾಶ್ವತವಲ್ಲ ವೆಂದು ತಿಳಿದಿದೆ. ಆದರೆ ಶಾಶ್ವತವೆನ್ನುವ ಹಾಗೆ ಶವದ ಹತ್ತಿರ ಕುಳಿತುಕೊಂಡು ರೋಧಿಸುವುದು.
9. ಹೆಸರು ಪ್ರಖ್ಯಾತಿಗಳು , ಕೀರ್ತಿ ಪ್ರತಿಷ್ಠೆಗಳು, ಪದವಿ ಗಳು ಯಾವುವು ತಮ್ಮ ಮುಂದಿನವರಿಗೂ, ಯಾರಿಗೂ ಶಾಶ್ವತವಾಗಿ ಇಲ್ಲವೆಂದು ತಿಳಿದಿದೆ. ಆದರೂ ಅವುಗಳಿಗಾಗಿ ಆಲೋಚಿಸುವುದು, ಪ್ರಯತ್ನಿಸುವುದು.

10. ಯಾವುದು ಶಾಶ್ವತವಲ್ಲ ಎಂದರೂ, ಎಲ್ಲದರ ಮೇಲೂ ಮಮಕಾರವನ್ನು ಹೆಚ್ಚಿಸಿಕೊಳ್ಳುವುದು.
11. ಕೋರಿಕೆಗಳು ದುಃಖಕ್ಕೆ ಮೂಲವೆನ್ನುತ್ತಾ, ಮತ್ತೆ ಎಲ್ಲವನ್ನೂ ಕೋರಿಕೊಳ್ಳುತ್ತಾ, ಎಲ್ಲವನ್ನು ಆಸೆಪಡುತ್ತಾ ಇರುವುದು.
12. ಕಾಣದಿರುವ ಜೀವ ಇದೆ ಎಂದು ತಿಳಿದು ತಿಥಿಯನ್ನು, ಶ್ರಾದ್ಧಗಳನ್ನು ಇಡುತ್ತಾ, ಕಾಣಿಸುವ ಜೀವನದ ಕುರಿತು ಆಲೋಚಿಸುವುದು. ಅದಕ್ಕೆ ಪ್ರಾಮುಖ್ಯತೆಯನ್ನು ಕೊಡುವುದು, ಕಾಣದಿರುವ ಜೀವನದ ಬಗ್ಗೆ ಆಲೋಚಿಸದೆ ಇರುವುದು.
13. ಕಷ್ಟಗಳಿಗೆ ಕಾರಣ ಪಾಪ ಕರ್ಮಗಳೆ ಎಂದು ತಿಳಿದಿದ್ದರೂ ಮತ್ತೆ ತಪ್ಪನ್ನು ಮಾಡುವುದು.
14. ಮಾನವರೆಲ್ಲರೂ ಹುಟ್ಟಿದಾಗ ಒಂದೆ ರೀತಿಯಾಗಿ ಹುಟ್ಟಿ, ಮರಣಿಸಿದಾಗ ಒಂದೆ ರೀತಿಯಾಗಿ ಮರಣ ಸುವುದನ್ನು ನೋಡುತ್ತಾ, ಬೇರೆ ಬೇರೆ ಕುಲಗಳು, ಮತಗಳು ಅನ್ನುವ ಹಾಗೆ ಜೀವಿಸುವುದು, ಪ್ರವರ್ತಿಸುವುದು.
15. ಭಯಪಡ ಕೂಡದೆಂದು ತಿಳಿದು, ಎಲ್ಲದ್ದಕ್ಕೂ ಭಯಪಡುವುದು.
16. ಯಾವುದೋ ಒಂದು ದಿನ ಮರಣಿಸ ಬೇಕೆಂದು ತಿಳಿದಿದೆ, ಆದರೆ ಮಾಡಬೇಕಾದ ಕೆಲಸ ಮಾಡದೇ,.. ಧ್ಯಾನ ಸಾಧನೆಯನ್ನು ಮುಂದೂಡುತ್ತಾ ಇರುವುದು.
17. ಅಸತ್ಯವನ್ನು ಮಾತನಾಡಬಾರದು, ಇತರರಿಗೆ ಮೋಸಮಾಡಬಾರದು , ಅವಮಾನಿಸಬಾರದು, ಭಾಧಿಸಬಾರದು, ಹಿಂಸಿಸಬಾರದು, ಕೀಳಾಗಿ ನೋಡಬಾರದು ಎಂದು ತಿಳಿದು ಕೂಡ ಅದೇ ಮಾಡುವುದು.
18. ಲೋಕಕ್ಕೆ ಒಳ್ಳೆಯದನ್ನು ಮಾಡಬೇಕೆನ್ನುವುದು ತಿಳಿದಿದೆ ಆದರೆ ಏನನ್ನು ಮಾಡದೆ ಹೋಗುವುದು.
19. ಭೂಮಿಯ ಮೇಲೆ ಯಾವುದೂ ಇರುವುದಿಲ್ಲ, ಕಡೆಗೆ ತಾನೇ ಇರುವುದಿಲ್ಲವೆಂದು ತಿಳಿದಿದೆ...ಆದರೂ ಗರ್ವದಿಂದ, ಅಹಂಕಾರದಿಂದ ಇರುವುದು.
20. ಗುಣವು ಮುಖ್ಯವೆಂದು ಹೇಳುತ್ತಾ ರೂಪಕ್ಕೆ, ಹಣಕ್ಕೆ ಪ್ರಾಧಾನ್ಯತೆ ಕೊಡುವುದು.
21. ಯಾವುದನ್ನು ವ್ಯರ್ಥ ಮಾಡಕೂಡದೆಂದು ಹೇಳುತ್ತಾ... ಎಲ್ಲದರಲ್ಲಿ ಮಿತವ್ಯಯ ಪಾಲಿಸುತ್ತಾ ಮೌಲ್ಯಯುತ ಸಮಯವನ್ನು, ವಾಕ್ಕನ್ನು, ಜೀವನವನ್ನು ವ್ಯರ್ಥ ಮಾಡುವುದು.
22. "ಸರ್ವೇ ಜನ ಸುಖಿನೋ ಭವಂತು" ಎಂದು ಪ್ರಾರ್ಥಿಸುತ್ತಾ ತನ್ನ ಸುಖವನ್ನು ಮಾತ್ರವೆ ನೋಡಿಕೊಳ್ಳುತ್ತಾ, ಇತರರ ಸುಖ ಬಯಸದೆ , ಕೇಡನ್ನು ಬಯಸುವುದು.

23. ಎಲ್ಲರಿಗೂ ನೀತಿಯನ್ನು ಹೇಳುತ್ತಾ, ತಾನು ಆಚರಿಸದೆ ಇರುವುದು.
24. ಇತರರು ಬದಲಾಗಬೇಕೆಂದು, ತಾನು ಬದಲಾಗುವುದಕ್ಕೆ ಪ್ರಯತ್ನಿಸದೆ ಇರುವುದು. ಅಜ್ಞಾನದಿಂದ ಪ್ರವರ್ತಿಸುವುದರಲ್ಲಿ ಇವು ಕೆಲವು, ಹೀಗೆ ಪ್ರವರ್ತಿಸಿದರೆ ಯಾರಾದರೂ ದುಃಖದ ಪಾಲಾಗುತ್ತಾರೆ. ಆದ್ದರಿಂದ, ಮೊದಲು ಅಜ್ಞಾನವನ್ನು ತೊಲಗಿಸಿಕೊಳ್ಳಬೇಕು.

## ಜ್ಞಾನವಂತರಾಗಬೇಕೆಂದರೆ

ಅಜ್ಞಾನವು ತೊಲಗಬೇಕೆಂದರೂ, ಜ್ಞಾನವಂತರಾಗ ಬೇಕೆಂದರೂ, ಮನಸ್ಸೆನ್ನುವ ಮಾಯೆಯಿಂದ ಹೊರ ಬರಬೇಕು. ಮನಸ್ಸನ್ನು ಜಯಿಸಬೇಕು, ಮನಸ್ಸಿನ ಪ್ರಾಮುಖ್ಯತೆಯನ್ನು ಕಡಿಮೆ ಮಾಡಬೇಕು, ಮನಸ್ಸನ್ನು ಶುದ್ಧಿ ಮಾಡಬೇಕು, ಮನಸ್ಸನ್ನು ನಿರ್ಮಲ ಗೊಳಿಸಬೇಕು ಆ ಮಾರ್ಗವೇ "**ಆನಾಪಾನಸತಿ ಧ್ಯಾನ**".

ಧ್ಯಾನ ಮಾಡುವುದರಿಂದ ಮನಸ್ಸು ಶುದ್ದಿಯಾಗುವುದರಿಂದ ಮನಸ್ಸಿನ ಪ್ರಾಮುಖ್ಯತೆ ಕಡಿಮೆಯಾಗುತ್ತದೆ, "ಆತ್ಮ"ದ ಪ್ರಾಮುಖ್ಯತೆ ಹೆಚ್ಚುತ್ತದೆ. ಆಗ "ಆತ್ಮ"... ಅಂದರೆ...ಭಗವಂತನು ಹೇಳುವ ಧರ್ಮಗಳನ್ನು ಆಚರಿಸಲಾಗುತ್ತದೆ. ತಿಳಿದು ಕೂಡ ತಿಳಿಯದವನ ಹಾಗೆ ಪ್ರವರ್ತಿಸುವುದಿಲ್ಲ, ಅಜ್ಞಾನವನ್ನು ತೊಲಗಿಸಿಕೊಳ್ಳುವುದು, ಜ್ಞಾನವಂತರಾಗುವುದು.

ಭವಿಷ್ಯತ್ತಿನಲ್ಲಿ ಜ್ಞಾನವಿರುವವರಿಗೆ ಬೆಲೆ.... ಹೆಚ್ಚು ಗೌರವವಿರುತ್ತದೆ. ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಮಾರ್ಗದಲ್ಲಿ ಪುಸ್ತಕ ಪಠಣ ಕೂಡ ಮುಖ್ಯವಾದದ್ದು. ಯೋಗಿಗಳ, ಜ್ಞಾನಿಗಳ ಪುಸ್ತಕಗಳನ್ನು ಓದುವುದರಿಂದ ನಮ್ಮ ಜ್ಞಾನವನ್ನು ಎಷ್ಟೋ ಹೆಚ್ಚಿಸಿಕೊಳ್ಳಬಹುದು, ಆದ್ದರಿಂದ ಪುಸ್ತಕಗಳನ್ನು ಚೆನ್ನಾಗಿ ಓದಿ, ಪುಸ್ತಕಗಳನ್ನು ಓದುವುದಕ್ಕೆ ಪ್ರಾಮುಖ್ಯತೆಯನ್ನು ಕೊಡಿ. ಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಸಂಗ್ರಹಿಸಿ.

ನಿಮ್ಮ ಸಮಯವನ್ನು ಪುಸ್ತಕಗಳ ಅಧ್ಯಯನವನ್ನು ಮಾಡುವುದಕ್ಕೆ.. ನಿಮ್ಮ ಧನವನ್ನು ಪುಸ್ತಕಗಳನ್ನು ಸಂಗ್ರಹಣೆ ಮಾಡುವುದಕ್ಕೆ ವಿನಯೋಗಿಸಿಕೊಳ್ಳಿ, ಧನವನ್ನು ವ್ಯರ್ಥ ಮಾಡಬೇಡಿ ಮನರಂಜನೆಗೆ, ವಿನೋದಕ್ಕೆ, ಖರ್ಚು ಮಾಡಬೇಡಿ ಜ್ಞಾನವುಳ್ಳ ಪುಸ್ತಕಗಳನ್ನು ಸಂಗ್ರಹಿಸಿಕೊಳ್ಳಿ.

ಪುಸ್ತಕಗಳ ಜೊತೆ ಜ್ಞಾನವಂತರ, ಜ್ಞಾನವನ್ನು ಹೇಳುವವರ ಜೊತೆ ಸಾಂಗತ್ಯವನ್ನು ಮಾಡಬೇಕು. ಆದ್ದರಿಂದ ಧ್ಯಾನ, ಸ್ವಾಧ್ಯಾಯ, ಸಜ್ಜನ ಸಾಂಗತ್ಯದಿಂದ ಜ್ಞಾನ ಧನವಂತರಾಗಿ. "ಲೋಕ ಧನಕಿಂತ ಜ್ಞಾನಧನ ತುಂಬಾ... ತುಂಬಾ ಶ್ರೇಷ್ಠವೆಂದು ತಿಳಿದುಕೊಳ್ಳಿ".

# ಭುಕ್ತಿ ವಿದ್ಯೆ–ಮುಕ್ತಿ ವಿದ್ಯೆ

ಆಲೋಚಿಸಿದರೆ ನಾವೆಲ್ಲರೂ ಬಂದಿದ್ದು ಮುಕ್ತಿಗೋಸ್ಕರ ಆದರೆ ಮಾಡುವ ಪ್ರಯತ್ನ ಭುಕ್ತಿಗೋಸ್ಕರ, ಕಾರಣ ಮುಕ್ತಿಯ ಶ್ರೇಷ್ಠತೆಯು ತಿಳಿಯದಿರುವುದು. ಅದು ತಿಳಿಯಬೇಕೆಂದರೆ ಅದಕ್ಕೆ ಸಂಬಂಧಿಸಿದ ವಿದ್ಯೆಯನ್ನು ಅಭ್ಯಸಿಸಬೇಕು, ಅದರ ಬಗ್ಗೆ ತಿಳಿದುಕೊಳ್ಳೋಣ.

**ಈ ವಿದ್ಯೆ ಎರಡು ವಿಧ:–**

1. ಭುಕ್ತಿಗೋಸ್ಕರ ವಿದ್ಯೆ

2. ಮುಕ್ತಿಗೋಸ್ಕರ ವಿದ್ಯೆ.

ಎಲ್ಲರೂ ಭುಕ್ತಿಯನ್ನು ಸಂಪಾದಿಸುವ ವಿದ್ಯೆಗಳನ್ನೆ ಅಭ್ಯಸಿಸುತ್ತಿದ್ದಾರೆ. ಆದರೆ ಮುಕ್ತಿಯನ್ನು ಸಂಪಾದಿಸಿಡುವ ವಿದ್ಯೆಯನ್ನು ಅಭ್ಯಸಿಸುತ್ತಿಲ್ಲ. ಭುಕ್ತಿಯನ್ನು ಸಂಪಾದಿಸಿಡುವ ವಿದ್ಯೆಗಳನ್ನು ಪ್ರಾಪಂಚಿಕ ವಿದ್ಯೆಗಳು ಎನ್ನುತ್ತಾರೆ. ಆದರೆ ಮುಕ್ತಿಯನ್ನು ಸಂಪಾದಿಸಿಡುವ ವಿದ್ಯೆಯನ್ನು ಆಧ್ಯಾತ್ಮಿಕ ವಿದ್ಯೆ ಎನ್ನುತ್ತಾರೆ. ಭುಕ್ತಿಯನ್ನು ಸಂಪಾದಿಸುವ ವಿದ್ಯೆಯನ್ನು "ಕ್ಷರ" ವಿದ್ಯೆ ಎನ್ನುತ್ತಾರೆ, ಮುಕ್ತಿಗೆ ಸಂಬಂಧಿಸಿದ ವಿದ್ಯೆಯನ್ನು "ಅಕ್ಷರ" ವಿದ್ಯೆ ಎನ್ನುತ್ತಾರೆ. 'ಕ್ಷರ' ವಿದ್ಯೆ ಎಂದರೆ ನಶಿಸು ಹೋಗುವ ಸೃಷ್ಟಿಗೆ ಸಂಬಂಧಿಸಿದ್ದು. "ಅಕ್ಷರ ವಿದ್ಯೆ" ಎಂದರೆ ನಾಶವಿಲ್ಲದ ಭಗವಂತನಿಗೆ ಸಂಬಂಧಿಸಿದ್ದು. ಭುಕ್ತಿಯನ್ನು ಕೊಡುವ ಪ್ರಾಪಂಚಿಕ ವಿದ್ಯೆಗಳನ್ನು ಅಭ್ಯಸಿಸಿದರೆ ಭುಕ್ತಿ, ಭೋಗವು ಬರುತ್ತವೆ, ಆದರೆ ಮುಕ್ತಿ ಕೊಡುವ ಆಧ್ಯಾತ್ಮಿಕ ವಿದ್ಯೆಯನ್ನು ಅಂದರೆ ಆತ್ಮವಿದ್ಯೆಯನ್ನು ಅಭ್ಯಾಸ ಮಾಡಿದರೆ ಮುಕ್ತಿ, ಶಾಶ್ವತ ಆನಂದ ಬರುತ್ತವೆ.

ಮಾನವನಿಗೆ "ಭುಕ್ತಿ– ಮುಕ್ತಿ" ಎರಡು ಅಗತ್ಯವೆ.ಮಾನವನು ಎರಡಕ್ಕಾಗಿ ಪ್ರಯತ್ನ ಮಾಡಬೇಕು. ಭಕ್ತಿಯನ್ನು ನೋಡಿಕೊಳ್ಳುತ್ತಾ... ಮುಕ್ತಿಗೋಸ್ಕರ ಕೂಡ ಪ್ರಯತ್ನ ಮಾಡಬೇಕು.

ಎಷ್ಟೋ ಜನ ತಮ್ಮ ಜೀವನವನ್ನೆಲ್ಲ ದುಃಖದಿಂದ ತಾತ್ಕಾಲಿಕವಾಗಿ ಹೊರಬರುವುದಕ್ಕೆ ಖರ್ಚು ಮಾಡುತ್ತಾರೆ. ಆದರೆ ಹಾಗೆ ಪ್ರಯತ್ನಿಸುವ ಬದಲು ಅದರಲ್ಲಿ ನಾಲ್ಕನೆಯ ಒಂದು ಭಾಗ ಸಮಯವನ್ನು ಈ ಜನ್ಮದಲ್ಲಿಯೆ ದುಃಖದಿಂದ ಶಾಶ್ವತವಾಗಿ ಹೊರ ಬರಬಹುದು. ಮುಕ್ತಿಯನ್ನು ಹೊಂದಬಹುದು.

ಆದ್ದರಿಂದ ಭುಕ್ತಿ ಗೋಸ್ಕರ ಬೇಕಾದ ವಿದ್ಯೆಯನ್ನು ಅಭ್ಯಾಸ ಮಾಡುತ್ತಾ, ಅದರ ಜೊತೆ ಮುಕ್ತಿಯನ್ನು ಕೊಡುವ ವಿದ್ಯೆಯನ್ನು ಕೂಡ ಅಂದರೆ ಆತ್ಮವಿದ್ಯೆಯನ್ನು ಅಭ್ಯಾಸ ಮಾಡಬೇಕು, ಅದಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು.

# ದೇಹದ ಕುರಿತಲ್ಲದೇ –ಆತ್ಮದ ಕುರಿತು ಆಲೋಚಿಸಬೇಕು

ಲೋಕದಲ್ಲಿ ಎಲ್ಲರೂ ಹೆಚ್ಚಾಗಿ ದೇಹಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ. ಕಾರಣ ದೇಹ ತಾವೆನ್ನುವ ಭಾವನೆ. ಹಾಗೆ ದೇಹದ ಅಂದಕ್ಕೆ, ದೇಹದ ಆರೋಗ್ಯಕ್ಕೆ, ದೇಹದ ಸುಖಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಾ ಅದಕ್ಕೋಸ್ಕರ ಬದುಕುತ್ತಿದ್ದಾರೆ. ಹಾಗೆ ದೇಹವನ್ನು ಅಲಂಕರಿಸಿಕೊಳ್ಳುವುದಕ್ಕೆ, ದೇಹವನ್ನು ಸೌಷ್ಟಾಂಗಗಳನ್ನು, ಬಲವಾಗಿ, ಆಕರ್ಷಣೀಯವಾಗಿ ಇರುವುದಕ್ಕೆ ಬಗೆ ಬಗೆಯ ಪ್ರಯತ್ನಗಳನ್ನು ಮಾಡುತ್ತಾ ಇರುತ್ತಾರೆ.

ಮಾನವರು ಆಲೋಚಿಸಬೇಕಿರುವುದು ದೇಹದ ಬಗ್ಗೆ ಮಾತ್ರವೇ ಅಲ್ಲ, ಆತ್ಮದ ಕುರಿತು ಕೂಡ ಆಲೋಚಿಸಬೇಕು. ಕಾರಣ "ದೇಹವು ತಾನಲ್ಲ ಆತ್ಮವೇ ತಾನು". ದೇಹವು ತಾತ್ಕಾಲಿಕ, ಆತ್ಮ ಶಾಶ್ವತ. ದೇಹಕ್ಕೆ ಪ್ರಾಮುಖ್ಯತೆಯನ್ನು ಕೊಡುವವರು ರೋಗವನ್ನು, ದುಃಖವನ್ನು ನಿವಾರಿಸಿಕೊಳ್ಳಲಾರರು. ಆದರೆ ಆತ್ಮಕ್ಕೆ ಪ್ರಾಮುಖ್ಯತೆಯನ್ನು ಕೊಡುವವರು ಎಲ್ಲವನ್ನು ಹಿಮೆಟ್ಟಿಸಿ ಆನಂದವಾಗಿ ಇರುತ್ತಾರೆ. ದೇಹಕ್ಕೆ ಪ್ರಾಮುಖ್ಯತೆಯನ್ನು ಕೊಡುವವರಿಗೆ ಕೆಟ್ಟ ಗುಣಗಳು ,ಕೆಟ್ಟ ಹವ್ಯಾಸಗಳು ಇರುತ್ತದೆ. ಅವರು ಎಂದಿಗೂ ಬದಲಾಗುವುದಿಲ್ಲ.

ದೇಹಕ್ಕೆ ಪ್ರಾಮುಖ್ಯತೆಯನ್ನು ಕೊಡುವವರು ಸತ್ಯವನ್ನು ಗುರುತಿಸುವುದಿಲ್ಲ, ಧರ್ಮವನ್ನು ಆಚರಿಸಲಾರರು. ಆದರೆ ಆತ್ಮಕ್ಕೆ ಪ್ರಾಮುಖ್ಯತೆಯನ್ನು ಕೊಡುವವರು ಧರ್ಮಯುಕ್ತವಾಗಿ ಜೀವಿಸುತ್ತಾರೆ, ಸತ್ಯವನ್ನು ಅನುಸರಿಸುತ್ತಾರೆ. ಆದ್ದರಿಂದ ಆತ್ಮವು ಶ್ರೇಷ್ಠವೆಂದು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು.

# ಮಾನವನ ಜೀವನದ ಗುರಿ

ಆತ್ಮದ ಕುರಿತು , ಆತ್ಮದ ಪ್ರಾಮುಖ್ಯತೆಯ ಬಗ್ಗೆ ಮತ್ತಷ್ಟು ತಿಳಿದುಕೊಳ್ಳೋಣ.

ವೇದಗಳಲ್ಲಿ 'ಅಥಾತೊ ಬ್ರಹ್ಮ ಜಿಜ್ಞಾಸ' ಎಂದು ಇದೆ. ಅಂದರೆ "ಬ್ರಹ್ಮ ವಿಚಾರಣೆ ಮಾಡುವುದಕ್ಕೇನೆ ಮಾನವನ ಜೀವನ" ಎಂದು ಅರ್ಥ. ಬ್ರಹ್ಮವೆಂದರೆ ಎಲ್ಲಕ್ಕಿಂತಲೂ ಶ್ರೇಷ್ಠವಾದದ್ದು. ಆತ್ಮವೆಂದರೆ ಅದೇ , ಆತ್ಮದ ಬಗ್ಗೆ ವಿಚಾರಣೆ ಮಾಡುವುದಕ್ಕೆ ಮಾನವನ ಜನ್ಮಪಡೆದಿದ್ದೇವೆ. ಅಂತಹ ಶ್ರೇಷ್ಠವಾದ ಆತ್ಮವನ್ನು ಬಿಟ್ಟು ನಾವು ಅನಿತ್ಯವಾದ ಅತ್ಯಲ್ಪ ವಿಷಯ ಜಿಜ್ಞಾಸೆಯಲ್ಲಿ ನಿಮಗ್ನರಾಗಿದ್ದೇವೆ. ವೇದಗಳಲ್ಲಿ ಇನ್ನೂ "**ಅಹಂ ಬ್ರಹ್ಮಾಸ್ಮಿ**" ಅಂದರೆ "ಅಂತಹ ಸರ್ವಶಕ್ತನಾದ ಬ್ರಹ್ಮನು ನಾನೆ" ಎಂದು ಹೇಳಲ್ಪಟ್ಟಿದೆ.

ಆದರೆ ನಾವು ಅಂತಹ ಸರ್ವಾಶಕ್ತರಾದ ನಮ್ಮ ಬಗ್ಗೆ ಆಲೋಚಿಸುವುದರ ಬದಲು ಆಹಾರ, ನಿದ್ರೆ, ಭಯ, ಮೈಥುನ ಎನ್ನುವ ವಿಷಯಗಳ ಮೇಲೆ ಆಸಕ್ತಿಯನ್ನು ತೋರಿಸುತ್ತಿದ್ದೇವೆ. ಈ ಆಹಾರ, ನಿದ್ರೆ, ಭಯ, ಮೈಥುನಗಳು ಮಾನವರಲ್ಲದೆ ಪಶುಗಳು ಕೂಡಾ ಅನುಭವಿಸುತ್ತಿವೆ. ಯಾವ ಪ್ರಾಣಿ ರೂಪದಲ್ಲಾದರೂ ಅವನ್ನು ಅನುಭವಿಸಬಹುದು. ಅದಕ್ಕೋಸ್ಕರ ಪ್ರತ್ಯೇಕವಾಗಿ ಮಾನವ ಜನ್ಮವನ್ನು ತೆಗೆದುಕೊಳ್ಳುವ ಅಗತ್ಯವಿಲ್ಲವೆಂದು ವೇದಾಂತ ಸೂತ್ರಗಳು ಬೋಧಿಸುತ್ತಿವೆ. ನೀಚಾತಿ ನೀಚವಾಗಿ ಪ್ರಾಣಿಯಾಗಿ ಆಯ್ಕೆ ಮಾಡಲ್ಪಟ್ಟ ಹಂದಿಗೆ ಕೂಡ ತಿನ್ನುವುದಕ್ಕೆ, ಮಕ್ಕಳನ್ನು ಹೆರುವುದಕ್ಕೆ, ನಿದ್ರಿಸುವುದಕ್ಕೆ, ಆತ್ಮ ರಕ್ಷಣೆ ಮಾಡಿಕೊಳ್ಳುವುದಕ್ಕೆ ಪ್ರಕೃತಿಯಲ್ಲಿ ಸೌಕರ್ಯಗಳು ಕಲ್ಪಿಸಲಾಗಿದೆ. ಅವುಗಳ ಬಗ್ಗೆ  ಪ್ರಯತ್ನಿಸದೆ ಹೋದರು ಯಾರಿಗಾದರೂ ಅವು ಲಭಿಸುತ್ತದೆ.

ಎಲ್ಲಾ ಪ್ರಾಣಿಕೋಟಿಯಲ್ಲಿ ಉತ್ತಮವಾದ ಮಾನವ ಜನ್ಮವನ್ನು ಹೊಂದಿ ಭೂಲೋಕದಲ್ಲಿರುವ 84,00,000 ಜೀವರಾಶಿಗಳಲ್ಲಿ ವಿಶಿಷ್ಟವಾದ ಜನ್ಮವಾಗಿ ಭಾವಿಸುತ್ತಿರುವ ಮಾನವನು ಉಳಿದ ಜೀವಿಗಳ ಹಾಗೆ ಪ್ರವರ್ತಿಸುವುದು, ಅದಕ್ಕಿಂತಲೂ ಹೆಚ್ಚಾಗಿ ಆಲೋಚಿಸದಿರುವುದು, ಕೊಟ್ಟ ಅವಕಾಶವನ್ನು ಪೂರ್ತಿಯಾಗಿ ವ್ಯರ್ಥಮಾಡಿ. ಮತ್ತೆ ದುರ್ಲಭವಾದ ಮಾನವ ಜನ್ಮವನ್ನು ಹೊಂದಿ ಜೀವನದಲ್ಲಿ ನಾವು ಏನು ಸಾಧಿಸಿದೆವೆಂದು ಆಲೋಚಿಸಿದರೆ,ಕಡೆಗೆ ಏನೂ ಕಾಣಿಸುವುದಿಲ್ಲ. ನಮ್ಮಿಂದ ಲೋಕಕ್ಕೆ ಏನಾದರೂ ಉಪಕಾರವಾಗಿದೆಯೇ...ಎಂದು ಆಲೋಚಿಸಿದರೆ ಎಲ್ಲಾ ಅಪಕಾರವೆ ಹೊರೆತು ಉಪಕಾರವು ಏನೂ ಇಲ್ಲವೆಂದು ತಿಳಿಯುತ್ತದೆ. ಮತ್ತೆ ಮಾನವನ ಜನ್ಮದ ವಿಶಿಷ್ಟತೆ ಏನು? ಶ್ರೇಷ್ಠತೆ ಏನು? ಲಕ್ಷ್ಯವೇನು? ಶಾಶ್ವತವಾದ ಆನಂದವನ್ನು ಹೊಂದುವುದಕ್ಕೆ ಭೌತಿಕ ಪ್ರಕೃತಿಯನ್ನು ಆಶ್ರಯಿಸುವುದು ಮಾರ್ಗವಲ್ಲ. ನಮಗೆ ನಿಜವಾಗಿಯೂ ಆನಂದ ಬೇಕೆಂದರೆ  ಮುಂಚೆ ನಾವು ಯಾರು ಎಂದು ತಿಳಿದುಕೊಳ್ಳಬೇಕು. ಈ ದೇಹವು ನಾನಲ್ಲ ಎಂದು ಗ್ರಹಿಸಬೇಕು. ಆತ್ಮ ನಾನೆಂದು ತಿಳಿದುಕೊಳ್ಳಬೇಕು. ಈ ಜ್ಞಾನ ಉಂಟಾಗಬೇಕೆಂದರೆ ಧ್ಯಾನ ಸಾಧನೆಯನ್ನು ಮಾಡಬೇಕು. ಇಷ್ಟು  ದಿನ ಇಂದ್ರಿಯಗಳನ್ನು ಸೇವಿಸಿದ್ದೇವೆ. ಈಗ ಆತ್ಮವನ್ನು ಸೇವಿಸುವುದಕ್ಕೆ ಮುಂದೆ ಬರಬೇಕು ಅಂದರೆ ಧ್ಯಾನವನ್ನು ಮಾಡಬೇಕು.

ನಮ್ಮ ಮನಸ್ಸಿಗೆ ನಾವು ಬದ್ಧರಾಗಿರುವಷ್ಟು ಕಾಲವು ತಪ್ಪುಗಳನ್ನು ಮಾಡುವುದು, ಭ್ರಾಂತಿಯಲ್ಲಿರುವುದು, ಮೋಸ ಮಾಡುವುದು, ಧರ್ಮವನ್ನು ಅತಿಕ್ರಮಿಸುವುದು ಇಂತಹವುಗಳಿಗೆ ಗುರಿಯಾಗಬೇಕಾಗಿ ಬರುತ್ತದೆ. ಆದರೆ ಧ್ಯಾನವನ್ನು ಮಾಡಿದರೆ ನಮ್ಮ ಮನಸ್ಸಿನ ಪ್ರಾಮುಖ್ಯತೆಯನ್ನು ಕಡಿಮೆ ಮಾಡಿಕೊಳ್ಳುತ್ತಾ ಆತ್ಮದ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಳ್ಳುತ್ತಾ ಕಡೆಗೆ ಆತ್ಮವನ್ನು ತಿಳಿದುಕೊಳ್ಳುತ್ತೇವೆ, ಆತ್ಮ ಸಾಕ್ಷಾತ್ಕಾರವನ್ನು

ಹೊಂದುತ್ತೇವೆ, ಅದೇ ಮೋಕ್ಷ. ಅದೇ "ಮಾನವ ಜೀವನದ ಲಕ್ಷ್ಯ". ಆ ಲಕ್ಷ್ಯವನ್ನು ಸಾಧಿಸಿದರೆ ಮತ್ತೆ ಮಾನವ ಜನ್ಮವನ್ನು ಹೊಂದಬೇಕಾದ ಅಗತ್ಯವಿಲ್ಲ.

## ನಿತ್ಯ- ಅನಿತ್ಯ

ನಿತ್ಯ ಎಂದರೆ ಶಾಶ್ವತವಾದದ್ದು, ಅನಿತ್ಯ ಎಂದರೆ ಅಶಾಶ್ವತವಾದದ್ದು. ಈ ಸೃಷ್ಟಿಯಲ್ಲಿ ನಿತ್ಯವಾದದ್ದೂ ಇದೆ, ಅನಿತ್ಯವಾದದ್ದು ಇದೆ. ಮಾನವರಿಗೆ ಈ ಬೇಧ ತಿಳಿಯದೆ ಅನಿತ್ಯ ವಾದದ್ದೇ ದೊಡ್ಡದೆಂದುಕೊಳ್ಳುತ್ತಾರೆ. ಅವುಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ. ಆದರೆ ನಿತ್ಯದ ಬಗ್ಗೆ ಆಲೋಚಿಸುತ್ತಿಲ್ಲ. ಮಾನವರಿಗೆ ಈ ನಿತ್ಯ-ಅನಿತ್ಯದ ವಿವೇಕವೆ ಇಲ್ಲ, ಆಲೋಚನೆಯು ಇಲ್ಲ. ಇದಕ್ಕೆ ಮುಖ್ಯ ಕಾರಣ ದೊಡ್ಡವರು ಮಕ್ಕಳಿಗೆ ಈ ಬೇಧವನ್ನು ವಿವರಿಸಿದೆ ಇರುವುದು. ದೊಡ್ಡವರು ಮಕ್ಕಳನ್ನು ಚೆನ್ನಾಗಿ ಓದು, ಚೆನ್ನಾಗಿ ಸಂಪಾದಿಸು ಎಂದು ಪ್ರೋತ್ಸಾಹಿಸುತ್ತಿದ್ದಾರೆ, ಹಾಗೆ ಮಾಡಿದರೆ ಚೆನ್ನಾಗಿ ಸುಖ ಹೊಂದಬಹುದೆಂದು, ಅನುಭವಿಸಬಹುದೆಂದು ಹೇಳುತ್ತಿದ್ದಾರೆ. ಆದ್ದರಿಂದ ಮಕ್ಕಳು ಕೂಡಾ ದೊಡ್ಡವರು ಹೇಳಿದ್ದಕ್ಕೇನೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ, ಹಾಗೆಯೆ ಜೀವಿಸುತ್ತಿದ್ದಾರೆ. ಅದಕ್ಕಿಂತಲೂ ಹೆಚ್ಚಾಗಿ ಆಲೋಚಿಸುತ್ತಿಲ್ಲ.

ಮಾನವರು ದುಃಖ ಹೊಂದುವುದಕ್ಕೆ ಇನ್ನೊಂದು ಕಾರಣ ಈ ನಿತ್ಯ-ಅನಿತ್ಯದ ವಿವೇಕ ಇಲ್ಲದೆ ಹೋಗಿರುವುದು. ಅಂದರೆ ಯಾವುದು ಶಾಶ್ವತ? ಯಾವುದು ಅಶಾಶ್ವತ? ತಿಳಿಯದಿರುವುದು. ಅವುಗಳ ಬಗ್ಗೆ ಆಲೋಚಿಸದಿರುವುದು! ಆದರೆ ಆಲೋಚಿಸಬೇಕು.

ಮಾನವರು ಅಶಾಶ್ವತವಾದದ್ದನ್ನೆ ಶಾಶ್ವತವೆಂದುಕೊಳ್ಳುತ್ತಾರೆ, ಅದರಲ್ಲೆ ಆನಂದ ಇದೆ ಎಂದುಕೊಳ್ಳುತ್ತಿದ್ದಾರೆ, ಅವುಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ, ಅವುಗಳನ್ನೆ ಸಂಪಾದಿಸಿಕೊಳ್ಳುತ್ತಿದ್ದಾರೆ, ಅವುಗಳಿಗಾಗಿ ಜೀವನವನ್ನು ಮುಡಿಪಾಗಿ ಇಡುತ್ತಿದ್ದಾರೆ, ತಮ್ಮ ಶಕ್ತಿಯುಕ್ತಿಯನ್ನು ವಿನಯೋಗಿಸುತ್ತಿದ್ದಾರೆ. ಆಲೋಚಿಸಿ. ಅಶಾಶ್ವತವಾದದ್ದು ಒಮ್ಮೆ ದೂರವಾಗುತ್ತವೆ, ಅದೃಶ್ಯವಾಗುತ್ತದೆ. ಆಗ ಮಾನವನು ಎಣೆಯಿಲ್ಲದ ದುಃಖಕ್ಕೆ ಈಡಾಗುತ್ತಾನೆ. ಇದನ್ನು ನೋಡಿದರೆ ಮಾನವನ ದುಃಖಕ್ಕೆ ಇದೊಂದು ಕಾರಣ ಎಂದು ತಿಳಿಯುತ್ತದೆ.

ಈ ಸೃಷ್ಟಿಯಲ್ಲಿ ನಿತ್ಯವಾದದ್ದು ಏನು? ಅಂದರೆ ಯಾವಾಗಲೂ ಇರುವುದು ಯಾವುದು? ಆಲೋಚಿಸಿದರೆ...ಈ ಭೂಮಿ, ಸೂರ್ಯ, ಚಂದ್ರ, ಗ್ರಹಗಳು, ಸಮಸ್ತ ಲೋಕಗಳು ಯಾವಾಗಲೊ ಒಮ್ಮೆ ಅದೃಶ್ಯವಾಗಬಹುದು. ಆದರೆ ಶಾಶ್ವತವಾಗಿ ಇರುವುದು ಒಂದೇ ಒಂದು ಅದೇ "ಭಗವಂತ", ಅದೇ "ಆತ್ಮ". ಅಂದರೆ ಆತ್ಮವೇ

ನಿತ್ಯವಾದದ್ದು, ಶಾಶ್ವತವಾದದ್ದು. ಆತ್ಮವನ್ನು ಹೊಂದಿದರೇನೆ... ಭಗವಂತನನ್ನು ಹೊಂದಿದರೆ ಮಾನವನು ಶಾಶ್ವತವಾದ ಆನಂದವನ್ನು ಹೊಂದಬಹುದು. ಭಗವಂತನನ್ನು ಹೊಂದಬೇಕೆಂದರೆ ಏಕೈಕ ಮಾರ್ಗ "ಧ್ಯಾನ". ಧ್ಯಾನದಿಂದಲೆ ಯಾರಾದರೂ ಭಗವಂತನನ್ನು ಹೊಂದಬಹುದು.

ಹಾಗೆಯೆ ಆಲೋಚಿಸಿದರೆ ನಿತ್ಯವಾದದ್ದು ಯಾವಾಗಲೂ ಇರುತ್ತದೆ. ಅನಿತ್ಯವಾದದ್ದು ಇರುವ ಹಾಗೆ ಕಾಣಿಸುತ್ತದೆ. ಆದರೆ ಅವು ಇರುವುದಿಲ್ಲ. ಆದ್ದರಿಂದ ಇರುವುದರ ಬಗ್ಗೆ, ಇಲ್ಲದೆ ಇರುವುದರ ಬಗ್ಗೆ ಸ್ವಲ್ಪ ಆಲೋಚಿಸೋಣ.

## ಇರುವುದು–ಇಲ್ಲದಿರುವುದು

ಮೇಲಿನ ವಿಷಯಗಳನ್ನು ನೋಡಿದರೆ ಸೃಷ್ಟಿಯಲ್ಲಿ ಎರಡು ಬಗೆ ಇವೆ ಎಂದು ತಿಳಿಯುತ್ತವೆ. ಅವು ಇರುವುದು– ಇಲ್ಲದಿರುವುದು. ಅಂದರೆ ಸೃಷ್ಟಿಯಲ್ಲಿ ಇರುವುದು, ಇಲ್ಲದಿರುವುದು ಇದೆ. ಇದೇ ಸೃಷ್ಟಿಯ ಹಿರಿಮೆ . ಇರುವುದನ್ನು ಶಾಶ್ವತವಾದದ್ದೆಂದು ಎನ್ನುತ್ತಾರೆ, ಇಲ್ಲದೆ ಇರುವುದನ್ನು ತಾತ್ಕಾಲಿಕವೆಂದು ಅನ್ನುತ್ತಾರೆ.

ಈ ಸೃಷ್ಟಿಯಲ್ಲಿರುವ ವಿಚಿತ್ರವೇನೆಂದರೆ 'ಇರುವುದು' ಇಲ್ಲದೆ ಇರುವ ಹಾಗೆ ಕಾಣಿಸುತ್ತದೆ, 'ಇಲ್ಲದೆ' ಇರುವುದು ಇರುವ ಹಾಗೆ ಕಾಣಿಸುತ್ತವೆ. ಆದ್ದರಿಂದ ಮಾನವರು ಇರುವ ಹಾಗೆ ಕಾಣಿಸುವ ಯಾವಾಗಲೋ ನಾಶ ಆಗುವ ಕ್ಷಣಿಕ ವಸ್ತು ವಿಷಯಗಳಿಗಾಗಿ ಪ್ರಯತ್ನಿಸುತ್ತಾರೆ, ತಾಪತ್ರಯ ಪಡುತ್ತಾರೆ, ಸಂಪಾದಿಸಿಕೊಳ್ಳುತ್ತಾರೆ, ದೋಚಿಕೊಳ್ಳುತ್ತಾರೆ, ಕಾಪಾಡಿಕೊಳ್ಳುತ್ತಾರೆ, ಕೊನೆಗೆ ಏನೂ ಇರುವುದಿಲ್ಲ, ನಿರಾಸೆ ಪಡುತ್ತಾರೆ.

ಆಶ್ಚರ್ಯವೇನೆಂದರೆ ಯಾವಾಗಲೂ ಇರುತ್ತೇನೆ ಎಂದುಕೊಳ್ಳುವವನೆ ನಾಳೆ ಇರುವುದಿಲ್ಲ, ತಾನೇ ಇಲ್ಲದಿರುವಾಗ ತನ್ನದು ಎನ್ನುವುದು ಎಲ್ಲಿರುತ್ತವೆ? ಎಷ್ಟು ವಿಚಿತ್ರ ಅಲ್ಲವೇ. ಇಲ್ಲವಾಗುವ ತಾನು ಇರುತ್ತೇನೆ ಎಂದುಕೊಳ್ಳುತ್ತಾನೆ, ಒಮ್ಮೆ ಬಿಟ್ಟು ಹೋಗುವುದನ್ನು ಸಂಪಾದಿಸುತ್ತಾನೆ, ಅವುಗಳನ್ನು ನೋಡಿ ದೊಡ್ಡವನಾದೆ ಎಂದು ಕೊಳ್ಳುತ್ತಾನೆ, ಗರ್ವಿಸುತ್ತಾನೆ, ಅಹಂಕಾರ ಪಡುತ್ತಾನೆ. ಜೀವನವೆಲ್ಲ ಓಡುತ್ತಾನೆ, ಏನನ್ನೊ ಮಾಡುತ್ತಿದ್ದೇನೆಂದುಕೊಳ್ಳುತ್ತಾನೆ, ಕೊನೆಗೆ ಅದೃಶ್ಯನಾಗುತ್ತಾನೆ, ಅಂದರೆ ಸ್ವಲ್ಪ ದಿನಕ್ಕೆ ಭೂಮಿಯ ಮೇಲೆ ಕಾಣಿಸುವುದಿಲ್ಲ.

ಚೆನ್ನಾಗಿ ಆಲೋಚಿಸಿದರೆ ಸೃಷ್ಟಿಯಲ್ಲಿ ಯಾವುದು ಕಾಣುವುದೋ ಅವೆಲ್ಲವು ಇಲ್ಲವಾಗುವುದೇ... ಇರುವ! ಹಾಗೆ ಯಾವುದು ಕಾಣಿಸುವುದಿಲ್ಲವೋ ಅದು ಯಾವಾಗಲೂ ಇರುವುದು. ಎಷ್ಟು ವಿಚಿತ್ರ. "ಇರುವುದು ಇಲ್ಲದೆ ಇರುವ ಹಾಗೆ

ಕಾಣಿಸುತ್ತದೆ, ಇಲ್ಲದೆ ಇರುವುದು ಇರುವ ಹಾಗೆ ಕಾಣಿಸುತ್ತವೆ". ಆದರೆ ಇಷ್ಟು ಬುದ್ದಿವಂತಿಕೆ ಇದೆ ಎಂದುಕೊಳ್ಳುವ ಮಾನವನು ಇಲ್ಲದೆ ಇರುವುದನ್ನೆ ಇದೆ ಎಂದುಕೊಳ್ಳುತ್ತಾನೆ, ಇರುವುದನ್ನು ಇಲ್ಲವೆಂದು ಕೊಳ್ಳುತ್ತಾನೆ.

ಆದರೆ "ಇಲ್ಲದೆ ಇರುವುದನ್ನು ಇಲ್ಲದೆ ಇರುವ ಹಾಗೆ, ಇರುವುದನ್ನು ಇರುವ ಹಾಗೆ ತಿಳಿದುಕೊಳ್ಳುವವನೆ ಬುದ್ಧಿವಂತನು". ಹಾಗೆ ತಿಳಿದುಕೊಂಡವರೆ "ಯೋಗಿಗಳು". ಭೋಗಿಗಳಿಗೆ ಇವು  ಅರ್ಥವಾಗುವುದಿಲ್ಲ, ಆದರೆ ಎಲ್ಲವೂ ತಿಳಿದಿದೆ ಎಂದುಕೊಳ್ಳುತ್ತಾನೆ, ಏನೇನೊ ಮಾಡುತ್ತಿರುತ್ತಾನೆ, ಕಡೆಗೆ ದುಃಖದಲ್ಲಿ ಮುಳುಗಿ ಹೋಗುತ್ತಾನೆ. ಅದರಿಂದ ಹೊರ ಬರಲಾರದೆ ಈ ಸತ್ಯವನ್ನು ತಿಳಿದುಕೊಂಡ "ಯೋಗಿಗಳ" ಕಾಲಿಗೆ ಬೀಳುತ್ತಾರೆ, ರಕ್ಷಿಸೆಂದು, ದಿಕ್ಕಿಲ್ಲದವನ ಹಾಗೆ ರೋಧಿಸುತ್ತಿರುತ್ತಾರೆ. ಆದ್ದರಿಂದ ಇರುವುದು ಯಾವುದೊ? ಇಲ್ಲದೆ ಇರುವುದು ಯಾವುದೊ? ತಿಳಿದುಕೊಳ್ಳಬೇಕು, ಆಲೋಚಿಸಬೇಕು.

ಗಮನಿಸಿದರೆ... ಇಲ್ಲದಿರುವವೆಲ್ಲವು ದುಃಖವನ್ನು ಉಂಟುಮಾಡುತ್ತವೆ, ಇರುವುದು ಆನಂದವನ್ನು ಕೊಡುತ್ತದೆ. ಗಮನಿಸಿದರೆ, ಇರುವುದನ್ನು ತಿಳಿದುಕೊಂಡವನು ದೊಡ್ಡವನು. ಇಲ್ಲದಿರುವುದನ್ನು ಇರುವ ಹಾಗೆ ಭ್ರಮಿಸುವ ಎಲ್ಲರೂ ಪಾಪದಲ್ಲಿ, ಕಷ್ಟದಲ್ಲಿ ಸಿಲುಕಿಕೊಂಡರು. ಇರುವುದು ಯಾವುದು? ಹೇಗೆ ತಿಳಿದುಕೊಳ್ಳಬೇಕು?

ಇರುವುದು "ಭಗವಂತನು" ಒಬ್ಬನೆ. ಅಂದರೆ "ಆತ್ಮ" ಒಂದೆ. ಮತ್ತೆ ಇರುವ ಭಗವಂತನನ್ನು ತಿಳಿದುಕೊಳ್ಳಬೇಕೆಂದರೆ ಧ್ಯಾನವೊಂದೇ ಮಾರ್ಗ, ಇದನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲ. ಧ್ಯಾನವನ್ನು ಮಾಡದವರು ಇಲ್ಲದೆ ಇರುವುದನ್ನು ಇದೆ ಎಂದುಕೊಳ್ಳುತ್ತಾರೆ. ಇರುವ ಭಗವಂತನ ಬಗ್ಗೆ...ಅಂದರೆ ಆತ್ಮದ ಬಗ್ಗೆ ಗೊತ್ತಿಲ್ಲ.

**"ಇರುವುದು ಇರುವ ಹಾಗೆ, ಇಲ್ಲದೆ ಇರುವುದು ಇಲ್ಲದೆ ಇರುವ ಹಾಗೆ ತಿಳಿದುಕೊಂಡವನು, ಹುಟ್ಟು ಸಾವು ಇಲ್ಲದಿರುವ ಜೀವನವನ್ನು ಹೊಂದುತ್ತಾನೆ. ಇಲ್ಲದಿದ್ದರೆ ಅವನಿಗೆ ಹುಟ್ಟು ಸಾವಿನ ಜೀವನವೆ ಗತಿ". ಮರಣಿಸಿ, ಹುಟ್ಟಿ ಜೀವನವೆಲ್ಲ ದುಃಖವೆ, ಕಷ್ಟಗಳೆ, ಬಾಧೆಗಳೆ.**

## ನಾಟಕ

ನಾಟಕದಲ್ಲಿ ಎಲ್ಲವೂ ಇರುವ ಹಾಗೆ ಕಾಣಿಸುತ್ತವೆ, ಕೊನೆಗೆ ಏನೂ ಇರುವುದಿಲ್ಲ. ಹಾಗೆ, ಅದರಲ್ಲಿ ಇರುವ ಎಲ್ಲವೂ ನಾಟಕದಲ್ಲಿನ ಪಾತ್ರಗಳ ಹಾಗೆ.

ಈ ಭೂಮಿಯು ಒಂದು ದೊಡ್ಡ ನಾಟಕ ರಂಗ,  ಅದರಲ್ಲಿ ನಾವೆಲ್ಲರೂ ಪಾತ್ರದಾರರು, ನಾಟಕ ಮುಗಿದ ನಂತರ ಅಲ್ಲಿ  ಪಾತ್ರವನ್ನು ಪೋಷಿಸಿದವರು  ಎಲ್ಲರೂ ನಿಷ್ಕ್ರಮಿಸಬೇಕು ಇದು ಆಲೋಚಿಸಿದರೆ ತಿಳಿಯುತ್ತದೆ.

ಆದರೆ ಭೂಮಿಯ ಮೇಲೆ ಯಾರೂ ಕೂಡ ತಮ್ಮದು ಒಂದು ಪಾತ್ರವೆಂದು ಭಾವಿಸುತ್ತಿಲ್ಲ, ಎಲ್ಲರೂ ನಿಜವೆಂದುಕೊಳ್ಳುತ್ತಿದ್ದಾರೆ. ತಾನು ಈ ಕುಲಸ್ಥನೆಂದು, ಮತಸ್ಥನೆಂದು, ಪ್ರಾಂತದವನೆಂದು, ದೇಶದವನೆಂದು, ಜಮೀನ್ದಾರನೆಂದು, ನಾಯಕನೆಂದು, ರೂಪವಂತನೆಂದು, ಆಟಗಾರನೆಂದು, ಸ್ತ್ರೀಯೆಂದು , ಪುರುಷನೆಂದು, ಬಡವನೆಂದು, ಕುರೂಪಿಯೆಂದು, ಹೆಂಡತಿಯೆಂದು, ಗಂಡನೆಂದು, ತಾಯಿ ಎಂದು, ತಂದೆ ಎಂದು ಭಾವಿಸುತ್ತಿದ್ದಾರೆ. ಅದಕ್ಕೆ ತಕ್ಕ ಹಾಗೆ ಪ್ರವರ್ತಿಸುತ್ತಿದ್ದಾರೆ. ಆದರೆ ಯಾರೂ ಕೂಡ ತಾವು ಈ ನಾಟಕದಲ್ಲಿ ಅಂತಹ ಪಾತ್ರವನ್ನು ಪೋಷಿಸುತಿದ್ದೇವೆಂದು ಭಾವಿಸುತ್ತಿಲ್ಲ.

ನಾನು ತಾಯಿ ಎಂದುಕೊಳ್ಳುತ್ತಾ, ತಂದೆ ಎಂದುಕೊಳ್ಳುತ್ತಾ, ಹೆಂಡತಿ ಎಂದುಕೊಳ್ಳುತ್ತಾ, ಗಂಡ ಎಂದುಕೊಳ್ಳುತ್ತಾ ಅವರು ನನ್ನವರು, ಅವರಿಗೋಸ್ಕರ ರಾಗ ದ್ವೇಷವನ್ನು ಪ್ರದರ್ಶಿಸುತ್ತಾ, ಅವರಿಗೋಸ್ಕರ ಮಾಡಬಾರದ ಕೆಲಸವನ್ನು ಮಾಡುತ್ತಾ, ಇತರರನ್ನು ದ್ವೇಷಿಸುತ್ತಾ, ಇವೆಲ್ಲವೂ ಶಾಶ್ವತ ವೆಂದುಕೊಳ್ಳುತ್ತಾ, ಎಲ್ಲವನ್ನು ಕೂಡಿ ಇಡುತ್ತಾ, ಅಧರ್ಮವಾಗಿ ಪ್ರವರ್ತಿಸುತ್ತಾ, ಪಾಪವನ್ನು ಮಾಡುತ್ತಾ ಕಷ್ಟಗಳ ಪಾಲಾಗುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಕೂಡ ಆಲೋಚಿಸೋಣ.

ನಾಟಕದಲ್ಲಿ ರಾಜನು, ನಾನು ರಾಜನೆಂದು ಭಾವಿಸಿದರೆ ಹೇಗೆ ಇರುತ್ತದೆ? ನಾಟಕದಲ್ಲಿ ಜಮೀನುದಾರನು, ನಾನು ಜಮೀನು ದಾರನೆಂದು, ಕಲೆಕ್ಟರ್ ನಾನು ಕಲೆಕ್ಟರ್, ಮಿನಿಸ್ಟರ್ ಎಂದು ಪಾತ್ರ ಮುಗಿದ ಮೇಲೆ ಕೂಡಾ ಭಾವಿಸಿದರೆ ಹೇಗೆ ಇರುತ್ತದೆಯೊ !ಭೂಲೋಕ ನಾಟಕ ರಂಗದಲ್ಲಿ ಮಾನವರು ಇರುವುದನ್ನೆಲ್ಲ ನಿಜವೆಂದುಕೊಂಡರೆ ಹಾಗೆಯೆ ಇರುತ್ತದೆ. ಕಾರಣ ನಾಟಕದಲ್ಲಿ ರಾಜನ ಪಾತ್ರ ಇರುವಷ್ಟು ಹೊತ್ತು ಆತನು ರಾಜ... ನಾಟಕವು ಪೂರ್ತಿಯಾದ ತಕ್ಷಣ ರಾಜನಲ್ಲ, ಜಮೀನ್ದಾರನಲ್ಲ, ಕಲೆಕ್ಟರ್ , ಮಿನಿಸ್ಟರ್ ಕೂಡ ಅಲ್ಲ. ಹಾಗೆಯೆ ಗಂಡ, ಹೆಂಡತಿ, ತಾಯಿ, ತಂದೆ ಕೂಡಾ ಅಲ್ಲ. ಸಮಯ ಬಂದಾಗ ನಿರ್ಗಮಿಸಬೇಕು.

ಗಮನಿಸಿದರೆ ಒಂದು ನಾಟಕದಲ್ಲಿರುವ ಪಾತ್ರ ಇನ್ನೊಂದು ನಾಟಕದಲ್ಲಿ ಇರುವುದಿಲ್ಲ.ಏಕೆಂದರೆ ಒಂದು ನಾಟಕದಲ್ಲಿ ರಾಜನಾಗಿ ಪಾತ್ರವನ್ನು ಪೋಷಿಸಿದವನು ಇನ್ನೊಂದು ನಾಟಕದಲ್ಲಿ ಸೇವಕನಾಗಿ ಪಾತ್ರ ವನ್ನು ಪೋಷಿಸಬೇಕಾಗಿ ಬರುತ್ತದೆ. ಹಾಗೆ ಧನವಂತನಾಗಿ ಒಂದು ನಾಟಕದಲ್ಲಿ ಪೋಷಿಸಿ ದವನು ಇನ್ನೊಂದು ನಾಟಕದಲ್ಲಿ ಭಿಕ್ಷುಕ ನಾಗಿ ಪೋಷಿಸಬೇಕಾಗಿ ಬರುತ್ತದೆ. ಹಾಗೆಯೆ ಈ ನಾಟಕದಲ್ಲಿ ಹೆಂಡತಿಯಾಗಿ ಪೋಷಿಸಿದವಳು ಇನ್ನೊಂದು ನಾಟಕದಲ್ಲಿ ತಾಯಿಯಾಗಿ ನಟಿಸಬೇಕು, ಈ ನಾಟಕದಲ್ಲಿ ಗಂಡನಾಗಿ ನಟಿಸಿದವನು ಇನ್ನೊಂದು ನಾಟಕದಲ್ಲಿ ಮಗನಾಗಿ ಪೋಷಿಸಬೇಕಾಗಿ ಬರಬಹುದು. ಅಂದರೆ ನಾಟಕಗಳು ಬದಲಾದಾಗ ಪಾತ್ರಗಳು ಕೂಡ ಬದಲಾಗುತ್ತವೆ. ಹಾಗೆಯೆ ಯಾವ ಪಾತ್ರವು ಶಾಶ್ವತವಲ್ಲ. ಅದೆ ಪಾತ್ರವು ಪ್ರತಿ ನಾಟಕದಲ್ಲಿ ಇರುವುದಿಲ್ಲ .

ಎಲ್ಲವೂ ಬದಲಾಗುವುದೇ , ಹಾಗೆಯೇ ಭೂಮಿಯ ಮೇಲೆ ಈಗ ಪ್ರತಿಯೊಬ್ಬರ ಪಾತ್ರವೂ ಕೂಡ. ಯಾರು ಹೇಗೆ ಇದ್ದಾರೋ ಹಾಗೆ ಶಾಶ್ವತವಾಗಿ ಇರುವುದಿಲ್ಲ, ಯಾರಿಗೆ ಏನು ಇದೆಯೋ ಅವು ಶಾಶ್ವತವಾಗಿ ಇರುವುದಿಲ್ಲ. ಎಲ್ಲವೂ ಆ ಪಾತ್ರವು ಇರುವಷ್ಟು ದಿನವೇ . ಮತ್ತೆ ಪಾತ್ರವು ಬದಲಾದರೆ ಅಂದರೆ ಜನ್ಮವು ಬದಲಾದರೆ ಎಲ್ಲವೂ ಬದಲಾಗುತ್ತವೆ.

ಆದ್ದರಿಂದ ಪತ್ರೀಜಿ "ಪಾತ್ರದಲ್ಲಿ ಜೀವಿಸು, ಅದರೆ ಅದು ಪಾತ್ರವೆಂದು ಮರೆಯಬೇಡ" ಎನ್ನುತ್ತಾರೆ. ಅಂದರೆ ಪಾತ್ರದಲ್ಲಿ ಲೀನವಾದ ಹಾಗೆ ನೋಡುವವರೆಗೆ ಕಾಣಿಸಬೇಕು, ಆದರೆ ತಾನು ಮಾತ್ರ ಪಾತ್ರದಲ್ಲಿ ಲೀನವಾಗಬಾರದು. ಏಕೆಂದರೆ ಆ ನಾಟಕದಲ್ಲಿ ಪೋಷಿಸುತ್ತಿರುವ ಪಾತ್ರವು ತಾನಲ್ಲ, ಅಂದರೆ ಗಂಡನಾಗಿ, ಹೆಂಡತಿಯಾಗಿ ನಿನ್ನ ಪಾತ್ರವನ್ನು ಪೋಷಿಸು, ಜೀವಿಸು. ಆದರೆ ನಾನು ಗಂಡನ ಪಾತ್ರವನ್ನು ಪೋಷಿಸುತ್ತಿದ್ದೇನೆ, ಹೆಂಡತಿ ಪಾತ್ರವನ್ನು ಪೋಷಿಸುತ್ತಿದ್ದೇನೆ ಎಂದು ಮರೆಯಬೇಡ.

ಪಾತ್ರವನ್ನು ಪೋಷಿಸುತ್ತಿದ್ದೇನೆ ಎಂದು ಭಾವಿಸುವವನು ದುಃಖ ಪಡುವುದಿಲ್ಲ, ದುಃಖ ಪಡುತ್ತಿರುವ ಹಾಗೆ ಕಾಣಿಸುತ್ತಾನೆ. ಹಾಗೆಯೆ ಜೀವನದಲ್ಲಿ ಗಂಡನು ದೂರವಾದರೂ, ಹೆಂಡತಿ ದೂರವಾದರೂ, ಮಗನು ದೂರವಾದರೂ ಅದರಲ್ಲಿ ಲೀನ–ವಾಗುವುದಿಲ್ಲ. ಕಾರಣ ಎಲ್ಲರದ್ದೂ ಪಾತ್ರಗಳೆ ಎನ್ನುವ ಸತ್ಯವು ತಿಳಿದಿದೆ. ಆದರೆ ನಿಜವೆಂದು ಕೊಳ್ಳುವವರು ಅಂತ್ಯವಿಲ್ಲದ ದುಃಖಕ್ಕೆ ಈಡಾಗುತ್ತಾರೆ. ನನ್ನ ಜೀವನವು ವ್ಯರ್ಥವೆಂದು ಅಂದುಕೊಳ್ಳುತ್ತಾರೆ, ಇನ್ನು ಜೀವಿಸಲಾರೆನು ಎಂದು ಒಂದೊಂದು ಸಾರಿ ಆತ್ಮಹತ್ಯೆಯನ್ನು ಕೂಡ ಮಾಡಿಕೊಳ್ಳಬೇಕೆಂದುಕೊಳ್ಳುತ್ತಾರೆ. ಆದ್ದರಿಂದ ಈ ವಿಷಯವನ್ನು ಆಲೋಚಿಸಬೇಕು. ಗುರುತಿಸಿಕೊಳ್ಳಿ, ನಾಟಕದಲ್ಲಿ ತಂದೆಯು ಹೋಗುತ್ತಿದ್ದಾನೆ ಆದರೆ, ತನ್ನ ತಂದೆಯು ಹೋಗುತ್ತಿಲ್ಲ, ಹಾಗೆಯೆ ನಾಟಕದಲ್ಲಿ ಮರಣಿಸುತ್ತಿದ್ದಾನೆ ಆದರೆ ಮರಣಿಸುತ್ತಿಲ್ಲ. ಇದು ಸತ್ಯ.

## ಮರಣಾನಂತರ ಜೀವನವು ಇದೆಯೇ?

ಮೊದಲು ನಾವು ಈ ವಿಷಯವನ್ನು ಆಲೋಚಿಸಬೇಕು. ನಾವು ಜೀವಿಸುವ ವಿಧಾನವು ಸರಿಯಾದದ್ದೇ? ಅಲ್ಲವೇ ? ಇದು ತಿಳಿಯಬೇಕೆಂದರೆ ಈ ವಿಷಯವನ್ನು ನಿರ್ಧರಿಸಿಕೊಳ್ಳಬೇಕು. ನಮಗೆ ಮರಣಿಸಿದ ನಂತರ ಜೀವನವು ಇದೆಯೇ? ಇಲ್ಲವೇ?

ಏಕೆಂದರೆ ನಮಗೆ ಮರಣಾನಂತರ ಜೀವನ ಇಲ್ಲದಿದ್ದರೆ ಈಗ ನಾವು ಜೀವಿಸುವ ವಿಧಾನ ಅಂದರೆ ನಮ್ಮ ನಡವಳಿಕೆ, ಕೆಲಸ, ಪ್ರವರ್ತನೆ, ಆಲೋಚಿಸುವ ವಿಧಾನ ಎಲ್ಲವೂ ಒಂದು ವಿಧವಾಗಿ ಸರಿಯಾದದ್ದೆ ಎಂದುಕೊಳ್ಳಬಹುದು. ಆದರೆ ಒಂದು ವೇಳೆ

ಮರಣಾನಂತರ ಜೀವನವು ಇದ್ದರೆ, ಪ್ರಸ್ತುತ ನಾವು ಜೀವಿಸುವ ವಿಧಾನವು ಸರಿಯಾದದ್ದು ಅಲ್ಲವೆಂದು ಖಚಿತವಾಗಿ ಹೇಳಬಹುದು.

ಏಕೆಂದರೆ ಪ್ರತಿಯೊಬ್ಬರೂ ಮರಣಿಸುವವರೆಗೂ ಆಲೋಚಿಸುತ್ತಿದ್ದಾರೆ. ಅಂದರೆ ಮರಣಿಸುವವರೆಗೂ ಸುಖವಾಗಿ ಇರಬೇಕೆಂದು, ಸಂತೋಷವಾಗಿ ಇರಬೇಕೆಂದು, ಯಾವ ಕೊರತೆಯೂ ಇಲ್ಲದೆ ಜೀವಿಸಬೇಕೆಂದು, ತಿಂಡಿಗೆ ,ಬಟ್ಟೆಗೆ, ಇರುವುದಕ್ಕೆ ಯಾವ ಕೊರತೆಯು ಬರಬಾರದೆಂದು, ಇರುವಷ್ಟು ಕಾಲ ಹಾಯಾಗಿ ಜೀವಿಸಬೇಕೆಂದು ಕೋರಿಕೊಳ್ಳುತ್ತಾರೆ, ಪ್ರಯತ್ನಿಸುತ್ತಾರೆ. ಹಾಗೆ ತಮ್ಮ ಸಮಯವನ್ನು, ಶಕ್ತಿಯನ್ನು, ಬುದ್ಧಿಯನ್ನು ಅಲ್ಲಿಯವರೆಗೆ ಉಪಯೋಗಿಸುತ್ತಿದ್ದಾರೆ ಅದಕ್ಕೂ ಮೀರಿ ಆಲೋಚಿಸುತ್ತಿಲ್ಲ. ಅಂದರೆ ಮರಣಿಸುವವರೆಗೂ ಚೆನ್ನಾಗಿದ್ದರೆ ಸಾಕೆಂದು ಕೊಳ್ಳುತ್ತಾರೆ. ಅಂದರೆ ಯಾವ ಬಾಧೆಗಳು, ಕಷ್ಟಗಳು ಇಲ್ಲದೆ ಹೊರಟು ಹೋದರೆ ಸಾಕು ಎಂದುಕೊಳ್ಳುತ್ತಾರೆ, ಯಾರ ಮೇಲೆಯೂ ಆಧಾರ ಪಡದೆ, ಯಾರ ಕೈಯಲ್ಲಿ ಮಾಡಿಸಿಕೊಳ್ಳದೆ ಇರಬೇಕೆಂದು ಕೋರಿಕೊಳ್ಳುತ್ತಾರೆ. ಅಂದರೆ ಈಗಿನ ಜೀವನ ಸಂಸಾರ ಆನಂದವಾಗಿದ್ದರೆ ಸಾಕು ಎಂದು ಭಾವಿಸುತ್ತಾರೆ.

ಸ್ವಲ್ಪ ಆಲೋಚಿಸಿದರೆ ಈ ಜೀವನ ಅಲ್ಲದೆ ಮರಣಾನಂತರ ಜೀವನವು ಕೂಡ ಇದ್ದರೆ, ಆ ಜೀವನವೂ ಕೂಡ ಚೆನ್ನಾಗಿರಬೇಕು ಅಲ್ಲವೆ? ಆ ಜೀವನವೂ ಕೂಡ ಆನಂದವಾಗಿ ಇರಬೇಕಲ್ಲವೆ? ಮತ್ತೆ ಹಾಗಿರುವಾಗ ಆ ಜೀವನದ ಬಗ್ಗೆ ಆಲೋಚಿಸದೆ ಹೋಗುವುದು ತಪ್ಪಲ್ಲವೆ? ಹಾಗೆ ಆಲೋಚಿಸದೆ ಜೀವಿಸುವುದು ಸರಿಯಾದ ಮಾರ್ಗದಲ್ಲಿ ಜೀವಿಸದೆ ಹೋಗುವುದಲ್ಲವೆ? ಈಗಿರುವ ಜೀವನದ ಬಗ್ಗೆ ಹೇಗೆ ತಪಿಸುತ್ತಿದ್ದೇವೋ ನಂತರ ಇರುವುದು ಕೂಡ ನಮ್ಮ ಜೀವನವಲ್ಲವೆ ಮತ್ತೆ ಅದರ ಬಗ್ಗೆ ಏಕೆ ಆಲೋಚಿಸುತ್ತಿಲ್ಲ? ಆ ಜೀವನವು ಕೂಡ ಚೆನ್ನಾಗಿರಬೇಕೆಂದು ಏಕೆ ಪ್ರಯತ್ನಿಸುತ್ತಿಲ್ಲ? ಹಾಗೆ ಪ್ರಯತ್ನಿಸದೆ ಹೋದರೆ ನಂತರ ಶೋಚನೀಯವಾದ ಜೀವನವನ್ನು ಕಳೆಯಬೇಕಾಗಿ ಬರುತ್ತದಲ್ಲವೆ? ಆದ್ದರಿಂದ ಯಾರಾದರೂ ಮೊದಲು ಈ ವಿಷಯವನ್ನು ನಿರ್ಧರಿಸಿಕೊಳ್ಳಬೇಕು.

ಮರಣಾನಂತರ ಜೀವನವು ಇದೆ ಅಥವಾ ಇಲ್ಲ ಎನ್ನುವುದು ನಮಗೆ ತಿಳಿಯಬೇಕೆಂದರೆ ನಮಗಿಂತಲೂ ಜ್ಞಾನದಲ್ಲಿ ಶ್ರೇಷ್ಠರಾದವರನ್ನು ಆರಿಸಿಕೊಳ್ಳಬೇಕು, ಅವರಿಂದ ಈ ಸಂದೇಹವನ್ನು ಪರಿಹರಿಸಿಕೊಳ್ಳಬೇಕು. ಮುಖ್ಯವಾಗಿ ನಾವೆಲ್ಲರೂ ಶ್ರೀ ಕೃಷ್ಣನನ್ನು ಪೂಜಿಸುತ್ತಿದ್ದೇವೆ, ಭಗವಂತನನ್ನು ಆರಾಧಿಸುತ್ತಿದ್ದೇವೆ. ಮತ್ತೆ ಭಗವಂತನಿಗೆ ತಿಳಿಯದೆ ಇರುವುದು ಏನೂ ಇರುವುದಿಲ್ಲ . ಆತನು ಹೇಳಿದ್ದೆಲ್ಲವೂ ಸತ್ಯ. ಆತನು ಭಗವದ್ಗೀತೆಯಲ್ಲಿ ಎಷ್ಟೋ ಸಂದರ್ಭದಲ್ಲಿ ಸ್ಪಷ್ಟವಾಗಿ ಮರಣಾ ನಂತರ ಜೀವನವು ಇದೆ ಎಂದು ತಿಳಿಸಿದ್ದಾರೆ.

1. ಹುಟ್ಟಿದವನು ಮರಣಿಸಬೇಕು,ಮರಣಿಸಿದವನು ಹುಟ್ಟಬೇಕು. (ಭ.ಗಿ.2–27)

2. ಮಾನವನು ಹರಿದು ಹೋದ ವಸ್ತ್ರಗಳನ್ನು ತೆಗೆದು ಹೊಸ ವಸ್ತುಗಳನ್ನು ಹೇಗೆ ಧರಿಸುತ್ತಾನೆ ಹಾಗೆ ಜೀರ್ಣವಾದ ದೇಹವನ್ನು ಬಿಟ್ಟು ಹೊಸ ದೇಹವನ್ನು ಧರಿಸುತ್ತಾನೆ. (ಭ.ಗಿ.2–22)

3. ಅರ್ಜುನ ನನಗೂ ನಿನಗೂ ಎಷ್ಟೋ ಜನ್ಮಗಳು ಕಳೆದಿವೆ, ಅವೆಲ್ಲವೂ ನಿನಗೆ ತಿಳಿಯದು , ಆದರೆ ನನಗೆ ತಿಳಿದಿದೆ. (ಭ.ಗಿ.4–5)

ಶ್ರೀಕೃಷ್ಣ ಭಗವಾನನು ಹೇಳಿದ್ದನ್ನು ನೋಡಿದರೆ ನಮಗೆ ಮರಣಾ ನಂತರ ಜೀವನವು ಖಚಿತವಾಗಿ ಇದೆಯೆಂದು ತಿಳಿಯುತ್ತದೆ. ಆದ್ದರಿಂದ ಮರಣಾ ನಂತರ ಜೀವನದ ಬಗ್ಗೆ ನಾವು ಆಲೋಚಿಸಬೇಕು.

ಮರಣದ ನಂತರ ಏನಾಗುತ್ತದೆ? ಎಲ್ಲಿಗೆ ಹೋಗುತ್ತೇವೆ? ಯಾವ ಲೋಕಗಳಿಗೆ ಹೋಗುತ್ತೇವೆ, ಎಷ್ಟು ದಿನ ಇರುತ್ತೇವೆ? ಅಲ್ಲಿ ಏನು ಮಾಡುತ್ತೇವೆ? ಮತ್ತೆ ಏಕೆ ಬರುತ್ತೇವೆ? ಯಾವಾಗ ಬರುತ್ತೇವೆ? ಎಲ್ಲಿಗೆ ಬರುತ್ತೇವೆ? ಯಾವ ಪ್ರಾಂತ್ಯದಲ್ಲಿ ಹುಟ್ಟುತ್ತೇವೆ? ಯಾವ ಕುಲದಲ್ಲಿ, ಯಾವ ಮತದಲ್ಲಿ ಹುಟ್ಟುತ್ತೇವೆ? ಭಗವಂತನಾಗಿ, ಬಡವನಾಗಿ, ಸುಂದರನಾಗಿ ಅಂಗವಿಕಲತೆ ಯಿಂದಲೇ... ಇವೆಲ್ಲವೂ ಹೇಗೆ ತಿಳಿಯುತ್ತದೆ? ಇಂತಹವುಗಳ ಬಗ್ಗೆ ಆಲೋಚಿಸಬೇಕು. ಅದಕ್ಕಾಗಿ ಸ್ವಲ್ಪ ಸಮಯವನ್ನು ಮೀಸಲಿಡಬೇಕು. ಹಾಗೆ ಜೀವಿಸಿದವರು ಸರಿಯಾಗಿ ಜೀವಿಸಿ ದವರಾಗುತ್ತಾರೆ. ಇಲ್ಲದೆ ಹೋದರೆ ಈ ಜೀವನವು ಚೆನ್ನಾಗಿರಬಹುದು, ವೈಭವದಿಂದ ಕಳೆಯಬಹುದು, ಆದರೆ ನಂತರದ ಜೀವನ ದುರ್ಭರವಾಗುತ್ತದೆ. ಕಷ್ಟಪಟ್ಟರೂ, ರೋಧಿಸಿದರು ಪ್ರಯೋಜನವಿರುವುದಿಲ್ಲ .


ಹಾಗೆಯೆ ಕಳೆದ ಜನ್ಮದಲ್ಲಿ ಆಲೋಚಿಸದೆ ಜೀವಿಸಿ, ಪ್ರಸ್ತುತ ದುರ್ಭರ ಜೀವನವನ್ನು ಅಂದರೆ ಭಿಕ್ಷುಕನಾಗಿ, ಕುಷ್ಟರೋಗಿಯಾಗಿ, ಅಂಗವಿಕಲತೆಯಿಂದ ಕಷ್ಟಗಳಿಂದ, ಬಾಧೆಗಳಿಂದ, ಜೀವಿಸುತ್ತಿರುವವರು ಎಷ್ಟೋ ಜನರಿದ್ದಾರೆ. ಅವರೆಲ್ಲರೂ "ಹಿಂದೆ ಮಾಡಿದ ಪಾಪ" ಎಂದು ಬಾಧೆ ಪಡುತ್ತಾ ಜೀವಿಸುತ್ತಿದ್ದಾರೆ. ಅವರೆಲ್ಲರೂ ಈಗ ಇಷ್ಟು ಬಾಧೆಯನ್ನು ಏಕೆ ಅನುಭವಿಸುತ್ತಿದ್ದಾರೆ ಎಂದರೆ ಹೋದ ಜನ್ಮದಲ್ಲಿ ಪ್ರಸ್ತುತ ಜೀವನದ ಕುರಿತು ಆಲೋಚಿಸದೆ ಹೋಗಿದ್ದರಿಂದ! ಈಗಿನ ಜೀವನದ ಬಗ್ಗೆ ಏನೂ ಮಾಡದಿರುವುದರಿಂದ ಆದ್ದರಿಂದ ಮರಣಾ ನಂತರ ಜೀವನದ ಕುರಿತು ಖಚಿತವಾಗಿ ಆಲೋಚಿಸಬೇಕು. ಅದು ಕೂಡ ನನ್ನ ಜೀವನವೆಂದು ತಿಳಿದುಕೊಳ್ಳಬೇಕು.

ಮರಣಾನಂತರ ಜೀವನದ ಕುರಿತು ಏನು ಮಾಡಬೇಕು? ಮರಣಾ ನಂತರ ಜೀವನವನ್ನು ಆನಂದಮಯವಾಗಿ ಮಾಡಿಕೊಳ್ಳುವ ಸಾಧನ "ಧ್ಯಾನ". ಧ್ಯಾನವನ್ನು ಯಾರು ಮಾಡುತ್ತಾರೋ ಅವರು ಈ ಜೀವನದಲ್ಲಿ ಅಲ್ಲದೆ ಮರಣಾನಂತರ ಜೀವನದಲ್ಲಿ

ಕೂಡ ಆನಂದವಾಗಿ ಜೀವಿಸುತ್ತಾರೆ. ಆದ್ದರಿಂದ ಸ್ವಲ್ಪ ಸಮಯವನ್ನು 'ಧ್ಯಾನಕ್ಕಾಗಿ' ಮೀಸಲಿಡಬೇಕು.

ಆಲೋಚಿಸಿದರೆ ಈಗಿರುವ ಜೀವನ ಸ್ವಲ್ಪ. ಮರಣಾನಂತರ ಜೀವನವು ಅನಂತ. ಬುದ್ಧಿವಂತನಾದವನು ಅಂತ್ಯವಾಗುವ ಜೀವನಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಾನೆ, ಹೆಚ್ಚು ಸಮಯವನ್ನು ಮೀಸಲಿಡುತ್ತಾನೆ. ಜೀವನಕ್ಕೆ ಸ್ವಲ್ಪ ಸಮಯವನ್ನು ಮೀಸಲಿಡುತ್ತಾನೆ .ಆದ್ದರಿಂದ ಮರಣಾನಂತರ ಜೀವನಕ್ಕೆ ಸಂಬಂಧಿಸಿದ ಧ್ಯಾನ ಸಾಧನೆಗೆ ಹೆಚ್ಚಿನ ಸಮಯವನ್ನು ಮೀಸಲಿಡೋಣ.

ಯೋಗಿಗಳು ಈ ರಹಸ್ಯವನ್ನು ತಿಳಿದುಕೊಂಡರು ಆದ್ದರಿಂದ ಅವರು ಇರುವ ಜೀವನಕ್ಕೆ ಪ್ರಾಮುಖ್ಯತೆಯನ್ನು ಕೊಡಲಿಲ್ಲ. ಅವರ ಜೀವನವೆಲ್ಲ ಧ್ಯಾನಕ್ಕೆ... ಭೋಗಕ್ಕೆ ಪ್ರಾಮುಖ್ಯತೆ ಕೊಡದೆ, ಶಾರೀರಿಕ ಅಗತ್ಯಕ್ಕೆ ಮಾತ್ರ ಪರಿಮಿತವಾದ ಪ್ರಾಮುಖ್ಯತೆಯನ್ನು ಕೊಟ್ಟು ಜೀವನವೆಲ್ಲ ಧ್ಯಾನ ಸಾಧನೆಗೆ ಮೀಸಲಿಟ್ಟು ಧನ್ಯರಾದರು. ಆದ್ದರಿಂದ ಪ್ರತಿಯೊಬ್ಬರೂ ಮರಣಾನಂತರ ಜೀವನವಿದೆ ಎಂದು ತಿಳಿದುಕೊಳ್ಳಬೇಕು. "ಧ್ಯಾನ ಸಾಧನೆ" ಮಾಡಬೇಕು.



## ಅಧರ್ಮ– ಧರ್ಮ– ಸತ್ಯ 0–50–100

**"ನಾವು ಅಧರ್ಮದಲ್ಲಿ ಜೀವಿಸಿದರೆ ನಮ್ಮ ಅಂಕ ಸೊನ್ನೆ"**

**ಅಧರ್ಮದಲ್ಲಿ ಜೀವಿಸುವುದು ಅಂದರೆ ಹಿಂಸೆಯಲ್ಲಿ ಜೀವಿಸುವುದು** ಅಂದರೆ ಸಕಲ ಪ್ರಾಣಿಗಳನ್ನು ಹಿಂಸೆಗೆ ಗುರಿ ಮಾಡವುದು, ಆಹಾರಕ್ಕಾಗಿ ಪ್ರಾಣಿಗಳನ್ನು, ಪಕ್ಷಿಗಳನ್ನು, ಮೀನನ್ನು ಸಾಯಿಸಿ ಅವುಗಳ ಮಾಂಸವನ್ನು ಬೇಯಿಸಿ ತಿನ್ನುವುದೆಂದರೆ, ದ್ವೇಷಕ್ಕಾಗಿ ಮನುಷ್ಯರನ್ನು ಸಾಯಿಸುವುದು ಅಂದರೆ, ಭರಿಸಲಾರದ ಪರಿಸ್ಥಿತಿಯಲ್ಲಿ ಆತ್ಮಸ್ಥೈರ್ಯವನ್ನು ಕಳೆದುಕೊಂಡಾಗ ಆತ್ಮಹತ್ಯೆಯನ್ನು ಮಾಡಿಕೊಂಡರೆ, ಎಂತಹ ಪರಿಸ್ಥಿತಿಯಲ್ಲಾದರೂ ಸರಿಯೆ.... ಆತ್ಮಹತ್ಯೆಯನ್ನು ಮಾಡಿಕೊಳ್ಳುವುದು ಪೂರ್ಣವಾಗಿ ಅಧರ್ಮ ಚರ್ಯೆ ಶಾಕಾಹಾರಿ ಆಗದೆ , ಹಿಂಸಾವಾದಿಯಾದಾಗ ಎಂತಹ ಪ್ರಾಪಂಚಿಕ ಪಂಡಿತನಿಗೂ ಬರುವ ಅಂಕಗಳು "ಸೊನ್ನೆ".

ಆಧರ್ಮದಲ್ಲಿ ಜೀವಿಸಿದರೆ ನಮಗೆ ಬರುವ ಅಂಕಗಳು "ಸೊನ್ನೆ", ಧರ್ಮದಲ್ಲಿ ಜೀವಿಸಿದರೆ ನಮಗೆ ಬರುವ ಅಂಕಗಳು 'ಐವತ್ತು"

**"ಧರ್ಮದಲ್ಲಿ ಜೀವಿಸುವುದೆಂದರೆ ಅಹಿಂಸೆಯಲ್ಲಿ ಜೀವಿಸುವುದು"** ಅಂದರೆ ಎಲ್ಲಾ ಪ್ರಾಣಿಗಳ ಭೌತಿಕ ಕಾಯಗಳ ಕಡೆ ಯಾವ ಆಘಾತವನ್ನು ಮಾಡದಿರುವುದು ಅಂದರೆ, ಆಹಾರಕ್ಕಾಗಿ ಪ್ರಾಣಿಗಳನ್ನು, ಪಕ್ಷಿಗಳನ್ನು, ಮೀನನ್ನು ಸಾಯಿಸದೆ ಮನುಷ್ಯರನ್ನು ಸಾಯಿಸದೆ ಇರುವುದು.. , ಭರಿಸಲಾರದ ದೀನ ಪರಿಸ್ಥಿತಿಯಲ್ಲಿ ಕೂಡ ಆತ್ಮಹತ್ಯೆಯನ್ನು ಮಾಡಿಕೊಳ್ಳದೆ ಇರುವುದು ಆದರೆ, ವಿಧಿ ಇಲ್ಲದ ಪರಿಸ್ಥಿತಿಯಲ್ಲಿ...ಸ್ವಯಂ ರಕ್ಷಣೆಗೋಸ್ಕರ ಸಾಯಿಸುವುದು ಕೂಡ ಧರ್ಮಯುತವಾದ ಚರ್ಯೆ ಆಗುತ್ತದೆ. ಸ್ವಯಂ ಪ್ರಾಣ ರಕ್ಷಣೆಗಾಗಿ ಕ್ರೂರ ಪ್ರಾಣಿಗಳನ್ನು ಸಾಯಿಸುವುದು ಅಥವಾ ಮನುಷ್ಯರನ್ನು ಸಾಯಿಸುವುದು ಎನ್ನುವುದು ಅಧರ್ಮ ಆಗುವುದಿಲ್ಲ ಅದು ಆಪದ್ಧರ್ಮ ಆಗುತ್ತದೆ.

**"ಸ್ವಯಂ ರಕ್ಷಣೆಗಾಗಿ ಸಾಯಿಸುವುದು ಧರ್ಮಯುತವಾದ ಚರ್ಯೆ"** ಆಗಿದ್ದರಿಂದ ಅಲ್ಲಿ "ಐವತ್ತು ಅಂಕಗಳು" ಖಂಡಿತ ಬರುತ್ತದೆ. ಆದರೆ ಜೀವನದಲ್ಲಿ "ನೂರು ಅಂಕಗಳು" ಬರಬೇಕೆಂದರೆ... "ಅಹಂ ಬ್ರಹ್ಮಾಸ್ಮಿ" ಎನ್ನುವ ಸತ್ಯ ಅರ್ಥವಾಗಬೇಕು. "ನಾವು ಭೂಮಿಗೆ ಇಳಿದು ಬಂದ ಆತ್ಮಸತ್ಯ ತಿಳಿದ ದೇವರುಗಳು" ಎನ್ನುವ ಸತ್ಯವನ್ನು ತಿಳಿದುಕೊಳ್ಳಬೇಕು.

"ನಮ್ಮ ಆತ್ಮ ಅನಂತವಾದದ್ದು, ಶಾಶ್ವತವಾದದ್ದು" ಎನ್ನುವ **ಸತ್ಯವನ್ನು** ತಿಳಿದುಕೊಳ್ಳಬೇಕು. ನಮ್ಮ "ಆತ್ಮದ ಸಮಯ(ಪರಿಧಿರಾಹಿತ್ಯ)" ಮತ್ತು

" ವ್ಯಾಪ್ತಿ (ಪರಿಧಿರಹಿತ)" ಎನ್ನುವುದು ಅರ್ಥವಾದಾಗ **ತಿಳಿದು ತಿಳಿಯದ ಆತ್ಮ ದೇವರುಗಳಾದ ನಾವು ಆತ್ಮ ಸಾಕ್ಷಾತ್ಕಾರವನ್ನು ಹೊಂದಿದ ಆತ್ಮಸತ್ಯವುಳ್ಳ ದೇವರು** ಗಳಾಗಿ ಬದಲಾಗುತ್ತೇವೆ. ಅಷ್ಟೇ ಅಲ್ಲದೆ... "ನಮ್ಮ ಜೀವನ ವಾಸ್ತವಗಳಿಗೆ... **ಜನ್ಮಕ್ಕೂ ಪೂರ್ವ** ಮತ್ತು **ಜನ್ಮದ ನಂತರ...** ನಾವು ಸ್ವಯಂ ಪ್ರಣಾಳಿಕಾ ಬದ್ಧವಾಗಿ ಸಂಕಲ್ಪಿಸಿದ ಆಯ್ಕೆಗಳೆ " ಎನ್ನುವ ಸತ್ಯವನ್ನು ಕೂಡ ತಿಳಿದುಕೊಳ್ಳಬೇಕು. "ಆನಾಪಾನಸತಿ– ಶ್ವಾಸಾನುಸಂಧಾನ ದಿಂದಲೇ ಧ್ಯಾನ– ಸಮಾಧಿ ಸ್ಥಿತಿ ಲಭ್ಯ" ಎನ್ನುವ ಸತ್ಯವನ್ನು ಕೂಡ ಅನುಭವಪೂರ್ವಕವಾಗಿ ತಿಳಿದುಕೊಳ್ಳಬೇಕು. ಆಗಲೇ ಜೀವನದಲ್ಲಿ "ನೂರು ಅಂಕಗಳು" ಬರುತ್ತವೆ.

"ಸೊನ್ನೆ ಅಂಕಗಳು"= ಅಧರ್ಮ+ಅಸತ್ಯ "ಐವತ್ತು ಅಂಕಗಳು"= ಧರ್ಮ+ ಅಸತ್ಯ "ನೂರು ಅಂಕಗಳು"= ಧರ್ಮ +ಸತ್ಯ

**ನೂರು ಅಂಕಗಳ ಸ್ಥಿತಿಯಲ್ಲಿದ್ದಾಗ :–**

1. ಹಿಂಸೆ ಎನ್ನುವುದನ್ನು ಕನಸಿನಲ್ಲಿ ಕೂಡ ಮಾಡುವುದಿಲ್ಲ.
2. "ನಾವು ದಿವಿಯಿಂದ ಭುವಿಗೆ ಇಳಿದು ಬಂದ ಆತ್ಮಸತ್ಯ ತಿಳಿದ ದೇವರುಗಳು ಎಂದು ಪೂರ್ತಿಯಾಗಿ ಅರ್ಥ ಆಗುತ್ತದೆ.
3. "ನಮ್ಮ ವಾಸ್ತವಗಳಿಗೆ ನೂರಿಗೆ ನೂರು ಪರ್ಸೆಂಟ್ ಸ್ವಯಂ ಆಯ್ಕೆಗಳೆ ಕಾರಣ " ಎಂದು ತಿಳಿಯುತ್ತದೆ.

4. "ಆನಾಪಾನಸತಿ ಧ್ಯಾನ" ಅತ್ಯಂತ ಸಂತೋಷಕರವಾದ ದೈನಂದಿನ ಹವ್ಯಾಸವಾಗಿ ಇರುತ್ತದೆ.

ಇದೆ ಅಧರ್ಮದಿಂದ – ಧರ್ಮದೆಡೆಗೆ – ಧರ್ಮದಿಂದ ಸತ್ಯದೆಡೆಗೆ ಎನ್ನುವ ವಿಷಯಗಳಿಗೆ ಮೂಲ ಪ್ರವಚನ ಅದನ್ನೇ ಸೊನ್ನೆ –ಐವತ್ತು– ನೂರು ಎನ್ನುವ ಪಿರಮಿಡ್ ಫೀಲಾಸಫಿ ಕಾನ್ಸೆಪ್ಟ್ ಎನ್ನುತ್ತೇವೆ

– ಬ್ರಹ್ಮರ್ಷಿ ಪತ್ರೀಜಿ

## ಇರುವುದೆಲ್ಲಾ ಸತ್ಯವೇ

ಅನಾದಿಯಾಗಿ "ಚಾರ್ವಾಕ ಸಿದ್ಧಾಂತ" ವು ಅಂದಿನ ಕಮ್ಯುನಿಸ್ಟ್ ರ ನಾಸ್ತಿಕ ಪರಿಭಾಷೆ ಹಾಗೂ ಹೇತುವಾದವಾಗಿತ್ತು . "ಜಗತ್ ಸತ್ಂ....ಬ್ರಹ್ಮ ಮಿಥ್ಯ...ಜೀವೋ ಜಗದ್ಯೆವ ನಾ ಪರ:" ಎನ್ನುತ್ತದೆ. ಅಂದರೆ "ಈ ಕಣ್ಣಿಗೆ ಕಾಣಿಸುವ ಜಗತ್ತೇ ಸತ್ಯ....



ಈ ಚರ್ಮ ಚಕ್ಷುವಿಗೆ ಕಾಣದಿರುವುದು ಇನ್ನೂ ಏನೋ ಇದೆ ಎಂದುಕೊಳ್ಳುವುದು ಭ್ರಮೆ.... ಜೀವಾತ್ಮ ಅಂದರೆ ಈ ಕಣ್ಣಿಗೆ ಕಾಣಿಸುವ ಬೌತಿಕ ಶರೀರ. ಅದಕ್ಕಿಂತಲೂ ಬೇರೆ ಏನು ಇಲ್ಲ. ಮರಣಿಸಿದ ನಂತರ ಶರೀರದಿಂದ ಬೇರ್ಪಟ್ಟ ಆತ್ಮಪದಾರ್ಥವೆನ್ನುವುದು ಏನೂ ಇಲ್ಲ ಎಂಬುವುದು ಅವರ ಭಾವನೆ.ಆದರೆ ಇದಕ್ಕೆ ಭಿನ್ನವಾಗಿ ಆಸ್ತಿಕ ವಾದಿಗಳು ಒತ್ತಿ ಹೇಳಲ್ಪಟ್ಟಿರುವ ಸೂತ್ರವೆಂದರೆ, ಜಗತ್ ಮಿಥ್ಯ... ಬ್ರಹ್ಮೈವ ನಾ ಪರ: ಅಂದರೆ ಈ ಕಣ್ಣಿಗೆ ಕಾಣುವ ಜಗತ್ತು ಅಸ್ತಿತ್ವದಲ್ಲಿ ಇಲ್ಲದಿರುವುದು ಕಣ್ಣಿಗೆ ಕಾಣದಿರುವ ಅಸ್ತಿತ್ವವೇ ನಿಜವಾದ ಚೈತನ್ಯವನ್ನು ಹೊಂದಿದೆ.

"ಜೀವಾತ್ಮ" ಎಂದರೆ ಕೇವಲ ಭೌತಿಕ ಪದಾರ್ಥವಲ್ಲ...

"ಜೀವಾತ್ಮ" ಎಂದರೆ ಆ ಬ್ರಹ್ಮ...ಹಾಗೂ ಸೃಷ್ಟಿಯ ವ್ಯಾಪ್ತಿಯಲ್ಲಿರುವ ಆತ್ಮಪದಾರ್ಥ " "ಭೌತಿಕ ಕಾಯ ಅಳಿದ ನಂತರ ಆತ್ಮವು ಇರುತ್ತದೆ" ಎನ್ನುವುದೇ "ಆಸ್ತಿಕ ಪರಿಭಾಷೆ" ಇದಕ್ಕೂ ಕೂಡ ಪ್ರತ್ಯಯವಾಗಿ ಇನ್ನೊಂದು ಪರಿಭಾಷೆ ಕೂಡ ಇದೆ.

ಅದೇ "ಭೌದ್ಧಿಕ ಪರಿಭಾಷೆ"

ಭೌದ್ಧಿಕ ಪರಿಭಾಷೆ... ಜಗತ್ ಶೂನ್ಯ... ಬ್ರಹ್ಮ ಶೂನ್ಯ...ಜೀವೋ ಶೂನ್ಯೈವ ನಾ ಪರ:" ಎನ್ನುತ್ತದೆ.

ಅಂದರೆ "ಈ ಜಗತ್ತೆಲ್ಲವೂ ಶೂನ್ಯವೇ... ಬ್ರಹ್ಮವೂ ಶೂನ್ಯವೇ ಹಾಗೂ ಅದರಲ್ಲಿರುವ ಜೀವಾತ್ಮ ಕೂಡ ಮಹಾಶೂನ್ಯವೇ... ಅಷ್ಟೇ ಹೊರತು ಬೇರೇನೂ ಇಲ್ಲ" ಈ ಮೂರು ಭಿನ್ನ ವಿಭಿನ್ನ ದೃಕ್ಪಥಗಳು ಎಷ್ಟೋ ರೀತಿಯಾಗಿ...ಎಷ್ಟೋ ವಿಧವಾಗಿ ಎಷ್ಟೋ ಜನರಿಗೆ ಉಪಯೋಗವಾಗಿವೆ. ಎಷ್ಟೋ ಜನರನ್ನು ಶಾಂತ ಪಡಿಸಿವೆ...ಮತ್ತೇ ಎಷ್ಟೋ ಜನರನ್ನು ಕಲ್ಲೋಲ ಪಡಿಸಿದ್ದೂ ಇದೆ...

ಆದರೆ ನಿಜವಾದ ಪಿರಮಿಡ್ ಸಿದ್ಧಾಂತ ಮಾತ್ರ

ಜಗತ್ ಸತ್ಯಂ...ಬ್ರಹ್ಮ ಸತ್ಯಂ..ಜೀವೋ ದ್ವಯಮಪಿ ನಾ ಪರ:" ಬರಹ ಅನ್ನುತ್ತದೆ.

ಅಂದರೆ... " ಶರೀರದ ಜೊತೆ ಈ ಕಣ್ಣಿಗೆ ಕಾಣಿಸುವ ಜಗತ್ತು, ಕಣ್ಣಿಗೆ ಕಾಣಿಸಿದ ಚೈತನ್ಯ ಹಾಗೂ ಅನೇಕಾನೇಕ ಲೋಕಗಳು ಕೂಡ ಸತ್ಯವೇ.... ಈ "ಜೀವಾತ್ಮ"...ನೇ ಏಕಕಾಲದಲ್ಲಿ ಎರಡೂ ಆಗಿರುತ್ತಾನೆ.

–ಬ್ರಹ್ಮರ್ಷಿ ಪತ್ರೀಜಿ

# ಭಕ್ತೋಪನಿಷತ್




## ಭಕ್ತಿ ಉನ್ನತವಾದದ್ದು

ನಮ್ಮ ಶರೀರದ ಆರೋಗ್ಯದ ಕುರಿತಾಗಿ ನಾವು ಭಕ್ತಿಯನ್ನು ಹೊಂದಿರಬೇಕು
ನಮ್ಮ ಮನೋರಂಜನೆಗಾಗಿ ನಾವು ಭಕ್ತಿಯನ್ನು ಹೊಂದಿರಬೇಕು
ನಮ್ಮ ಬುದ್ಧಿ ವಿಕಾಸದ ಕುರಿತಾಗಿ ನಾವು ಭಕ್ತಿಯನ್ನು ಹೊಂದಿರಬೇಕು
ನಮ್ಮ ನಿರಂತರ ಧ್ಯಾನಭ್ಯಾಸದ ಕುರಿತಾಗಿ ನಾವು ಭಕ್ತಿಯನ್ನು ಹೊಂದಿರಬೇಕು
ನಮ್ಮ ಆತ್ಮ ಅನುಭವಗಳ ಮೇಲೆ ನಾವು ಭಕ್ತಿಯನ್ನು ಹೊಂದಿರಬೇಕು
ನಮ್ಮ ವರ್ತಮಾನದ ಅರಿವಿನ ಮೇಲೆ ನಮ್ಮ ಭಕ್ತಿ ಇರಬೇಕು
ಯಮ ನಿಯಮಾದಿಗಳೆಲ್ಲದರ ಮೇಲೆ ನಮ್ಮ ಭಕ್ತಿ ಇರಬೇಕು
ನಮ್ಮ ದಿನವಹಿ, ದೈನಂದಿನ ಕುಟುಂಬ ಕರ್ತವ್ಯ ಕಾರ್ಯಕ್ರಮಗಳ ಮೇಲೆ ನಾವು ಭಕ್ತಿಯನ್ನು ಹೊಂದಿರಬೇಕು.
ಸಕಲ ವಿದ್ಯೆಗಳ ಮೇಲೆ ಸಕಲಕಲೆಗಳ ಮೇಲೆ ನಮ್ಮ ಭಕ್ತಿ ಇರಬೇಕು.
ಸೃಷ್ಟಿಯ ಅದ್ಭುತ ರಚನೆಯ ಮೇಲೆ ನಮ್ಮ ಭಕ್ತಿ ಇರಬೇಕು.
ವಿಶ್ವದಲ್ಲಿರುವ ಎಲ್ಲ ಯೋಗೇಶ್ವರರ ಮೇಲೆ ನಾವು ಭಕ್ತಿಯನ್ನು ಹೊಂದಿರಬೇಕು.
ನಮ್ಮ ಸಹವರ್ತಿಗಳಾದ ಮಾನವರ ಮೇಲೆ ಭಕ್ತಿಯನ್ನು ಹೊಂದಿರಬೇಕು.
ಎಲ್ಲರ ಆರೋಗ್ಯದ ಕುರಿತಾಗಿ ನಾವು ಭಕ್ತಿಯನ್ನು ಹೊಂದಿರಬೇಕು.
ಸಕಲ ಪ್ರಾಣಿ ಸಾಮ್ರಾಜ್ಯದ ರಕ್ಷಣೆ ಪೋಷಣೆಗಳ ಮೇಲೆ ಭಕ್ತಿಯನ್ನು ಹೊಂದಿರಬೇಕು.
ಸಮಸ್ತ ಭೂ ಪ್ರಕೃತಿಯ ಮೇಲೆ ಭಕ್ತಿ ಭಾವನೆಯನ್ನು ಹೊಂದಿರಬೇಕು.
ವಾತಾವರಣವನ್ನು ಕಲುಷಿತ ಮಾಡಬಾರದು.
ವಾತಾವರಣದ ಸಹಜ ಸ್ಥಿತಿಗಳನ್ನು ರಕ್ಷಿಸುತ್ತಾ ಇರಬೇಕು.
ಇದು ಭಕ್ತಿ ಯೋಗಹಃ। ಇತಿ ಭಕ್ತಿ ಸಿದ್ಧಾಂತಃ
ಭಕ್ತಿ ತುಂಬಾ ಉನ್ನತವಾದದ್ದು!ಭಕ್ತಿಯನ್ನು ಹೊಂದೋಣ!!

**–ಬ್ರಹ್ಮರ್ಷಿ ಪತ್ರೀಜಿ**

# ಮೂರು ಸತ್ಯಗಳು



"ನಾವು ಬಯಸಿದ್ದು ನಮಗೆ ಸಿಗುವುದಿಲ್ಲ.. ನಮಗೆ ಅರ್ಹತೆ ಇರುವಷ್ಟು ಲಭಿಸುತ್ತದೆ"

ಯಾವುದನ್ನು ನಾವು ಆಶಿಸುತ್ತಾ ಬಯಸುತ್ತಾ ಇರುವೆವೋ ಅವೆಲ್ಲವೂ ನಮ್ಮದಾಗುವುದಿಲ್ಲ. ವಾಸ್ತವಕ್ಕೆ ಯಾವುದನ್ನು ಹೊಂದಲಿಕ್ಕೆ ನಾವು ಅರ್ಹತೆ ಹೊಂದಿರುವೆವೋ, ಅವುಗಳನ್ನೇ ನಾವು ಹೊಂದುತ್ತಿದ್ದೇವೆ.

ಇನ್ನು ಮುಂದಕ್ಕೆ ಹೋಗಿ ಇನ್ನಷ್ಟು ಆಳವಾದ ಎರಡನೆಯ ಸತ್ಯವನ್ನು ತಿಳಿದುಕೊಳ್ಳೋಣ

"ಅರ್ಹವಾದದ್ದು ಸಿಗದೇ ಇರಬಹುದು ಆದರೆ ನಮ್ಮ ನಿಜವಾದ ಅಗತ್ಯಗಳು ಮಾತ್ರ ತಪ್ಪದೇ ನೆರವೇರುತ್ತದೆ "

"ನಾನು.... ಎಂದರೆ ಈ ಕಾಣಿಸುವ ಭೌತಿಕ ಶರೀರ ಮಾತ್ರ" ಎನ್ನುವ ಭ್ರಮೆಯಿಂದ " 'ನಾನು' ಅಂದರೆ, ಈ ದೃಶ್ಯ ಪ್ರಪಂಚಕ್ಕೆ ಆಧಾರವಾದ ಆತ್ಮ ಸ್ವರೂಪ ನಾನು" ಎನ್ನುವ ಅವಗಾಹನೆ ಬಂದ ನಂತರ, ಆತ್ಮ ಪರಿಣಿತಿಯನ್ನು ಮೀರಿದ ಶ್ರೇಯಸ್ಸು ಇನ್ನೇನಿರುತ್ತದೆ.?! ಆದ್ದರಿಂದ ಅಲ್ಲಿಂದ ವರ್ತಮಾನ ಆಧ್ಯಾತ್ಮಿಕ ಜೀವನಕ್ಕೆ ಅಷ್ಟಾಗಿ ಉಪಯೋಗಿಸದ ಬೌತಿಕ ಜೀವನ ಕೋರಿಕೆಗಳು ನಮಗೆ ನೆರವೇರುವುದಿಲ್ಲ. ಯಾವುದು ಲಭಿಸಿದರೆ, ನಮ್ಮ ಆಧ್ಯಾತ್ಮಿಕ ಅಭಿವೃದ್ಧಿಗೆ ನೆರವಾಗುವುದೋ ಅಂತಹವು ಮಾತ್ರವೇ ನಮ್ಮವು ಆಗುತ್ತದೆ.

ಇನ್ನು ಮುಂದೆ ಸಾಗಿ ಅತ್ಯಂತ ಆಳವಾದ ಮೂರನೆಯ ಸತ್ಯ ಸಿದ್ಧಾಂತವನ್ನು ತಿಳಿದುಕೊಳ್ಳೋಣ

"ನಮ್ಮ ಅಗತ್ಯತೆಗಳು ತೀರದೇ ಹೋಗಬಹುದು...ನಮ್ಮ ಮೂಲಕ, ಸಮಾಜ ಪ್ರಗತಿಗೆ ಯಾವ ಅಗತ್ಯತೆಗಳು ಇದೆಯೋ ಅವು ಮಾತ್ರ ನಮಗೆ ತಪ್ಪದೆ ಲಭಿಸುತ್ತದೆ"

ಒಬ್ಬ ಧ್ಯಾನಿಯಾಗಿ ಒಬ್ಬ ಯೋಗಿಯಾಗಿ ತನ್ನ ಜೀವನ ವೈಚಿತ್ರವನ್ನು ಅಂತರಂಗದಲ್ಲಿ ನಿಕ್ಷಿಪ್ತಗೊಳಿಸಿಕೊಂಡಿರುವ ಒಬ್ಬ ಆತ್ಮಜ್ಞಾನಿಗೆ ಯಾವ ಭೌತಿಕ, ಆಧ್ಯಾತ್ಮಿಕ ಅಗತ್ಯಗಳಾದರೂ ಪ್ರತ್ಯೇಕವಾಗಿ ಏನಿರುತ್ತದೆ!? ತನ್ನಲ್ಲಿನ ಬ್ರಹ್ಮ ಪದಾರ್ಥವೇ ಸಕಲ ಜೀವರಾಶಿಯಲ್ಲೂ ಸ್ಥಿತವಾಗಿರುವಂತೆ ಭಾವಿಸುತ್ತಿರುವ ಬ್ರಹ್ಮ ಜ್ಞಾನಿಗೆ ಪರಿಣಿತಿ ಎನ್ನುವುದು ಬೇರೆಯಾಗಿ ಇರುವುದಿಲ್ಲ?!


ಆದ್ದರಿಂದ ತನ್ನ ವಾತಾವರಣವನ್ನು ಸಮಾಜವನ್ನು ಎಲ್ಲಾ ವಿಧಗಳಲ್ಲಿ ಉದ್ಧರಿಸುವ ಕಾರ್ಯಕ್ರಮದಲ್ಲಿ ಆತನು ಅಂಕಿತ ಭಾವದೊಂದಿಗೆ ಮುಳುಗಿರುತ್ತಾನೆ. ನನ್ನ ಮೂಲಕ ಏನು ನಡೆದರೆ ಅದು ಸಮಾಜ ಪ್ರಗತಿಗೆ ನೆರವಾಗುವುದು, ಅದು ಮಾತ್ರವೇ ನನಗೆ ಲಭಿಸುತ್ತದೆ ಎನ್ನುವ ಸತ್ ಸ್ಫೂರ್ತಿಯಿಂದ ಇರುತ್ತಾನೆ.

**– ಬ್ರಹ್ಮರ್ಷಿ ಪತ್ರೀಜಿ**


**ಶ್ರೀ ರಾಮಧಾಮ ಧ್ಯಾನಕೇಂದ್ರದಲ್ಲಿ**

## ಆತ್ಮಜ್ಞಾನ ಶಿಕ್ಷಣ ಶಿಬಿರ ಕಾರ್ಯಕ್ರಮಗಳು

* ಪ್ರತಿ ಸೋಮವಾರ ಸಂಜೆ 6.30 ರಿಂದ 8.30 ರವರೆಗೆ ಧ್ಯಾನ ತರಗತಿಗಳು ನಡೆಯುತ್ತವೆ.
* ಹುಣ್ಣಿಮೆ ಹಾಗೂ ಅಮಾವಾಸ್ಯೆ ಧ್ಯಾನ
* ಪ್ರತಿ ಆರು ತಿಂಗಳಿಗೊಮ್ಮೆ ಆತ್ಮಜ್ಞಾನ ಶಿಕ್ಷಣ ಶಿಬಿರ ಉಚಿತವಾಗಿ ನಡೆಯುತ್ತದೆ ಇದರ ವಿವರಗಳನ್ನು ಧ್ಯಾನ ಕಸ್ತೂರಿಯಲ್ಲಿ ಹಾಗೂ ಪಿಎಂಸಿ ಕನ್ನಡ ಚಾನೆಲ್‌ನಲ್ಲಿ ಪ್ರಕಟಿಸಲಾಗುವುದು.



“ಮೈತ್ರಿಯ ಧ್ಯಾನವನ್ನು ಅಭಿವೃದ್ಧಿಗೊಳಿಸು,
ಇದರಿಂದಾಗಿ ದ್ವೇಷವು ಅಂತ್ಯವಾಗುತ್ತದೆ.
ಕರುಣಾ ಧ್ಯಾನವನ್ನು ಅಭಿವೃದ್ಧಿಗೊಳಿಸು,
ಇದರಿಂದಾಗಿ ಕ್ರೌರ್ಯವು ಅಂತ್ಯವಾಗುತ್ತದೆ.
ಮುದಿತಾ ಧ್ಯಾನವನ್ನು ಅಭಿವೃದ್ಧಿಗೊಳಿಸು,
ಇದರಿಂದಾಗಿ ಅಸೂಯೆ ಅಂತ್ಯವಾಗುತ್ತದೆ.
ಉಪೇಕ್ಷಾ ಧ್ಯಾನವನ್ನು ಅಭಿವೃದ್ಧಿಗೊಳಿಸು,
ಇದರಿಂದಾಗಿ ಪ್ರಿಯ, ಅಪ್ರಿಯ ಭಾವ ಅಂತ್ಯವಾಗುತ್ತದೆ.
ಅಶುಭಾಧ್ಯಾನವನ್ನು ಅಭಿವೃದ್ಧಿಗೊಳಿಸು,
ಇದರಿಂದಾಗಿ ಸುಂದರತೆಯ ಭಾವ ಅಂತ್ಯವಾಗುತ್ತದೆ.
ಅನಿತ್ಯ ಧ್ಯಾನವನ್ನು ಅಭಿವೃದ್ಧಿಗೊಳಿಸು,
ಇದರಿಂದಾಗಿ ನಾನು ಎಂಬ ಅಹಂ ಅಂತ್ಯವಾಗುತ್ತದೆ.
ಅನಾಪಾನಾಸತಿ ಧ್ಯಾನವನ್ನು ಅಭಿವೃದ್ಧಿಗೊಳಿಸು,
ಇದರಿಂದಾಗಿ ಜ್ಞಾನ ದೊರೆಯುತ್ತದೆ,
ಜ್ಞಾನದಿಂದ ಮುಕ್ತಿ ಸಿಗುತ್ತದೆ.”

- ಭಗವಾನ್ ಬುದ್ಧ

# ಶ್ರೀ ರಾಮಧಾಮ ಧ್ಯಾನಕೇಂದ್ರ

**ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು–560 066.**
**ಸಂಪರ್ಕಿಸಿ : ಹೆಚ್. ಎನ್. ಶ್ರೀನಿವಾಸ, 9449695503**
**ವಿಜಯಲಕ್ಷ್ಮೀ ಎಸ್.ಎನ್. 80500 82689**

## ಶ್ರೀ ರಾಮ ಪಬ್ಲಿಕೇಶನ್ಸ್‌ನಲ್ಲಿ ದೊರೆಯುವ ಪುಸ್ತಕಗಳು

| | | |
|---|---|---|
| 1. | ಅಹಿಂಸೆ & ಶಾಖಾಹಾರ | ರೂ. 20 |
| 2. | ನವವಿಧ ಧರ್ಮಗಳು | ರೂ. 40 |
| 3. | ಸಸ್ಯಾಹಾರವೇ ಮಾನವಾಹಾರ | ರೂ. 20 |
| 4. | ಧ್ಯಾನ | ರೂ. 60 |
| 5. | ವಿದ್ಯಾರ್ಥಿಗಳ ವಿಕಾಸಕ್ಕೆ ಧ್ಯಾನ ವಿದ್ಯೆ | ರೂ. 30 |
| 6. | ಭಾಗವತ ಸನ್ನಿವೇಶಗಳ ಅಂತರಾರ್ಥ | ರೂ. 30 |
| 7. | ಶಿರಿಡಿ ಸಾಯಿ ಸಂದೇಶಗಳು | ರೂ. 30 |
| 8. | ಪ್ರಾಣ ಶಕ್ತಿ | ರೂ. 100 |
| 9. | ಜೀವನದ ಸೂಕ್ಷ್ಮಗಳು | ರೂ. 60 |
| 10. | ವಿದ್ಯಾರ್ಥಿ ಜೀವನ ಕ್ರಾಂತಿ | ರೂ. 40 |
| 11. | ಸಂಘಂ ಶರಣಂ ಗಚ್ಛಾಮಿ | ರೂ. 300 |
| 12. | ತುಳಸಿ ದಳ (I) | ರೂ. 200 |
| 13. | ತುಳಸಿ ದಳ (ii) | ರೂ. 220 |
| 14. | ಆಶ್ಚರ್ಯ....ಆಶ್ಚರ್ಯ | ರೂ. 40 |
| 15. | ದುಃಖ ನಿವಾರಣೆಯ ಮಾರ್ಗ | ರೂ. 70 |
| 16. | ಧ್ಯಾನದಿಂದಲೇ ಜ್ಞಾನ | ರೂ. 70 |
| 17. | ಬ್ರಹ್ಮಜ್ಞಾನ | ರೂ. 70 |
| 18. | ಜ್ಞಾನ ಜ್ಯೋತಿ | ರೂ. 90 |
| 19. | ಗೈಡಿಂಗ್ | ರೂ. 100 |
| 20. | ಸಂಕಲ್ಪವೆಂದರೇನು? | ರೂ. 50 |
| 21. | ಕರ್ಮ ಸಿದ್ಧಾಂತ | ರೂ. 70 |
| 22. | ಜ್ಞಾನ ಕುಸುಮಗಳು | ರೂ. 90 |
| 23. | ಆಲೋಚನಾ ಶಕ್ತಿ | ರೂ. 40 |
| 24. | ಆತ್ಮವಿಜ್ಞಾನ ಮತ್ತು ಮೃತ್ಯುವೇ ಇಲ್ಲ | ರೂ. 40 |
| 25. | ಆಧ್ಯಾತ್ಮಿಕ ಶಾಸ್ತ್ರ | ರೂ. 40 |
| 26. | ಭಕ್ತಿ ಮುಕ್ತಿ | ರೂ. 30 |
| 27. | ಧ್ಯಾನ ತರಂಗ | ರೂ. 40 |
| 28. | ಜ್ಞಾನ ಯುಗ | ರೂ. 60 |
| 29. | ಸೇತು ವಿಜ್ಞಾನ | ರೂ. 40 |
| 30. | ಮರಣಿಸುವ ಮುಂಚೆಯೇ ಮರಣಿಸಬೇಕು | ರೂ. 130 |
| 31. | ಅತೀಂದ್ರಿಯ ಶಕ್ತಿಗಳು | ರೂ. 40 |
| 32. | ನಾವು ಇಹಲೋಕ ವಾಸಿಗಳಾ? ಪರಲೋಕ ವಾಸಿಗಳಾ? | ರೂ. 40 |
| 33. | ಆಲೋಚಿಸಿ | ರೂ. 70 |
| 34. | ನಿರ್ವಾಣ ಮಾರ್ಗ | ರೂ. 60 |
| 35. | ಸತ್ಯ | ರೂ. 40 |
| 36. | ಆರ್ಥಿಕ ಪರಿಸ್ಥಿತಿ | ರೂ. 40 |
| 37. | ಚಕ್ರಗಳು | ರೂ. 30 |
| 38. | ಭೂತದಯೆ ಮತ್ತು ದೈವತ್ವ | ರೂ. 80 |

# “ಧ್ಯಾನ ಮಾಡುವ ವಿಧಾನ”

**ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..**
**ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..**
**ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..**
**ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!**

## ಧ್ಯಾನವನ್ನು ಯಾರಾದರೂ ಮಾಡಬಹುದು
## ಯಾವ ವಯಸ್ಸಿನವರಾದರೂ ಮಾಡಬಹುದು
## ಯಾವ ಸಮಯದಲ್ಲಿಯಾದರೂ ಮಾಡಬಹುದು
## ಯಾವ ಸ್ಥಳದಲ್ಲಿಯಾದರೂ ಮಾಡಬಹುದು.

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.

**ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಚಂದಾದಾರರಾಗಲು ಬ್ಯಾಂಕ್ ಖಾತೆಗೆ ಹಣ ಪಾವತಿಸಿ ಚಂದಾದಾರರಾಗಬಹುದು**

**ಬ್ಯಾಂಕ್ ಹೆಸರು : ಭಾರತೀಯ ಸ್ಟೇಟ್ ಬ್ಯಾಂಕ್ – State Bank of India**
**ಶಾಖೆಯ ಹೆಸರು : ಚಾಮರಾಜಪೇಟೆ ಶಾಖೆ – Chamarajapete Branch**
**ಖಾತೆ ಸಂಖ್ಯೆ : 30828057680 : I.F.S.C. ಕೋಡ್ – S.B.I.N 0005794**
**ಖಾತೆಯ ಹೆಸರು : ಕೆ.ಪಿ.ಡಿ.ಪಿ. ಟ್ರಸ್ಟ್–ಅಕೌಂಟ್–ಧ್ಯಾನ ಕಸ್ತೂರಿ – K.P.D.P. Trust A/c. Dhayana Kasturi**

ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಆನ್‌ಲೈನ್‌ನಲ್ಲಿಯೇ ಚಂದಾದಾರರಾಗಬಹುದು.
ಕನ್ನಡ ಆಧ್ಯಾತ್ಮಿಕ ಪುಸ್ತಕಗಳನ್ನು ಆನ್‌ಲೈನ್‌ನಲ್ಲಿಯೇ ಖರೀದಿಸಬಹುದು. ಇದಕ್ಕಾಗಿ
ನಿಮ್ಮ ಮೊಬೈಲ್ ಬಳಸಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ,
ನಂತರ ಕಾಣಿಸಿಕೊಳ್ಳುವ ಲಿಂಕ್ ಅನ್ನು ಕ್ಲಿಕ್ ಮಾಡಿ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
**ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ)**
# 1534/1, ಒಂದನೇ ಮಹಡಿ 26ನೇ ಮುಖ್ಯರಸ್ತೆ, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಹತ್ತಿರ
9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069
**ವಾಟ್ಸಾಪ್ ಅಥವಾ ಕರೆಮಾಡಿ : 9448883872; 9901598073**



“ಧ್ಯಾನಸ್ಥಿತಿಯಿಂದ ಸಮಾಧಿಸ್ಥಿತಿಗೆ ಅಥವಾ
ಶೂನ್ಯಸ್ಥಿತಿಗೆ ಸೇರಿಕೊಳ್ಳಬೇಕೆಂದರೆ
ಸಾಧನೆಯಿಂದಲೇ ಸಾಧ್ಯ. ಒಂದೊಂದು ಸಾರಿ
ಕಠಿಣ ಸಾಧನೆ ಕೂಡಾ ಅಗತ್ಯ.
ಎಷ್ಟು ಧ್ಯಾನ ಸಾಧನೆಗಳಿದ್ದರೂ
ಸರಿಯಾದ ಸಾಧನೆಯೆಂದರೆ ನಮ್ಮಲ್ಲಿರುವ
”ಶ್ವಾಸವನ್ನು ಗಮನಿಸುವುದೇ”.

- ಭಗವಾನ್ ಬುದ್ಧ



ನೀವು ಜಗತ್ತಿನಲ್ಲಿ ಮನುಷ್ಯರನ್ನು ಗಮನಿಸಿದರೆ, ಬಹತೇಕ ಜನರು ಸಾಮಾನ್ಯವಾಗಿ ಮಾಡುವ ಕೆಲಸಗಳು, ಮೂರು...ಅವು ಯಾವುವೆಂದರೆ

೧. ಇದನ್ನು ಹಿಂದಿನಿಂದಲೂ ಮತ್ತು ತಲೆಮಾರುಗಳಿಂದಲೂ ರೂಢಿಯಾಗಿ ಮಾಡಲಾಗುತ್ತಿದೆ. ನಾವು ಅದನ್ನೇ ಮಾಡಬೇಕೆಂದು ಮಾಡುವುದು.

೨. ಪ್ರತಿಯೊಬ್ಬರೂ ಅದನ್ನು ಮಾಡುತ್ತಿದ್ದಾರೆ ಎಂದು ಮಾಡುವುದು.

೩. ಯಾರೋ ಹೇಳಿದ್ದಾರೆ ಎಂದು ಮಾಡುವುದು.

ಆದರೆ ಯಾರೂ ಅದರ ಬಗ್ಗೆ ಯೋಚಿಸುತ್ತಿಲ್ಲ. ಮನುಷ್ಯರು ಇತರರನ್ನು ಯಾವುದೇ ರೀತಿಯಲ್ಲಿ ಅನುಕರಿಸುತ್ತಾರೆ. ಆದರೆ ಇದನ್ನು ತಮಗೆ ತಾವೇ ಗಮನಿಸಿದರೆ, ಮಾತ್ರ ತಿಳಿಯುತ್ತದೆ. ಇದಲ್ಲದೆ, ತಾವು ಮಾಡಲೇಬೇಕಾದ ಕೆಲಸಗಳು ಮತ್ತು ಮಾಡುತ್ತಿರುವ ಕೆಲಸಗಳ ಬಗ್ಗೆ ಯೋಚಿಸುವುದಿಲ್ಲ. ಇದು ಮಾನವನ ದುಃಖಕ್ಕೆ ಕಾರಣವಾಗಿದೆ. ಮನುಷ್ಯರು ಯೋಚಿಸಬೇಕಾದ ಕೆಲವು ವಿಷಯಗಳನ್ನು ಈ ಪುಸ್ತಕದ ಮೂಲಕ ನೀಡಲಾಗಿದೆ. ಅವುಗಳನ್ನು ಓದಿ ಮತ್ತು ಅವುಗಳ ಬಗ್ಗೆ ಯೋಚಿಸಿ. ಜೀವನವನ್ನು ಆನಂದಮಯವಾಗಿಸಿಕೊಳ್ಳಿ.

ರೂ 50/-

ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ
ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ
https: //www.youtube.com/pmckannada ● www.meditationeverywhere.org ● www.pssmovement.org

ಶ್ರೀರಾಮ ಪಬ್ಲಿಕೇಶನ್ಸ್
ಶ್ರೀರಾಮಧಾಮ ಧ್ಯಾನಕೇಂದ್ರ, ನಾರಾಯಣಪ್ಪ ಗಾರ್ಡನ್,
ವೈಟ್ ಫೀಲ್ಡ್, ಬೆಂಗಳೂರು - 560 066
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ, 9449695503
ವಿಜಯಲಕ್ಷ್ಮಿ ಎಸ್.ಎನ್. + 91 80500 82689